# ಆರ್ಯಧರ್ಮ

## 19ನೆಯ ಶತಮಾನದ ಪಂಜಾಬಿನಲ್ಲಿ ಪ್ರಚಲಿತವಾಗಿದ್ದ ಹಿಂದೂ ಪ್ರಜ್ಞೆ

**ಮೂಲ: ಕೆನ್ನೆತ್‌ಡಬ್ಲ್ಯೂಜೋನ್ಸ್**

**ಕನ್ನಡಕ್ಕೆ :ಡಾ. ವಿಶಾಲಾ ವಾರಣಾಶಿ**

## ಸಮುದಾಯದ ಸೇವೆಯಲ್ಲಿ

## ಆಂಗ್ಲೀಕರಣವಾಗಿಆರ್ಯ ಸಮಾಜ

"ವೇದಗಳನ್ನು ತಿಳಿಯದೆ, ವೇದಗಳ ಅರ್ಥವನ್ನು ತಿಳಿಯದೆ ಯಾರೊಬ್ಬರೂ ದೇವರು, ಧರ್ಮ ಮತ್ತು ವಿಜ್ಞಾನಗಳನ್ನು ತಿಳಿಯಲಾರರು. ಯಾಕೆಂದರೆ ವೇದಗಳು ಎಲ್ಲ ಬಗೆಯ ವಿಜ್ಞಾನಗಳಿಗೆ ಮೂಲವಾಗಿದೆ. ವೇದಗಳನ್ನು ತಿಳಿದುಕೊಳ್ಳದೆ ಯಾರೂ ಕೂಡ ನಿಜವಾದ ಜ್ಞಾನವನ್ನು ಪಡೆಯಲಾರರು. ಸತ್ಯದ ಬೆಳಕು ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಬೆಳಗಿದೆಯೋ ಅದೆಲ್ಲವೂ ವೇದಗಳಿಂದ ಹೊಳೆದದ್ದೇ ಆಗಿದೆ. ಈ ಕಾರಣದಿಂದ, ಎಲ್ಲರೂ ವೇದಗಳನ್ನು ಕಲಿತುಅದರಅರ್ಥವನ್ನು ತಿಳಿಯುವ ಪ್ರಯತ್ನದಲ್ಲಿತೊಡಗಬೇಕು."- **ಸ್ವಾಮಿದಯಾನಂದ ಸರಸ್ವತಿ.**

## ಶಿಕ್ಷಣ :ಎರಡು ಅಲಗಿನ ಕತ್ತಿ

1883, ಅಕ್ಟೋಬರ್ 30 ರಂದುಅಜ್‌ಮೀರಿನ ಭಿನಾಯ್ ಹೌಸ್‌ನಲ್ಲಿ ಸ್ವಾಮಿದಯಾನಂದ ಸರಸ್ವತಿಯವರು ತೀರಿಕೊಂಡರು.ಆರ್ಯ ಸಮಾಜ ಚಳುವಳಿಯ ಕೇಂದ್ರ ವ್ಯಕ್ತಿಯಾದ ಅವರ ಸಾವಿನಿಂದ ಎಲ್ಲ ಆರ್ಯ ಸಮಾಜದ ಅನುಯಾಯಿಗಳಿಗೆ ಗುರುವಿಲ್ಲದಂತಾಯಿತು. ದಯಾನಂದ ಸರಸ್ವತಿಯವರ ಸ್ಥಾನವನ್ನು ತುಂಬಿ, ಅವರ ವಿಚಾರಧಾರೆಯನ್ನು ಮುಂದುವರೆಸುವ ಯಾವ ಅನುಭಾವಿಕ ವಾರಸುದಾರನೂ ಬರಲಿಲ್ಲ. ದಯಾನಂದ ಸರಸ್ವತಿಯವರ ಸಿದ್ಧಾಂತಗಳನ್ನು ಮರುವ್ಯಾಖ್ಯಾನಿಸುವ ಬುದ್ಧಿವಂತರು ಕಾಣಸಿಗಲಿಲ್ಲ. ಅಚ್ಚುಕಟ್ಟಾಗಿ ಹಾಗೂ ಅಧಿಕೃತವಾಗಿ ಅವರ ವಿಚಾರಧಾರೆಯನ್ನು ಘೋಷಿಸುವ ಒಂದು ಸಾಂಸ್ಥಿಕ ರಚನೆಯೂ ಆಗಲಿಲ್ಲ. ಅವರ ಅನುಯಾಯಿಗಳಿಗೆ ಉಳಿದದ್ದು ದಯಾನಂದರ ವೈವಿಧ್ಯಮಯ ಬರವಣಿಗೆಗಳು ಮಾತ್ರ. ಪ್ರತಿಯೊಂದು ಸಮಾಜವೂ (ಅಂದರೆ ಬೇರೆ ಬೇರೆ ಪ್ರಾಂತ್ಯಗಳ ಆರ್ಯಸಮಾಜ ಸಂಸ್ಥೆಗಳು) ಮತ್ತು ಪ್ರತಿಯೊಬ್ಬ ಆರ್ಯನೂ (ಅಂದರೆ ಆರ್ಯ ಸಮಾಜದ ಸದಸ್ಯ) ತಮ್ಮದೇ ಆದ ರೀತಿಯಲ್ಲಿ ಅವರ ಬರವಣಿಗೆಯನ್ನು ವ್ಯಾಖ್ಯಾನಿಸುವಷ್ಟು ಅವು ಮುಕ್ತವಾಗಿದ್ದವು.. ಹೀಗೆ ಅವರ ವಿಚಾರಧಾರೆಯಲ್ಲಾದ ಅರಾಜಕತೆಯನ್ನು ನಿಯಂತ್ರಿಸುವ ಹಾಗೂ ಸಂಯೋಜಿಸುವ ಯಾವುದೇ ಅಂಗ ಸಂಸ್ಥೆ ಹುಟ್ಟಿ ಬೆಳೆಯಲಿಲ್ಲ. ಪ್ರತಿ ಪ್ರಾಂತ್ಯದ ಆರ್ಯ ಸಮಾಜವೂ ತನಗೆ ತಿಳಿದಂತೆ, ಮುನ್ನಡೆಯುವ ಹಾಗು ನಂಬುವ ಸ್ವಾತಂತ್ರ್ಯವಿತ್ತು. ಹಾಗೆಂದ

ಮಾತ್ರಕ್ಕೆ ಎಲ್ಲವೂ ಮುರಿದು ಬಿದ್ದಿರಲಿಲ್ಲ. ಸಮಾಜದ ಗುರಿ ಮತ್ತು ನಂಬಿಕೆಗಳ ಬಗ್ಗೆ ಒಂದು ಸ್ಥೂಲವಾದ ಒಮ್ಮತ ಇದ್ದೇ ಇತ್ತು. ದಯಾನಂದರ ಸಾವು ಒಂದು ಹೊಸ ಪ್ರಚೋದನೆಯನ್ನು ಹಾಗೂ ಕ್ರಿಯಾಶೀಲತೆಯನ್ನು ತಂದಿತೆಂದು ಹೇಳಬಹುದು. ತಮ್ಮ ಜೀವಿತಾವಧಿಯ ಕೊನೆಗಾಲಕ್ಕಿಂತಲೂ ತಮ್ಮ ಸಾವಿನ ನಂತರ ದಯಾನಂದರು ಹೆಚ್ಚು ಮುಕ್ತವಾಗಿ ಸ್ಫೂರ್ತಿದಾಯಕ ವ್ಯಕ್ತಿಯಾಗಿ ಹೊರಹೊಮ್ಮಿದರು. ಆರ್ಯ ಸಮಾಜಿಗಳಿಗೆ ತೋರಿಸುವ ಗೌರವ ಹಾಗೂ ಪೂಜ್ಯನೀಯತೆಯ ಸಂಕೇತವಾಗಿ ಉಳಿದುಕೊಂಡೇ, ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ ದಯಾನಂದರನ್ನು ಹಾಗೂ ಅವರ ಬರವಣಿಗೆಗಳನ್ನೂ ಮರು ವಾಖ್ಯಾನಗೊಳಿಸಬಹುದಿತ್ತು. ಆರ್ಯ ಸಿದ್ಧಂತದ ರೂವಾರಿಯ ಪ್ರಭಾವದ ನೆರಳಿನಿಂದ ದೂರ ಉಳಿದು, ಆರ್ಯ ಸಮಾಜದ ನಾಯಕತ್ವ ಪ್ರಾಂತೀಯ ಹಾಗೂ ಸ್ಥಳಿಯ ನೆಲೆಯಲ್ಲಿ ಕಾರ್ಯನಿರ್ವಹಿಸುವಂತಾಯಿತು.

ದಯಾನಂದ ಸರಸ್ವತಿಯವರ ಸಾವಿಗೆ ಎಲ್ಲ ಆರ್ಯ ಸಮಾಜಿಗಳ ಪ್ರತಿಕ್ರಿಯೆ ಹೆಚ್ಚು ಕಡಿಮೆ ಒಂದೇ ರೀತಿಯದ್ದಾಗಿತ್ತು. ಶ್ರದ್ಧಾಂಜಲಿ ಸಭೆಯ ಬಳಿಕ ನಡೆದ ಮೀಟಿಂಗಿನಲ್ಲಿ ಮಾತನಾಡಿದವರು ದಯಾನಂದ ಸರಸ್ವತಿಯವರ ನೆನಪಿಗಾಗಿ ಶಾಲೆ ಅಥವಾ ಕಾಲೇಜೊಂದನ್ನು ಕಟ್ಟಬೇಕು ಎಂಬುದಾಗಿ ಆಗ್ರಹ ಮಾಡಿದರು. ಲಾಹೋರಿನಲ್ಲಿ, ಫಿರೋಜ್ಪುರದಲ್ಲಿ ಮತ್ತು ಮುಲ್ತಾನ್‌ನಲ್ಲಿ ನಡೆದ ಶ್ರದ್ಧಾಂಜಲಿ ಸಭೆಗಳಲ್ಲಿ "ದಯಾನಂದಕಾಲೇಜಿನ ಸ್ಥಾಪನೆಗಾಗಿ ನಿರ್ಣಯಗಳನ್ನು ಪಾಸು ಮಾಡಲಾಯಿತು.[1] ಮುಂದೆ ಬರಲಿರುವ ಈ ಕಾಲೇಜಿನಲ್ಲಿ ಉಳಿದ ವಿಷಯಗಳ ಜೊತೆಗೆ ವೇದಗಳನ್ನೂ ಹೇಳಿ ಕೊಡಬಹುದೆಂದೂ ನಿರ್ಣಯಿಸಲಾಯಿತು. [2] ಇಂತಹ ಕಾಲೇಜೊಂದನ್ನು ಸ್ಥಾಪಿಸುವುದು ಬಹಳ ಕಷ್ಟಸಾಧ್ಯವಾದ, ನಂಬಲು ಸಾಧ್ಯವಾಗದ ವಿಚಾರ ಎಂದು ಅನಿಸುತ್ತಿತ್ತಾದರೂ ಮುಸ್ಲಿಮರು ಅದಾಗಲೇ ತಮ್ಮದೇ ಕಾಲೇಜೊಂದನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಗಿದ್ದರು. ಆದ್ದರಿಂದ ಆರ್ಯರಿಂದ ಇದು ಯಾಕೆ ಸಾಧ್ಯವಾಗದು? "ಶ್ರಮ ಮತ್ತು ಶ್ರದ್ಧೆ ಇದ್ದರೆಎಲ್ಲ ಬಗೆಯ ಕಷ್ಟಗಳೂ ಪರಿಹಾರವಾಗಬಲ್ಲವು. ಮೌಲ್ವಿ ಸೈಯದ್ ಅಹಮದ್‌ಖಾನ್ ಅವರನ್ನೇ ನೋಡಿ. ಅಲಿಘರ್ ಕಾಲೇಜನ್ನು ಅವರು ಏಕಾಂಗಿಯಾಗಿ ಕಟ್ಟಲಿಲ್ಲವೇ" ?. ಲಾಲಾ ಜೀವನ್‌ದಾಸ್ ಮತ್ತು ಪಂಡಿತ್ ಗುರುದತ್ತ ಅಜ್ಮೇರಿನಿಂದ ಹಿಂತಿರುಗುವುದರೊಂದಿಗೆ ಆರ್ಯರ ಭಾವನೆಗಳು ಗರಿಗೆದರಿದವು. ದಯಾನಂದರ ಕೊನೆಯ ದಿನಗಳಲ್ಲಿ ಅವರಿಬ್ಬರೂ ಗುರುಗಳ ಜೊತೆಯಲ್ಲೇ ಇದ್ದರು. ಲಾಹೋರ್ ಸಮಾಜದಲ್ಲಿ ನವೆಂಬರ್ 8 ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅವರಿಬ್ಬರು ಗುರುಗಳ ಜೀವನದ ಕೊನೆಯ ಕ್ಷಣಗಳ ವಿವರಗಳನ್ನು ಸಭೆಯ ಜನರ ಜೊತೆ ಹಂಚಿಕೊಂಡರು. ಹಾಗೆಯೇ ತಮ್ಮ ನಾಟಕೀಯವಾದ ಮತ್ತು ಹೃದಯ ಕಲಕುವ ಕತೆಗಳನ್ನು ನಿಧಿ ಸಂಗ್ರಹದ

---

[1] Dayanand Anglo Vedic College Society, First Annual Report of the Dayanand Anglo Vedic College Society for the year 1886-87 (Lahore: Public Advocate Press n.d.) p. 3, (hereinafter, College Report 1886-87)

[2] Quotes given below from Regenerator of Arya Varta Vol. I No. 7, November 5, 1883 pp 4-5

ಕರೆಯೊಂದಿಗೆ ಮುಕ್ತಾಯ ಮಾಡಿದರು. ನೆರೆದಿದ್ದ ಜನರೂ ಬಹಳ ಉತ್ಸಾಹದಿಂದ ಪ್ರತಿಕ್ರಿಯಿಸಿದರು. "ಅಲ್ಲಿ ನೆರೆದ ಪ್ರತಿಯೊಬ್ಬರೂ ಈ ಕರೆಗೆ ಓಗೊಟ್ಟರು. ಹಿರಿಯರು, ಕಿರಿಯರೆನ್ನದೆ ಎಲ್ಲರೂ ತಮ್ಮ ಶಕ್ತ್ಯನುಸಾರ ದೇಣಿಗೆಕೊಟ್ಟರು. ಒಂದು ತುತ್ತು ಊಟಕ್ಕೂ ಕಷ್ಟವಿರುವ ಅಂಗಡಿ ಇಟ್ಟುಕೊಂಡಿದ್ದ ಕೆಲವು ಬಡವರು ಕೂಡ ಮುನ್ನುಗ್ಗಿ ಬಂದು ತಮಗೆ ಸಾಧ್ಯವಿದ್ದಷ್ಟು ಧನ ಸಹಾಯ ಮಾಡಿದರು".[3] ಹೀಗೆ ಆರ್ಯರು ಈ ಒಂದು ಮೀಟಿಂಗಿನಲ್ಲಿ 7000 ರೂಪಾಯಿಗಳನ್ನು ಸಂಗ್ರಹಿಸಿದರು. ಇದೇ ಸಂದರ್ಭದಲ್ಲಿ "ದಯಾನಂದ್ ಆಂಗ್ಲೋ ವೇದಿಕ್ ಕಾಲೇಜ್" ಅನ್ನು ಸ್ಥಾಪಿಸುವ ಒಂದು ಅಧಿಸೂಚನೆಯನ್ನು ವಿಧ್ಯುಕ್ತವಾಗಿ ಸ್ವೀಕರಿಸಲಾಯಿತು. ಹಾಗೆಯೇ ಹೊಸ ಗುರಿ ಮತ್ತು ಹೊಸ ಭವಿಷ್ಯದ ಉತ್ಸಾಹದೊಂದಿಗೆ ಸಭೆ ಮುಕ್ತಾಯವಾಯಿತು.

ಇಂಗ್ಲಿಷ್ ವಿದ್ಯಾಭ್ಯಾಸದ ಹೊಸ ಜ್ಞಾನ ಪ್ರಪಂಚ ಮತ್ತು ವೇದಗಳ ಸತ್ಯದ ಸಾಕ್ಷಾತ್ಕಾರ ಎರಡೂ ಸೇರಿದ ಶಾಲೆಯ ಪರಿಕಲ್ಪನೆ ಅತ್ಯುತ್ತಮವಾದದ್ದನ್ನು ನೀಡುವ ಅವಕಾಶವಾಗಿ ಕಂಡಿತು. ಇದರಲ್ಲಿ ಅವಕಾಶ ಮತ್ತು ಸುರಕ್ಷೆ ಎರಡೂ ಇದೆ ಎಂಬ ಭಾವನೆ ಬಂತು. ಸ್ವತಃ ದಯಾನಂದರೇ ಶಾಲೆಗಳಲ್ಲಿ ಸುಧಾರಿತ ಹಿಂದೂ ತತ್ವಗಳನ್ನು ಬೋಧಿಸುವ ಪ್ರಯತ್ನ ಮಾಡಿದ್ದರು. ಅವು ಯಶಸ್ವಿಯಾಗಿರಲಿಲ್ಲ. ಅಷ್ಟೇ ಅಲ್ಲದೆ ಹಲವಾರು ಆರ್ಯ ಸಮಾಜಿಗಳು ಪಂಜಾಬಿನಲ್ಲಿ ಸಣ್ಣ ಸಣ್ಣ ಶಾಲೆಗಳನ್ನು ನಡೆಸುವ ಪ್ರಯತ್ನಗಳನ್ನು ಮಾಡಿದ್ದರು. ಹಾಗಿದ್ದರೂ ಸರಿಯಾದ ಪ್ರಾಧ್ಯಾಪಕರನ್ನು ಹೊಂದಿದ, ಭಾರತೀಯರಿಂದಲೇ ನಡೆಸಲ್ಪಡುವ ಒಂದು ಕಾಲೇಜನ್ನು ಆರಂಭಿಸುವುದು ಬಹಳ ದೊಡ್ಡ ಕಾರ್ಯವಾಗಿ ಕಂಡಿತು. ಹೆದರಿಕೆ ಮತ್ತು ಆಶಾಭಾವನೆ, ಆರ್ಥಿಕ ಅವಕಾಶಗಳು ಮತ್ತು ಸಾಂಸ್ಕೃತಿಕ ತಲ್ಲಣಗಳು ಎಲ್ಲ ಸೇರಿಕೊಂಡಾಗ ಮಾತ್ರವೇ ಇಂತಹ ಗುರಿಗಳನ್ನು ಸಾಧಿಸಲು ಸಾಧ್ಯವೇನೋ. 1880ರ ಕಾಲದಿಂದಲೇ ಶಿಕ್ಷಣದ ಅಗತ್ಯವನ್ನು ಆರ್ಯ ಸಮಾಜಿಗಳು ಕಂಡುಕೊಳ್ಳ ತೊಡಗಿದ್ದರು. "ಆರ್ಯಾವರ್ತದ ಸಮತೆಯ ಉದ್ಯಾನ ಈಗ ಭೌತಿಕವಾದಿಗಳ, ನಾಸ್ತಿಕರ, ಪಂಥೀಯ ವಾದಿಗಳ, ಧರ್ಮದ್ರೋಹಿಗಳ ಮತ್ತು ನಂಬಿಕೆಗಳನ್ನೇ ಪ್ರಶ್ನೆ ಮಾಡುವ ಪಾಖಂಡಿಗಳಂತಹ ಕಳೆಗಳಿಂದ ತುಂಬಿ ಹೋಗಿರುವ ಸನ್ನಿವೇಶವು ವೇದ ಶಾಲೆಗಳ ಸಂಪೂರ್ಣ ಅಗತ್ಯದದ್ಯೋತಕವಾಗಿದೆ. ಪ್ರತಿದಿನವೂ ಈ ಅಗತ್ಯತೆ ನಮ್ಮಅನುಭವಕ್ಕೆ ಬರುತ್ತಿದೆ. ವೇದ ಶಾಲೆಗಳನ್ನು ಸ್ಥಾಪಿಸಿದರೆ ಆಗ ಬಾಲ್ಯ ವಿವಾಹಗಳು, ಅಕಾಲಿಕ ಮರಣಗಳು, ವಿಧವಾ ವಿವಾಹದ ಕುರಿತಾದ ನಿರ್ಬಂಧ, ದುಂದು ವೆಚ್ಚದ ವಿವಾಹಗಳು ಮುಂತಾದುವುಗಳಿಂದ ಹುಟ್ಟುವ ಎಲ್ಲ ಅನಿಷ್ಟಗಳನ್ನು ನಿವಾರಿಸಲು ಸಾಧ್ಯವಿತ್ತು. ನಮ್ಮ ಮಕ್ಕಳಿಗೆ ವೇದಗಳ ಜ್ಞಾನ ಇದ್ದಿದ್ದರೆ ಅವರು ಬೌದ್ಧ, ಕ್ರಿಶ್ಚಿಯನ್, ಇಸ್ಲಾಂ ಧರ್ಮಗಳ ಮೊರೆ ಹೋಗುತ್ತಿರಲಿಲ್ಲ. ಹಾಗೆಯೇ ಸ್ವೇಚ್ಛಾಚಾರ ಮತ್ತು ಕುಡಿತದ ಚಟ ಮುಂತಾದುವುಗಳಿಗೆ

[3] Regenerator of Arya Varta, November 12, 1883 p 5

ಬಲಿಯಾಗುತ್ತಿರಲಿಲ್ಲ."[4] ನಿಜವಾದ ಜ್ಞಾನ ಎಂದರೆ ಮೋಕ್ಷ-ವೈಯಕ್ತಿಕ ಹಾಗೂ ನಾಡಿನ ಎರಡು ನೆಲೆಗಳಲ್ಲಿ. ಮೋಕ್ಷ ಒದಗಿಸುವ ಈ ಜ್ಞಾನವನ್ನು ಶಿಕ್ಷಣ ಕೊಡುತ್ತದೆ. ಆದರೆ ಇದು ಪ್ರಸಿದ್ಧ ಪೂರ್ವಸೂರಿಯಾದ ಲೇಟ್ನರ್‌ನಂತಹ[i] ವಿದ್ವಾಂಸ 'ಹಳೆಯ ಶಾಸ್ತ್ರೀಯ ಭಾಷೆಗಳೆಲ್ಲವೂ ಮರುಹುಟ್ಟು ಪಡೆಯಲಿ' ಎಂದು ಬಯಸಿದಂತಹ ಅಸ್ಪಷ್ಟವಾದಿ ಶಿಕ್ಷಣ ಖಂಡಿತ ಅಲ್ಲ.

ಹೊಸ ಪ್ರಪಂಚದಲ್ಲಿ ಇಂಗ್ಲಿಷ್ ಶಿಕ್ಷಣಕ್ಕಿರುವ ಬೇಡಿಕೆಯನ್ನು ಆರ್ಯ ಸಮಾಜಿಗಳು ಗುರುತಿಸಿದ್ದರು. ಮತ್ತು ಈ ಶಿಕ್ಷಣ ಪುನರುಜ್ಜೀವನಗೊಂಡ ಹಿಂದುತ್ವದ ಒಂದು ಛಾಯೆಯೊಳಗೆ ಇರಬೇಕು ಎಂದು ಬಯಸಿದ್ದರು. ಇದು ಪಂಜಾಬಿ ತಂದೆ ತಾಯಿಗಳಿಗೆ ಒಂದು ಆದರ್ಶ ಶಿಕ್ಷಣದ ಸ್ಥಿತಿಗತಿಯನ್ನು ಒದಗಿಸುವಂತಿತ್ತು. "ಆಂಗ್ಲೋ ವೇದಿಕ್ ಶಾಲೆಗಳು, ಸರಕಾರಿ ಶಾಲೆಗಳು ಹಾಗೂ ಮಿಶನರಿ ಶಾಲೆಗಳು ಇವುಗಳ ಮಧ್ಯೆ ಇಂಗ್ಲಿಷ್ ಕಲಿಕೆಯ ದೃಷ್ಟಿಯಿಂದ ಜನ ಯಾವುದೇ ವ್ಯತ್ಯಾಸವನ್ನು ಕಾಣದಾಗ ಮತ್ತು ಇದೇ ಸಂದರ್ಭದಲ್ಲಿ ಆಂಗ್ಲೋ ವೇದಿಕ್ ಶಾಲೆಗಳಲ್ಲಿ ವೇದಗಳನ್ನು ಕಲಿಯುವ ಹೆಚ್ಚಿನ ಅನುಕೂಲವಿದೆ ಎಂಬುದನ್ನು ಗಮನಿಸಿದಾಗ, ವೇದಿಕ್ ಶಾಲೆಗಳು ಖಂಡಿತವಾಗಿಯೂ ಹುಡುಗರಿಂದ ತುಂಬುತ್ತವೆ. ಅಷ್ಟೇ ಅಲ್ಲ ಇದು ಆರ್ಯಾವರ್ತದ ಹುಡುಗರಿಗೆ ಬಹಳ ಒಳ್ಳೆಯದನ್ನೂ ಮಾಡುತ್ತದೆ. ಇಂತಹ ಹುಡುಗರು ಇಂಗ್ಲಿಷನ್ನು ಚೆನ್ನಾಗಿ ಕಲಿತಾಗ, ಇವರ ಇಂಗ್ಲಿಷ್ ಭಾಷೆಯು ಹೋಲಿಕೆಯ ಒಂದು ಮಾನದಂಡವೂ ಆದಾಗ, ಈ ಆರ್ಯ ಹುಡುಗರು ಆಧುನಿಕ ವಿಜ್ಞಾನವನ್ನು ತಿಳಿದುಕೊಳ್ಳುವುದಲ್ಲದೆ, ಇದು ಹುಡುಗರನ್ನು ಆಧುನಿಕ ಪ್ರಪಂಚದ ಅತ್ಯುತ್ತಮ ದೇಶಗಳ ರೀತಿ ನೀತಿಗಳಿಗೆ ಹಾಗೂ ವಿಚಾರಗಳಿಗೆ ತೆರೆಯುತ್ತದೆ".[5] ಇಂಗ್ಲಿಷಿನ ಮೂಲಕ ಶಿಕ್ಷಣವನ್ನು ಕೊಡುತ್ತಾ ಈ ಹೊಸ ಶಾಲೆಗಳು ಆಂಗ್ಲೀಕರಣವನ್ನು ಇನ್ನಷ್ಟು ಮುಂದುವರಿಸುತ್ತಾ ಜೊತೆಯಲ್ಲಿ ವೇದಗಳ ಪ್ರಭಾವವನ್ನು ಹೆಚ್ಚಿಸುತ್ತಾ ಹೋಗಬೇಕು ಎನ್ನುವುದು ಸಮಾಜಿಗಳ ಅಭಿಪ್ರಾಯವಾಗಿತ್ತು.

ಬ್ರಿಟಿಷ್ ಸಂಸ್ಕೃತಿಯನ್ನು ಮತ್ತು ಹೊಸ ಸರಕಾರದಲ್ಲಿ ಇದರ ಪಾತ್ರವನ್ನು ಪಂಜಾಬಿ ಹಿಂದುಗಳು ಒಪ್ಪಿರುವುದು ಇನ್ನೊಂದು ವಿದೇಶೀ ನಾಗರಿಕತೆಯಾದ ಇಸ್ಲಾಂನ್ನು ನಿರಾಕರಿಸುವ ಒಂದು ಸಾಧ್ಯತೆಯನ್ನು ಸೃಷ್ಟಿ ಮಾಡಿತು. ಅರೆಬಿಕ್ ಮತ್ತು ಪರ್ಶಿಯನ್ ಸಂಸ್ಕೃತಿಗಳು ಮೊದಲಿಗೇ ಹೊರಟು ಹೋಗಿದ್ದವು. ಆದರೆ ಉರ್ದು ಹೇಗೋ ಉಳಿಯಿತು. ಹಾಗಿದ್ದರೂ ಅದರ ಮೇಲೆ ಆರ್ಯರ ಮತ್ತು ಹೊಸತಾಗಿ ಒಟ್ಟುಗೂಡಿದ ಹಿಂದೂಗಳ ಧಾಳಿ ನಡೆದೇ ಇತ್ತು. "ಆರ್ಯ ಸಮಾಜ ಆಂಗ್ಲೋ-ಆರ್ಯನ್ ಶಾಲೆಯೊಂದನ್ನು ಸ್ಥಾಪಿಸಲು ಯೋಚಿಸುತ್ತಿದೆ. ಇಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತವನ್ನು ಕಲಿಸುವ ಯೋಚನೆ ಇದೆ. ಬಹಳ ಸ್ವಲ್ಪ ಪರ್ಶಿಯನ್ ಹೇಳಿಕೊಡಬಹುದೇನೋ ಅಥವಾ ಪರ್ಶಿಯನ್ನನ್ನು ಪೂರ್ತಿಯಾಗಿ ತೆಗೆದು

---

[4] Arya Magazine May 1882, pp 1-2

[5] Lala GaneshiLall, writing in the Arya Magazine May 1882 pp 2-3

ಹಾಕಲೂಬಹುದು". [6] ಹೀಗೆ ಇಂತಹ ಯೋಚನೆಗಳು ಬಂದಾಗ ಸಂಸ್ಕೃತದ ಪುನರುಜ್ಜೀವನ ಎಂದರೆ ಪರ್ಶಿಯನ್ ಭಾಷೆಯನ್ನು ತ್ಯಜಿಸುವುದು ಎಂದರ್ಥ. ಇಂಗ್ಲಿಷ್ ಮುಂದೆ ಬರಲಿರುವ ಭವಿಷ್ಯದ ಬಾಗಿಲನ್ನು ತೆರೆದರೆ, ಸಂಸ್ಕೃತ ಗತಕಾಲದ ವೇದಗಳಿಗೆ ಕೀಲಿಕೈಯಾಗಿ ಉಳಿಯಿತು. ಆರ್ಯರು ಎರಡನ್ನೂ ಬೆಂಬಲಿಸಿದರೂ ವಾಸ್ತವದಲ್ಲಿ ಇಂಗ್ಲಿಷಿಗೆ ಸ್ವಲ್ಪ ಹೆಚ್ಚೇ ಪ್ರಾಮುಖ್ಯ ದೊರೆಯಿತು. "ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಯಾರಿಗೂ ಸಂಸ್ಕೃತ ಎಂದರೇನೆಂದು ಗೊತ್ತಿರಲಿಲ್ಲ. ಜನಗೊತ್ತು ಮಾಡಿಕೊಳ್ಳುವ ಗೋಜಿಗೂ ಹೋಗಿರಲಿಲ್ಲ. ಕೆಲವೇ ಕೆಲವು ಬೆರಳೆಣಿಕೆಯಷ್ಟು ಮಂದಿ ಬ್ರಾಹ್ಮಣರಿಗಷ್ಟೇ ಸಂಸ್ಕೃತಗೊತ್ತಿತ್ತು. ಆದರೆ ಬ್ರಿಟಿಷ್‌ಧ್ವಜ ಭಾರತದ ನೆಲದಲ್ಲಿ ಬೇರೂರಿದಂದಿನಿಂದ ಸಂಸ್ಕೃತವನ್ನು ಪೋಷಿಸಲಾಯಿತು. ಅಷ್ಟೇ ಅಲ್ಲ, ಯಾರಿಗೆಲ್ಲ ಮುಸ್ಲಿಮರ ಬಗ್ಗೆ ಒಂದು ಸಹಜವಾದ ದ್ವೇಷ ಇತ್ತೋ ಅವರೆಲ್ಲ ಸಂಸ್ಕೃತಕ್ಕೆ ವಿಶೇಷವಾದ ಮಹತ್ವವನ್ನುಕೊಟ್ಟರು.[7] ಇಡೀ ಭಾರತದ ದೃಷ್ಟಿಯಿಂದ ಈ ಮೇಲಿನ ಹೇಳಿಕೆ ಸ್ವಲ್ಪ ಉತ್ಪ್ರೇಕ್ಷೆಯದು ಎಂದು ಅನಿಸಬಹುದಾದರೂ, ಪಂಜಾಬಿನ ದೃಷ್ಟಿಯಿಂದ ಹೆಚ್ಚು ಕಡಿಮೆ ಸರಿಯಾದುದೇ ಆಗಿತ್ತು. ಪಂಜಾಬಿ ಹಿಂದೂಗಳಿಗೆ, ಅದರಲ್ಲೂ ಅವರಲ್ಲಿದ್ದ ಕೆಲವು ಬ್ರಾಹ್ಮಣರಿಗೆ ಕೂಡ ಸಂಸ್ಕೃತ ಗೊತ್ತಿರಲಿಲ್ಲ. ಅದರ ಬಗ್ಗೆ ಅವರು ತಲೆಯನ್ನೂ ಕೆಡಿಸಿಕೊಂಡಿರಲಿಲ್ಲ. ಬ್ರಿಟಿಷ್ ಪೂರ್ವ ಪಂಜಾಬಿನಲ್ಲಿ ಸಂಸ್ಕೃತಕ್ಕಾಗಲೀ, ದೇವನಾಗರಿ ಲಿಪಿಗಾಗಲೀ ಬಹಳ ಕಡಿಮೆ ಗಮನ ಇತ್ತೆಂಬುದರಲ್ಲಿ ಎರಡು ಮಾತಿಲ್ಲ. ಸಂಪ್ರದಾಯಸ್ಥ ಬ್ರಾಹ್ಮಣರಿಗೂ ಇದರ ಬಗ್ಗೆ ಕಾಳಜಿ ಇರಲಿಲ್ಲ.

ಸಂಪ್ರದಾಯಸ್ಥರಿಗೆ ಸಂಸ್ಕೃತದ ಬಗ್ಗೆ ಇದ್ದಅಜ್ಞಾನದಿಂದಾಗಿಆರ್ಯ ಸಮಾಜಿಗಳಿಗೆ ಅನುಕೂಲವೇ ಆಯಿತು. ಆಗಿನ ಸಮುದಾಯದಲ್ಲಿ ಸಂಸ್ಕೃತದ ಬಗೆಗಿನ ಜ್ಞಾನ ಎಷ್ಟು ವಿರಳವಾಗಿತ್ತೆಂದರೆ, ಆರ್ಯ ಸಮಾಜಿಗಳು ತಮಗೆಗೊತ್ತಿದ್ದ ಅಲ್ಪ ಸ್ವಲ್ಪ ಸಂಸ್ಕೃತದ ಬಲದಿಂದಲೇ ಸಂಪ್ರದಾಯಸ್ಥ ಪಂಡಿತರನ್ನು ಸಾರ್ವಜನಿಕ ಚರ್ಚೆಗಳಲ್ಲಿ ಸೋಲಿಸಲು ಸಾಧ್ಯ ಎಂಬುದನ್ನು ಕಂಡುಕೊಂಡರು. ಕೆಲವೊಮ್ಮೆ ಆರ್ಯ ಸಮಾಜಿಗಳು ಇಂತಹ ಚರ್ಚೆಗಳನ್ನು ತಮಗಿರುವ ಜ್ಞಾನ ಮತ್ತು ಅನೇಕ ಸುಳ್ಳುಗಳ ಮೂಲಕ ಜಯಿಸುತ್ತಿದ್ದರು. "ಗುರುದತ್ ಅವರಿಗೆ ಸಂಸ್ಕೃತ ಚೆನ್ನಾಗಿ ತಿಳಿದಿದ್ದುದರಿಂದ ಎಷ್ಟೋ ಸಲ ತಾವೇ ಸಂಸ್ಕೃತದಲ್ಲಿ ಬರೆದ ಒಂದು ಭಾಷಣವನ್ನು ಅವರು ಬಾಯಿ ಪಾಠ ಮಾಡಿ ಚರ್ಚೆಗೆ ಸಿದ್ಧರಾಗುತ್ತಿದ್ದರು. ಆಮೇಲಿಂದ ಅವರನ್ನು ಸುತ್ತಲಿನ ಕೆಲವು ಸಣ್ಣ ಪುಟ್ಟ ಸ್ಥಳಗಳಿಗೆ ಚರ್ಚೆಗಳನ್ನು ನಡೆಸಲು ಕಳಿಸುತ್ತಿದ್ದರು. ಸಾಮಾನ್ಯವಾಗಿ ಮೂರ್ತಿ ಪೂಜೆಯಂತಹ ವಿಷಯಗಳ ಬಗ್ಗೆ ಕರ್ಮಠರಾದ ಪಂಡಿತರುಗಳ ಹತ್ತಿರ ಇವರ ಚರ್ಚೆ ನಡೆಯುತ್ತಿತ್ತು. ಯಾವನೇ ಪಂಡಿತನಾದರೂ ಬಂದು ಇವರೊಡನೆ ಸಂಸ್ಕೃತ ಭಾಷೆಯಲ್ಲಿ ಚರ್ಚೆ ಮಾಡಬಹುದೆಂದು ಸಾರ್ವಜನಿಕ ಸವಾಲನ್ನು ಹಾಕಲಾಗುತ್ತಿತ್ತು. ಆದರೆ ಸಂಸ್ಕೃತದಲ್ಲಿ ಮಾತನಾಡಲು

[6] Regenerator of Arya Varta, September 3, 1883 p 3

[7] Regenerator of Arya Varta, October 29, 1883 p 1

ಯಾರೂ ಮುಂದೆ ಬರುತ್ತಿರಲಿಲ್ಲವಾದ್ದರಿಂದ ಆರ್ಯ ಸಮಾಜಿಗಳ ಗುಂಪು ತಾವೇಗೆದ್ದೆವೆಂದು ಬೀದಿಗಳಲ್ಲಿ ವಿಜಯೋತ್ಸವವನ್ನು ಆಚರಿಸುತ್ತಾ ಬಾಜಾ ಭಜಂತ್ರಿಗಳ ಸಹಿತತಮ್ಮ ಊರುಗಳಿಗೆ ಹಿಂತಿರುಗುತ್ತಿದ್ದರು. ಬರುವಾಗ ದಾರಿಯಲ್ಲಿ ಅಲ್ಲಲ್ಲಿ ನಿಂತು ಪುಟ್ಟ ಭಾಷಣಗಳನ್ನು ಬಿಗಿದು ಸಂಪ್ರದಾಯಸ್ಥರ ಗುಂಪು ಹೇಗೆ ಸೋತಿತು ಎಂಬುದನ್ನು ಸಾರುತ್ತಿದ್ದರು." [8] ಆರ್ಯ ಸಮಾಜದ ಜೊತೆಯಲ್ಲಿ ಭಿನ್ನಾಭಿಪ್ರಾಯಗಳಿದ್ದಾಗಲೂ ಕೂಡ ಬ್ರಹ್ಮ ಸಮಾಜವಾಗಲಿ ಅಥವಾ ಸಂಪ್ರದಾಯಸ್ಥ ಪಂಡಿತರಾಗಲೀ ಆರ್ಯ ಸಮಾಜದ ಸಂಸ್ಕೃತ ಪ್ರಚಾರವನ್ನು ವಿರೋಧಿಸಲಿಲ್ಲ. ದೇವನಾಗರಿ ಲಿಪಿಯನ್ನಾಗಲಿ, ಹಿಂದಿಯನ್ನಾಗಲೀ ವಿರೋಧಿಸಲಿಲ್ಲ. (ಬ್ರಿಟಿಷ್ ವೈಸರಾಯ್ ಲಾರ್ಡ್ರಿಪ್ಪನ್ ಅವರು ವಿಲಿಯಮ್ ವಿಲ್ಸನ್ ಹಂಟರ್ ಎಂಬವನ ನೇತೃತ್ವದಲ್ಲಿಒಂದು ಸಮಿತಿಯನ್ನು ರಚಿಸಿ ದೇಶದಲ್ಲಿ ಪ್ರೈಮರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಒತ್ತು ಕೊಡಬೇಕು ಎನ್ನುವ ನಿಯಮವನ್ನು ತಂದರು). ಹಂಟರ್ ಸಮಿತಿಯ ಪ್ರವೇಶದಿಂದಾಗಿ ಒಂದು ಹೊಸ ಸಂವೇದನೆ ಉಳ್ಳ ಹಿಂದೂ ಸಮುದಾಯ ಸೃಷ್ಟಿಯಾಯಿತು. ಅದು ಆಗ ಶಿಕ್ಷಣದಲ್ಲಿ ಹಾಗೂ ಆಡಳಿತದಲ್ಲಿ ಚಾಲ್ತಿಯಲ್ಲಿದ್ದ ಉರ್ದು ಪ್ರಾಬಲ್ಯವನ್ನು ಬದಲಾಯಿಸುವ ಮತ್ತು ಅದಕ್ಕೆ ಸೆಡ್ಡು ಹೊಡೆಯುವ ಸಮುದಾಯವಾಗಿತ್ತು.

ಆರ್ಯ ಸಮಾಜಿಗಳ ಶೈಕ್ಷಣಿಕ ಪ್ರಯೋಗಗಳು ಹಿಂದೂ ಸಮುದಾಯದ ಅಂಗೀಕಾರವನ್ನು ಗಳಿಸಿದವು. ಸರಕಾರದ ಶೈಕ್ಷಣಿಕ ಕಾನೂನುಗಳ ಬಗ್ಗೆ ಮತ್ತು ಲೇಟ್ನರ್‌ನ ಬಗ್ಗೆ 1880-81ರ ವೇಳೆಗಾಗಲೇ ಒಂದು ಬಗೆಯ ಅಸಮಾಧಾನ ತುಂಬ ಬಲವಾಗಿ ಬೆಳೆದುಬಿಟ್ಟಿತ್ತು. ಉನ್ನತ ಶಿಕ್ಷಣವನ್ನು ಮೊಟಕುಗೊಳಿಸಿ ಭಾರತದ ಹೊಸ ಗಣ್ಯರ ಬೆಳವಣಿಗೆಯನ್ನು ಕುಂಠಿತಗೊಳಿಸುವ ಎಲ್ಲ ಲಕ್ಷಣಗಳನ್ನು ಬ್ರಿಟಿಷ್ ಸರಕಾರ ಈಗ ತೋರಿಸತೊಡಗಿತ್ತು. ಪಂಜಾಬಿನಲ್ಲಿ ಭಾರತೀಯರಿಗೆ ಉನ್ನತ ಶಿಕ್ಷಣವನ್ನು ಮೊಟಕುಗೊಳಿಸುವ ಬ್ರಿಟಿಷರ ಈ ವರಸೆಯೇ ಆರ್ಯ ಸಮಾಜಿಗಳಿಗೆ ವರವಾಯಿತು. ಇದರಿಂದಾಗಿಯೇ ಆಂಗ್ಲೋ ವೇದಿಕ್ ಕಾಲೇಜಿನ ಸ್ಥಾಪನೆಗೆ ಬಹಳ ಪ್ರೋತ್ಸಾಹ ದೊರೆಯಿತು. ಹೊಸ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಎಷ್ಟೇ ಪ್ರೋತ್ಸಾಹ, ಅನುಕಂಪ ಇದ್ದರೂ ಈ ಭಾವನೆಗಳು ಧನಸಹಾಯದ ಅಥವಾ ಪರಿಶ್ರಮದ ರೂಪದಲ್ಲಿ ಸಾಕಾರವಾಗಲು ಹಾಗೂ ಸ್ಕೂಲನ್ನಾಗಲಿ ಅಥವಾ ಕಾಲೇಜನ್ನಾಗಲೀ ಸ್ಥಾಪಿಸಿ ನಡೆಸಿಕೊಂಡು ಬರಲು ಕಷ್ಟಕರವಾಯಿತು.

ನವೆಂಬರ್ 8, 1883ರ ಮೀಟಿಂಗ್ ಮುಗಿದತಕ್ಷಣ ಎದ್ದ ಉತ್ಸಾಹದ ಅಲೆ ಆ ವರ್ಷದ ಕೊನೆಯವರೆಗೆ ಮುಂದುವರಿಯಿತು. ಲಾಹೋರ್ ಆರ್ಯ ಸಮಾಜದ "ಅಂತರಂಗ ಸಭಾ" (ಎಕ್ಸಿಕ್ಯೂಟಿವ್ ಕಮಿಟಿ) ಡಿಸೆಂಬರ್ 6 ರಂದು ಒಟ್ಟು ಸೇರಿಧನ ಸಹಾಯವನ್ನು ಸಂಗ್ರಹ ಮಾಡಿ ಜಮೆ ಮಾಡಲು ಒಂದು ಉಪ ಸಮಿತಿಯನ್ನು ಆಯ್ಕೆ

[8] Ruchi Ram Sahni 'Self Revelations of an Octogenarian' unpublished manuscript in the possession of VC Joshi, Nehru Memorial Museum p 81

ಮಾಡಿತು. [9] ಲಾಲಾ ಲಾಲ್‌ಚಂದ್ ಈ ಉಪಸಮಿತಿಯ ಅಧ್ಯಕ್ಷರಾಗಿಯೂ, ಭಾಯಿಜವಾಹರ್ ಸಿಂಗ್ ಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ಈ ಸಮಿತಿರಾಜರು ಮತ್ತು ಮುಖಂಡರು, ಉದಾರಿಗಳು ಮತ್ತು ಕುಲೀನರು, ಕ್ಷೇತ್ರದ ಮೇಲಿನ ಮತ್ತು ಕೆಳಗಿನ ಎಲ್ಲಗಣ್ಯರು, ಜನಸಾಮಾನ್ಯರು ಎಲ್ಲರನ್ನು ಯಾವುದೇ ಧರ್ಮ, ವರ್ಣಗಳ ಭೇದವಿಲ್ಲದೆ ಎಲ್ಲ ಜನರನ್ನು ಈ ಉದಾತ್ತವಾದ ಕೆಲಸಕ್ಕಾಗಿ ಒಂದಾಗುವಂತೆ ಕರೆಕೊಟ್ಟಿತು. ಧನಸಂಗ್ರಹ ಮಾಡುವುದು ಈ ಗುಂಪಿನ ಮುಖ್ಯ ಕೆಲಸವಾಯಿತು.[10] ಆದರೆ ಆರ್ಯ ಸಮಾಜಿಗಳು ತಮ್ಮ ಶೈಕ್ಷಣಿಕ ಚಳುವಳಿಯ ಬಗ್ಗೆ ಸ್ಪಷ್ಟ ಗುರಿಗಳನ್ನು ಹೇಳದ ಹೊರತು ಧನ ಸಂಗ್ರಹ ಕಷ್ಟದ ಕೆಲಸವಾಯಿತು. ಇದರ ಪರಿಣಾಮವಾಗಿ ಲಾಲಾ ಲಾಲ್‌ಚಂದ್ ಶೈಕ್ಷಣಿಕ ಯೋಜನೆಗಳನ್ನು ಕುರಿತ ಒಂದು ಕರಡು ಪ್ರತಿಯನ್ನು ತಯಾರಿಸಿ ಪಂಜಾಬ್‌ನ ಬೇರೆ ಬೇರೆ ಸಮಾಜಗಳಿಗೆ ಅವರ ಸಲಹೆ ಮತ್ತು ಸೂಚನೆಗಳಿಗಾಗಿ ಕಳುಹಿಸಿದರು. ಈ ಹೊಸ ನೀತಿ ಶಿಕ್ಷಣದ ಹಳೆಯ ಧ್ಯೇಯ, ಧೋರಣೆಗಳ ಬಗೆಗೆ ಹೆಚ್ಚಿನ ಒತ್ತನ್ನು ನೀಡಿತು. ಜೊತೆಯಲ್ಲೇ ಈಗಾಗಲೇ ಇಂಗ್ಲಿಷ್ ಶಿಕ್ಷಣವನ್ನು ಪಡೆದ ಗಣ್ಯರ ನಡುವೆ ಇರುವ ಸಾಂಸ್ಕೃತಿಕ ಮಿತಿ ಮತ್ತು ಒಂದು ಬಗೆಯ ಪರಕೀಯತೆ ಮುಂತಾದ ಸಮಸ್ಯೆಗಳ ಅರಿವನ್ನೂ ಹೊಂದಿತ್ತು. “ಈ ದೇಶದಲ್ಲಿ ಇಂಗ್ಲಿಷ್ ಸಾಹಿತ್ಯದಿಂದಾಗಿ ಬಂದ ಅನೇಕ ಹೊಸ ಆಲೋಚನೆಗಳು ಅನೇಕ ಸಾವಿರ ಮನಸ್ಸುಗಳನ್ನು ಸುಧಾರಿಸಿ ಬೆಳಗಿಸಿವೆ ಎಂಬುದರಲ್ಲಿ ಸಂಶಯವಿಲ್ಲ. ಅಂತಹ ಕೆಲವು ಧೀಮಂತರ ಬಗ್ಗೆ ಈ ದೇಶಕ್ಕೆ ಹೆಮ್ಮೆಯೂ ಇದೆ. ಆದರೆ ಪಾಶ್ಚ್ಯಾತ್ಯ ಶಿಕ್ಷಣ ಸಮಾಜದಲ್ಲಿ ಭಿನ್ನಾಭಿಪ್ರಾಯಗಳನ್ನೂ ಹುಟ್ಟುಹಾಕಿದೆ ಎಂಬುದು ನಿಜವಾಗಿಯೂ ಶೋಚನೀಯ. ಇಂಗ್ಲಿಷ್ ಶಿಕ್ಷಣದಿಂದಾಗಿ ಒಂದು ಶಿಕ್ಷಿತ ವರ್ಗ ಎಂಬುದು ಹುಟ್ಟಿಕೊಂಡಿದೆ. ಈ ವರ್ಗ ತನ್ನ ಪಾಡಿಗೆ ತಾನು ಚಲಿಸುತ್ತಾ ಇರುತ್ತದೆ. ಈ ವರ್ಗ ಯಾರನ್ನೂ ಪ್ರಭಾವಿಸುವುದಿಲ್ಲ ಅಥವಾ ಯಾರ ಪ್ರಭಾವಕ್ಕೆ ಒಳಗಾಗುವುದೂ ಇಲ್ಲ. ಅಶಿಕ್ಷಿತ ವರ್ಗವನ್ನೂ ಪ್ರಭಾವಿಸುವುದಿಲ್ಲ. ಈ ವರ್ಗಕ್ಕೆ ಭೂಮಿಯ ಮೇಲಿರುವ ಯಾವ ದೇಶದಲ್ಲೂ ಪೂರ್ವ ನಿದರ್ಶನವೂ ಇಲ್ಲ.” ಎಂಬುದು ಕೆಲವರ ಅಭಿಪ್ರಾಯವಾಗಿತ್ತು.[11] ಲಾಲ್‌ಚಂದ್ ಅವರು ಪುನರ್‌ರೂಪಿಸಿದ ಶಿಕ್ಷಣ ಪದ್ಧತಿ, ವರ್ಗ ಮತ್ತು ಸಮುದಾಯದ ಮಧ್ಯದ ಪ್ರತ್ಯೇಕತೆಯನ್ನು ಕೊನೆಗೊಳಿಸುವ ಅಗತ್ಯವನ್ನು ಪ್ರಸ್ತಾಪಿಸಿತು. ಆ ಮೂಲಕ ಒಗ್ಗಟ್ಟಿನಿಂದಿರುವ ಹಾಗೂ ಪುನರುಜ್ಜೀವನ ಹೊಂದಿದ ಹಿಂದೂ ಸಮುದಾಯವನ್ನು ಕಟ್ಟುವ ಯೋಜನೆಯನ್ನು ಹಾಕಿತು. ಆದ್ದರಿಂದ ಇಲ್ಲಿರುವ ಮುಖ್ಯ ಗುರಿ ಯಾವುದೆಂದರೆ ಶಿಕ್ಷಿತ ಮತ್ತು ಅಶಿಕ್ಷಿತ ವರ್ಗಗಳನ್ನು ಒಟ್ಟಿಗೆ ಬೆಸೆಯುವುದು. ಅದು ಹೇಗೆಂದರೆ ರಾಷ್ಟ್ರ ಭಾಷೆ ಹಾಗೂ ದೇಸೀ ಆಡುಭಾಷೆಗಳನ್ನು ಕಲಿಯುವುದರ ಮೂಲಕ, ನೈತಿಕ ಮತ್ತು ಆಧ್ಯಾತ್ಮಿಕ ಸತ್ಯಗಳನ್ನು ಪಸರಿಸುವ ಶಾಸ್ತ್ರೀಯ ಭಾಷೆಯಾದ ಸಂಸ್ಕೃತವನ್ನು ಕಲಿಯಬೇಕೆಂದು ಒತ್ತಾಯಿಸುವುದರ

[9] Regenerator of Arya Varta, Deceember 10, 1883 p 8

[10] Regenerator of Arya Varta, Deceember 10, 1883 p 7

[11] Quotes given below from Sri Rama Sharma, Mahatma Hans Raj, Maker of Modern Punjab (Jullundur: Arya PradeshikPratinidhi Sabha, 1941) pp 36-38

ಮೂಲಕ, ನಿಯಂತ್ರಣಗಳುಳ್ಳ ಜೀವನ ವಿಧಾನವನ್ನು ಅನುಸರಿಸಿ ಗಟ್ಟಿಯಾದ ಮತ್ತುಚಟುವಟಿಕೆಯ ದಿನಚರಿಯನ್ನು ಅಳವಡಿಸಿಕೊಳ್ಳುವ ಮೂಲಕ, ಇಂಗ್ಲಿಷ್ ಸಾಹಿತ್ಯದೊಂದಿಗೆ ಬಲವಾದ ಸಂಬಂಧವನ್ನು ಹೊಂದಲು ಪ್ರೋತ್ಸಾಹಿಸುವ ಮೂಲಕ, ದೇಶದ ಭೌತಿಕ ಪ್ರಗತಿಗಳ ಬಗ್ಗೆ ಪ್ರಚೋದನೆದೊರೆಯುವಂತೆ ಭೌತಿಕ ವಿಜ್ಞಾನ ಮತ್ತುಅನ್ವಯಿಕ ವಿಜ್ಞಾನಗಳ ಜ್ಞಾನವನ್ನು ಪ್ರಸರಿಸುವುದರ ಮೂಲಕ. ಇಂಗ್ಲಿಷ್ ಭಾಷೆಯು ಹೊಂದಾಣಿಕೆಗಾಗಿ, ಹಿಂದಿ ಭಾಷೆಯುಜನರಜೊತೆ ಸಂವಹನಕ್ಕಾಗಿ, ಸಂಸ್ಕೃತ ಭಾಷೆ ಮತ್ತು ದಯಾನಂದರ ಬೋಧನೆಗಳು ನೈತಿಕ ಉನ್ನತಿಗಾಗಿ ಹಾಗೂ ವಿಜ್ಞಾನವು ಭೌತಿಕ ಪ್ರಗತಿಗಾಗಿ... ಹೀಗೆ ಆರ್ಯರು ಔದ್ಯೋಗಿಕ ಚಲನಶೀಲತೆ ಮತ್ತು ಸಾಂಸ್ಕೃತಿಕ ಹೊಂದಾಣಿಕೆಗಳಲ್ಲಿರುವ ಹೆಚ್ಚಿನ ಗಂಭೀರ ದ್ವಂದ್ವಗಳಿಗೆ ಪರಿಹಾರಗಳನ್ನು ಕೊಟ್ಟರು.

ಹೀಗೆ 1884ರ ಕೆಲವು ತಿಂಗಳುಗಳು ಸರಿದಂತೆ ಆರಂಭದಲ್ಲಿದ್ದ ಉತ್ಸಾಹ ಕಡಿಮೆಯಾಯಿತು. ಆರ್ಯ ಸಮಾಜದ ಕಟ್ಟಾ ಅನುಯಾಯಿಗಳು ಈ ಶೈಕ್ಷಣಿಕ ಚಳುವಳಿಯನ್ನು ಬೆಂಬಲಿಸಿದರೂ, ಹೆಚ್ಚಿನ ಧನ ಸಹಾಯ ಬರದೇ ಹೋಯಿತು. ಬೇರೆ ಕೆಲವು ವಂತಿಗೆಗಳು ನಿಧಾನವಾಗಿ ಬರುತ್ತಿದ್ದವು. 1883, ನವೆಂಬರ್ 3ರಂದು ಒಟ್ಟಾದ 7,000 ದಷ್ಟು ರೂಪಾಯಿಗಳು ಡಿಸೆಂಬರ್ 10ರ ಹೊತ್ತಿಗೆ ಬರೀ ರೂ.8097ರಷ್ಟು ಆಗಿತ್ತು. ಸಮಯ ಕಳೆದಂತೆ ಶ್ರೀಮಂತರು ಹಾಗೂ ಮೇಲ್ವರ್ಗದ ಪಂಜಾಬಿ ಹಿಂದುಗಳು ಈ ಚಳುವಳಿಗೆ ಹೆಚ್ಚಿನ ಕೊಡುಗೆ ಕೊಡಲಾರರು ಎಂಬುದು ಸ್ಪಷ್ಟವಾಯಿತು. ಹಣ ಸಂಗ್ರಹಿಸುವ ಜವಾಬ್ದಾರಿ ಸಮಾಜದ ಕೆಲವೇ ಸದಸ್ಯರುಗಳ ಹೆಗಲಿಗೆ ಬಂತು. ಅವರು ಹೊಸತಾಗಿ ಸೃಷ್ಟಿಯಾಗುತ್ತಿದ್ದ ಶಿಕ್ಷಿತ ವರ್ಗ ಮತ್ತು ಕೆಲವು ಸಾಂಪ್ರದಾಯಿಕ ವ್ಯಾಪಾರಿ ವರ್ಗವಾದ ವೈಶ್ಯರಿಂದ ಮಾತ್ರ ಹಣವನ್ನು ಸಂಗ್ರಹಿಸಲು ಸಾಧ್ಯವಾಯಿತು. [12] ಆರ್ಯರು ಹಣ ಸಂಗ್ರಹಿಸುವ ಕೆಲಸವನ್ನುಕೆಲವು ದೊಡ್ಡ ಪಟ್ಟಣಗಳಿಗೆ ಮಾತ್ರ ಕೇಂದ್ರೀಕರಿಸಿದರು. ಅದರಲ್ಲೂ ಮುಖ್ಯವಾಗಿ ಲಾಹೋರಿನಲ್ಲಿ ಸಂಗ್ರಹಿಸಿದರು. ಧನ ಸಂಗ್ರಹದ ವಿಧಾನಗಳಲ್ಲಿ ಹಲವು ಪ್ರಯೋಗಗಳನ್ನು ಮಾಡಿದರು. ಅಷ್ಟೇ ಅಲ್ಲತಮ್ಮ ಶಕ್ತಿ ಮೀರಿ ಪ್ರಯತ್ನಗಳನ್ನು ಮಾಡಿದರು. ಇಡೀ ಚಳುವಳಿಯನ್ನು ಜನಪ್ರಿಯಗೊಳಿಸಲು ಬೇರೆ ಕೆಲವು ಕ್ರಮಗಳನ್ನು ಅನುಸರಿಸಲಾಯಿತು. ಜನರ ಅನುಕಂಪ ಗಳಿಸಲು ತಮ್ಮ ಸದಸ್ಯರನ್ನು ಸಣ್ಣ ಸಣ್ಣ ಹಳ್ಳಿಗಳಿಗೆ ನಿಯೋಜಿಸಿ ಕಳಿಸಲಾಯಿತು. ಈ ಸದಸ್ಯರು ಸ್ಥಳೀಯ ಮುಖಂಡರುಗಳು ಮತ್ತು ಆರ್ಯ ಸಮಾಜಿಗಳ ಸಹಾಯದಿಂದ ಸಾರ್ವಜನಿಕ ಸಭೆಗಳನ್ನು ನಡೆಸಿದರು ಅಷ್ಟೇ ಅಲ್ಲ ಭಾಷಣಗಳ ಮೂಲಕ ಸ್ಥಳೀಯ ಚಂದಾದಾರಿಕೆಯನ್ನು ಹೆಚ್ಚಿಸಿದರು; ಚಳುವಳಿಯ ಉದ್ದೇಶಗಳ ಬಗ್ಗೆ ಅರಿವನ್ನು ಮೂಡಿಸಿದರು.[13]

---

[12] Regenerator of Arya Varta, March 4, 1884, p 3

[13] Arya Patrika, July 25 1885 p3

1885ರ ಮಧ್ಯ ಭಾಗದಲ್ಲಿಒಂದು ಹೊಸ ಹುರುಪು ಸ್ಪಷ್ಟವಾಗಿ ಗೋಚರಿಸಿತು.. ಆರ್ಯರು 11,000 ರೂಪಾಯಿಗಳಷ್ಟು ವಂತಿಗೆಯನ್ನು ಸಂಗ್ರಹಿಸಿದರು. ಲಾಹೋರ್ ನಿಧಿ ಸಮಿತಿಯು ಸಂಗ್ರಹವಾದ ಬಂಡವಾಳವನ್ನು 40% ಬಡ್ಡಿಯ ಲೆಕ್ಕ ಹಾಕಿ ಆಗ್ರಾ ಬ್ಯಾಂಕ್‌ನಲ್ಲಿ ತೊಡಗಿಸಿತು. ಆದರೆ ಹೆಚ್ಚಿನ ದುಡ್ಡಿನ ಮೇಲೆ ಅವರ ನಿಯಂತ್ರಣ ಇರಲಿಲ್ಲ. ಯಾಕೆಂದರೆ ಸಮಾಜಿಗಳು ಬೇರೆಲ್ಲ ಕಡೆಗಳಲ್ಲಿ ಅಂದರೆ ರಾಜಸ್ತಾನದಲ್ಲಿ, ಸಿಂಧ್‌ನಲ್ಲಿ ಹಾಗೂ ಇಡಿಯ ಪಂಜಾಬ್‌ನಲ್ಲಿ ವಂತಿಗೆಗಳನ್ನು ಸಂಗ್ರಹಿಸಿದ್ದರು. ಪ್ರಸ್ತಾಪಿಸಲಾದ ಕಾಲೇಜನ್ನು ಯಾವ ಸ್ಥಳದಲ್ಲಿ ಕಟ್ಟಲಾಗುತ್ತದೆ ಎಂಬ ಪ್ರಶ್ನೆ ಬಗೆಹರಿಯದೆ ಇದ್ದದ್ದರಿಂದ ಈ ವಂತಿಗೆಯನ್ನು ಲಾಹೋರ್‌ಗೆ ವರ್ಗಾಯಿಸಲಿಲ್ಲ. ಕಾಲೇಜನ್ನು ಎಲ್ಲಿ ಕಟ್ಟುವುದೆಂಬ ಜಿಜ್ಞಾಸೆ 1885ರಲ್ಲಿ ದೊಡ್ಡದಾಗಿ ಬೆಳೆದಾಗ, ಕೆಲವು ಸಮಾಜಿಗಳು ಸ್ಥಳದ ಆಯ್ಕೆಆಗುವವರೆಗೆ ವಂತಿಗೆ ಕೊಡುವುದನ್ನು ನಿಲ್ಲಿಸುತ್ತೇವೆಂದೂ ಬೆದರಿಕೆ ಒಡ್ಡಿದರು. ಇದರ ಜೊತೆಗೆ ಅಷ್ಟೇ ಗಂಭೀರವಾದ ಹೊಸ ಶಿಕ್ಷಣ ಸಂಸ್ಥೆಯ ಹಿಡಿತ ಯಾರ ಕೈಯ್ಯಲ್ಲಿರಬೇಕು ಎಂಬ ವಿಚಾರವೂ ಪ್ರಶ್ನೆಯಾಗಿಯೇ ಉಳಿಯಿತು.[14] ಈ ಎರಡು ಸಮಸ್ಯೆಗಳೂ ಮುಂದೆ ಎರಡು ಬಗೆಯ ವಿಭಜನೆಗೆ ಕಾರಣವಾದವು. ವಂತಿಗೆಯಿಂದ ಒಟ್ಟಾದ ಬಂಡವಾಳವು ಬೆಳೆದಂತೆಲ್ಲ ಮತ್ತು ಶಿಕ್ಷಣ ಸಂಸ್ಥೆ ನಿಜವಾಗುವ ದಿನ ಹತ್ತಿರವಾದಂತೆಲ್ಲ ಆರ್ಯ ಸಮಾಜದ ಮುಖಂಡರು ಇದರ ಬಗ್ಗೆ ಕೆಲವು ಬಗೆಯ ನಿಯಂತ್ರಣ ಹಾಗೂ ಮೇಲ್ವಿಚಾರಣೆಯನ್ನು ಹೊರಲು ಹೆಣಗಾಡಿದರು. ಯಾಕೆಂದರೆ ಅವರು ಈ ಶಿಕ್ಷಣದ ಚಳುವಳಿಯಲ್ಲಿ ತೊಡಗಿಕೊಂಡ ಎಲ್ಲ ಸಮಾಜಿಗಳನ್ನು ತೃಪ್ತಿ ಪಡಿಸಬೇಕಿತ್ತು.

ಆರ್ಯ ಸಮಾಜದ ಮುಖಂಡರು ಲಾಲಾ ಲಾಲ್‌ಚಂದರ ಶಿಕ್ಷಣ ಸಂಸ್ಥೆಯ ಕರಡು ಪ್ರತಿಯನ್ನು ಒಪ್ಪಿಕೊಳ್ಳುತ್ತಿದ್ದಂತೆಯೇ ಘಟನೆಯೊಂದು ನಡೆದು ಶೈಕ್ಷಣಿಕ ಚಳುವಳಿಯನ್ನು ಇನ್ನಷ್ಟು ಹುರುಪಿನೊಂದಿಗೆ ಮುಂದಕ್ಕೆ ಕೊಂಡೊಯ್ದಿತು. 1885, ನವೆಂಬರ್ 3ರಂದು ಲಾಹೋರ್ ಸಮಾಜದ ಅಂತರಂಗ ಸಭಾಗೆ (ಎಕ್ಸಿಕ್ಯೂಟಿವ್‌ಕಮಿಟಿ) ಲಾಲಾ ಹನ್ಸ್ರಾಜ್ ಅವರಿಂದ ಒಂದುಪತ್ರ ಬಂತು. ಅದರಲ್ಲಿ ಲಾಲಾ ಹನ್ಸ್ರಾಜ್ ಅವರು ತಾವು ಅನಿರ್ದಿಷ್ಟ ಅವಧಿಯವರೆಗೆ ಸಂಬಳವನ್ನು ತೆಗೆದುಕೊಳ್ಳದೆ ಉದ್ದೇಶಿತ ಶಾಲೆಯ ಪ್ರಾಂಶುಪಾಲರಾಗಿ ಕೆಲಸ ಮಾಡುವುದಾಗಿ ಘೋಷಿಸಿದರು.[15] ಆರ್ಯರು ಇದಕ್ಕೆ ಉತ್ಸಾಹದಿಂದ ಪ್ರತಿಕ್ರಿಯಿಸಿದರು. ಅಂತರಂಗ ಸಭಾ ನವೆಂಬರ್‌ಒಂದೇ ತಿಂಗಳಿನಲ್ಲಿ ಒಂಬತ್ತು ಸಲ ಸಭೆ ಸೇರಿ ಹೊಸ ಶಿಕ್ಷಣ ಸಂಸ್ಥೆಯನ್ನು ಕಟ್ಟುವ ನಿಟ್ಟಿನಲ್ಲಿ ಅನೇಕ ವಿವರಗಳನ್ನು ಕುರಿತು ವಿಚಾರ ಮಾಡಿತು. 1885, ಸೆಪ್ಟೆಂಬರ್ 7ರ ತನ್ನ ಪ್ರಸ್ತಾಪದಲ್ಲಿ ಆರ್ಯ ಸಮಾಜವನ್ನು ಬಾಧಿಸುತ್ತಿರುವ ಸಮಸ್ಯೆಗಳ ಒಂದುಚಿತ್ರಣವನ್ನು ಲಾಲ್‌ಚಂದ್ ಕೊಟ್ಟರು : "ಇಂದಿನವರೆಗೆ ಯಾವುದೇ ಬಗೆಯ ಪರಿಣಾಮಕಾರಿಯಾದ ಸಂಸ್ಥೆಯಾಗಿ ಇದು ಬೆಳೆದಿರುವುದು

---

[14] Sri Rama Sharma, Mahatma Hans Raj, p 45

[15] College Report 1886-87 p 8

ಕಾಣುವುದಿಲ್ಲ. ಬೇರೆ ಬೇರೆ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿರುವ ಠೇವಣಿಗಳಲ್ಲಿ ಇಟ್ಟಿರುವ ದುಡ್ಡನ್ನು, ಬೇರೆ ಬೇರೆ ಸಂಪನ್ಮೂಲಗಳನ್ನು ಸರಿಯಾಗಿ ಬಳಸುವ ಕೆಲಸದಲ್ಲಿ ಇನ್ನೂ ಯಶಸ್ಸನ್ನು ಕಂಡಿಲ್ಲ. ಆದ್ದರಿಂದ ಪ್ರತ್ಯೇಕವಾಗಿ ಹರಡಿ ಹೋಗಿರುವ ಇವನ್ನೆಲ್ಲ ಒಂದು ದೃಢವಾದ ಮತ್ತು ಪರಿಣಾಮಕಾರಿಯಾದ ಯೋಜನೆಯಾಗಿ ಬೆಳೆಸುವ ಕಾಲ ಬಂದಿದೆ."[16]

ಸೊಸೈಟಿಗಳನ್ನು ಹಾಗೂ ಸಂಸ್ಥೆಗಳನ್ನು ರಿಜಿಸ್ಟರ್ ಮಾಡಬಹುದೆನ್ನುವ ಬ್ರಿಟಿಷ್ ಕಾನೂನು ಈ ಮೇಲಿನ ಸಮಸ್ಯೆಗೆ ಒಂದು ಭಾಗಶಃ ಪರಿಹಾರವನ್ನು ಸೂಚಿಸಿತು. ಆದರೆ ಸಂಸ್ಥೆಗೆ ಸಂಬಂಧಿಸಿದ ವಿವರಗಳನ್ನು ಸಮಾಜದ ಒಳಗೆ ಬಹಳ ದೀರ್ಘವಾದಚರ್ಚೆ ಮತ್ತು ವಿಚಾರ ವಿನಿಮಯಗಳ ಮೂಲಕವೇ ನಿರ್ಧರಿಸಬೇಕಾಗಿತ್ತು. "ಸಂಸ್ಥೆಯನ್ನೂ, ಅದರೊಳಗಿನ ಕಮಿಟಿಗಳನ್ನೂ ಹೇಗೆ ರೂಪಿಸಬೇಕು ಎಂಬುದೇ ಒಂದು ಪ್ರಮುಖ ಪ್ರಶ್ನೆಯಾಗಿತ್ತು.ಕಮಿಟಿಯಾವ ಹಿತಾಸಕ್ತಿಗಳನ್ನು ಪ್ರತಿನಿಧಿಸಬೇಕು. ಯಾವುದೇ ಒಂದು ನಿರ್ದಿಷ್ಟ ಹಿತಾಸಕ್ತಿಯ ಮೇಲೆ ಕಮಿಟಿಯ ನಿಯಂತ್ರಣ ಇರಬೇಕೇ, ಬೇಡವೇ. ಯಾವ ವರ್ಗಗಳನ್ನು ಕಮಿಟಿಯಿಂದ ದೂರ ಇಡಬೇಕು. ಕಮಿಟಿಯ ಹಿತಾಸಕ್ತಿಗಳ ಜೊತೆ ಹೊಂದಾಣಿಕೆ ಮಾಡುವುದೇ ಆದಲ್ಲಿ ಯಾವ ಆಧಾರದ ಮೇಲೆ ಮಾಡಬಹುದು. ಇವೆಲ್ಲವೂ ಬಹಳ ಸೂಕ್ಷ್ಮ ಸಮಸ್ಯೆಗಳು ಮತ್ತು ಪ್ರತಿ ಹೆಜ್ಜೆಗೂ ಇವುಗಳಿಗೆ ಒಂದು ಪರಿಹಾರ ಬೇಕಾಗಬಹುದು ಎಂದು ಇತ್ಯಾದಿಯಾಗಿ ಸಮಾಲೋಚನೆಗಳುನಡೆದವು." [17] ಬಹಳ ದೀರ್ಘವಾದ ಚರ್ಚೆಯ ನಂತರ ಕೇವಲ ಕೆಲವೇ ಮಾರ್ಪಾಡುಗಳೊಂದಿಗೆ ಲಾಹೋರ್ ಸಮಾಜವು ಲಾಲ್‌ಚಂದರ ಪ್ರಸ್ತಾಪವನ್ನು ಅಂಗೀಕರಿಸಿತು. ಮುಖ್ಯ ಸಮಾಜಿಗಳ ಒಪ್ಪಿಗೆಯನ್ನು ಪಡೆಯಲು, ಅಂತರಂಗ ಸಭಾ ಪ್ರತಿ ಸಮಾಜವೂ ತನ್ನ ಒಬ್ಬ ಪ್ರತಿನಿಧಿಯನ್ನು ಡಿಸೆಂಬರ್‌ನಲ್ಲಿ ನಡೆಯುವ ವಾರ್ಷಿಕ ದಿನಾಚರಣೆಯ ವೇಳೆಗೆ ಲಾಹೋರಿಗೆ ಕಳುಹಿಸಿ ಕೊಡಬೇಕೆಂದು ಕೇಳಿಕೊಂಡಿತು.[18] ಲಾಹೋರ್ ಸಮಾಜ ತನ್ನ ಹುಟ್ಟುಹಬ್ಬದ ಆಚರಣೆಗಾಗಿ ಪ್ರತಿ ವರ್ಷ ಒಂದು ಅಥವಾ ಎರಡು ದಿನಗಳ ಸಭೆಯನ್ನು ನಡೆಸುತ್ತಿತ್ತು. ಲಾಹೋರಿನ ವಾರ್ಷಿಕ ದಿನಾಚರಣೆ ಒಂದು ರೀತಿಯಲ್ಲಿ ಪಂಜಾಬ್ ಮತ್ತು ಸುತ್ತಮುತ್ತಲಿನ ಪ್ರದೇಶದ ಸಮಾಜದ ಮುಖಂಡರುಗಳಿಗೆ ಒಂದು ಬಗೆಯ ಅನಧಿಕೃತವಾದ ಪ್ರಮಾಣ ಪತ್ರ ಪಡೆಯುವಂತಹ ಸಮಾವೇಶವಾಗಿತ್ತು. ಈ ಆಚರಣೆಗಳು ದಯಾನಂದರ ಮರಣಾನಂತರ ಚಾಲ್ತಿಗೆ ಬಂದ ಮೊತ್ತಮೊದಲ ಕೇಂದ್ರ ಶಕ್ತಿಯಾಯಿತು. ಸಮಾವೇಶದ ನಂತರ ಎಲ್ಲೆಲ್ಲಿಂದಲೋ ಬಂದಂತಹ ಪ್ರತಿನಿಧಿಗಳು ತಮ್ಮತಮ್ಮ ಪ್ರದೇಶದ ಸಮಾಜಗಳಿಗೆ ಹಿಂತಿರುಗಿ ಹೋಗುತ್ತಿದ್ದರು. 1886ರ ಜನವರಿ 31ರಂದು ಅವರೆಲ್ಲರೂ ಪುನಃ ಲಾಹೋರಿನಲ್ಲಿ ಸಭೆ ಸೇರಿ ಹೊಸ ಶೈಕ್ಷಣಿಕ

---

[16] Proceedings, Dayanand Anglo Vedic College Managing Committee Vol I (a) from 1885. (hereinafter, proceedings, Davcmc 1885)

[17] Quotes given below from Proceedimgs DAVCMC 1885

[18] College Report 1886-87 p 8

ಯೋಜನೆಯನ್ನು ಅಂಗೀಕರಿಸಿದರು.[19] ಈ ಸಭೆಯ ನಂತರ 'ದಯಾನಂದ್ ಆಂಗ್ಲೋ-ವೇದಿಕ್‌ಟ್ರಸ್ಟ್ ಮತ್ತು ಮ್ಯಾನೇಜ್‌ಮೆಂಟ್ ಸೊಸೈಟಿ' ಯನ್ನು ಕಾನೂನು ಪ್ರಕಾರವಾಗಿ ನೋಂದಣಿ ಮಾಡಲಾಯಿತು. ಅಷ್ಟೇ ಅಲ್ಲಆರ್ಯ ಸಮಾಜದಎಲ್ಲ ನಿಧಿ ಮತ್ತು ಶೈಕ್ಷಣಿಕ ಚಳುವಳಿಗೆ ಸಂಬಂಧಿಸಿದ ಎಲ್ಲ ಆಸ್ತಿಪಾಸ್ತಿಗಳ ಹಕ್ಕು ನಿಧಾನವಾಗಿ ಈ ಸೊಸೈಟಿಯ ಪಾಲಿಗೆ ಬಂತು.

ಎಲ್ಲ ಬಗೆಯ ಕಾನೂನಿಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ಸೊಸೈಟಿ ವಹಿಸಿದರೂ, ಅನೇಕ ಅಧಿಕಾರಗಳು ವ್ಯವಸ್ಥಾಪಕ ಮಂಡಳಿಯ (ಮ್ಯಾನೇಜಿಂಗ್‌ಕಮಿಟಿ) ವ್ಯಾಪ್ತಿಯಲ್ಲೇ ಇದ್ದವು. ಕಮಿಟಿಯ ಸದಸ್ಯತ್ವವನ್ನು ಶ್ರೀಮಂತಿಕೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಬೇರೆ ಬೇರೆ ಪ್ರದೇಶಗಳ ಪ್ರತಿಯೊಂದು ಸಮಾಜಕಾಲೇಜಿನ ನಿಧಿಗಾಗಿ 1000 ರೂಪಾಯಿಗಳನ್ನು ಕೊಟ್ಟರೆ ವ್ಯವಸ್ಥಾಪಕ ಮಂಡಳಿಯಲ್ಲಿ ಆಯಾಯ ಸಮಾಜಕ್ಕೆ ಒಂದೊಂದು ಸ್ಥಾನ ಸಿಗುತ್ತಿತ್ತು. ಈ ಸ್ಥಾನವನ್ನು ಪಡೆಯುವವರು ಒಳ್ಳೆಯ ಹೆಸರು ಪಡೆದಆರ್ಯ ಸಮಾಜಿಗಳು ಆಗಿರಬೇಕಾಗಿತ್ತು. ಈ ನಿಯಮದಿಂದಾಗಿ ಸದಸ್ಯತ್ವ ದೊರಕಬೇಕಾದರೆ ಅಂತಹ ಸದಸ್ಯರು ಹೆಚ್ಚು ಚಟುವಟಿಕೆಯಿಂದಿರುವ ಆರ್ಯ ಸಮಾಜದ ಶಾಖೆಯಿಂದ ಬಂದವರಾಗಿರಬೇಕಿತ್ತು. ಆರ್ಯ ಸಮಾಜಿಗಳಲ್ಲದವರೂ ಮ್ಯಾನೇಜಿಂಗ್ ಕಮಿಟಿಯ ಸದಸ್ಯರಾಗಿ ಸೊಸೈಟಿಯ ಒಳಗೆ ಬೇರೆ ಬೇರೆ ಕ್ಷೇತ್ರಗಳ ಮೂಲಕ ಪ್ರವೇಶ ಪಡೆಯಬಹುದಿತ್ತು. "ಆರ್ಯ ಸಮಾಜದ ಚಟುವಟಿಕೆಗಳಲ್ಲದೆ, ಬೇರೆ ಅನೇಕ ವಿಷಯಗಳನ್ನು ಕಮಿಟಿಯಲ್ಲಿ ಪ್ರತಿನಿಧಿಸಬೇಕಾಗಿತ್ತು. ಉದಾಹರಣೆಗೆ ಎಂಜಿನಿಯರಿಂಗ್, ಮೆಡಿಕಲ್ ಮತ್ತು ಎಜುಕೇಶನಲ್ ಇತ್ಯಾದಿ. ಈ ಎಲ್ಲ ಕ್ಷೇತ್ರಗಳಲ್ಲೂ ಪ್ರತಿನಿಧಿಗಳನ್ನು ಚುನಾಯಿಸುವಾಗ ಕೇವಲ ಆರ್ಯ ಸಮಾಜಿಗಳಿಗಷ್ಟೇ ಆದ್ಯತೆ ಕೊಡುವುದು ದುರದೃಷ್ಟಕರ. ಸಮಾಜದ ಸಂವಿಧಾನದ ನಿಯಮದ ಪ್ರಕಾರ 'ಹಿತಾಸಕ್ತಿ ಪ್ರಾತಿನಿಧ್ಯದ ಅಡಿಯಲ್ಲಿ ಶಿಕ್ಷಣ, ವೈದ್ಯಕೀಯ, ಎಂಜಿನಿಯರಿಂಗ್, ಕಾನೂನು ಮತ್ತು ಸೇವೆ ಇತ್ಯಾದಿ ವಿಭಾಗಗಳಲ್ಲಿ ವ್ಯವಸ್ಥಾಪಕ ಮಂಡಳಿ ಒಂದೊಂದು ವಿಭಾಗಕ್ಕೆ ಒಬ್ಬೊಬ್ಬ ಸದಸ್ಯನನ್ನು ನೇಮಕ ಮಾಡಬಹುದಿತ್ತು. ಇನ್ನುಳಿದ ಮೂರು ನಿಯಮಗಳು ವ್ಯವಸ್ಥಾಪಕ ಮಂಡಳಿಯ ಸದಸ್ಯತ್ವ ಮತ್ತು ಅಧಿಕಾರಗಳನ್ನು ನಿರ್ಧರಿಸುತ್ತಿದ್ದವು. ಮೊದಲನೆಯದಾಗಿ, ಸದಸ್ಯರ ಸದಸ್ಯತ್ವದ ಅವಧಿ 7 ವರ್ಷಗಳು. ಎರಡನೆಯದಾಗಿ ಒಂದು ಸಮಾಜವನ್ನು ಪ್ರತಿನಿಧಿಸಿ ಬಂದವರು ಆ ನಿರ್ದಿಷ್ಟ ಸಮಾಜದ ಸದಸ್ಯರಾಗಿ ಇರಬೇಕಾಗಿಲ್ಲ. ಹೀಗಾಗಿ ಲಾಹೋರಿನಿಂದ ಹೊರಗಡೆ ಇರುವ ಸಮಾಜ, ಲಾಹೋರಿನಲ್ಲೇ ಇರುವಯಾರಾದರೂ ಒಬ್ಬರನ್ನು ತನ್ನ ಪ್ರತಿನಿಧಿಯಾಗಿ ನೇಮಕ ಮಾಡಬಹುದಿತ್ತು.

[19] Representatives from six Samajes with supporting letters from three others travelled to Lahore for this gathering. They included: Lala Lal Chand, Lahore, Lala Sain Das, Lahore, Lala Jiwan Das, Lahore, Pandit Shiv Dat Ram, Amritsar, Lala Kashi Ram, Multan, Lala JiwanKishan, Gujranwala, Lala Ralla Ram, Gujranwala, Lala Shiv Saran Das, Ludhiana, and Lala Lajpat Rao, Rohtak. Letters approving the scheme came from Dehra Dun, Sukkar in Sindh and Simla, College Report 1886-87, p 3

ವ್ಯವಸ್ಥಾಪಕ ಮಂಡಳಿ ತಿಂಗಳಿಗೆ ಒಂದು ಬಾರಿ ಸೇರುತ್ತಿತ್ತು. ಇದರಿಂದ ಅನೇಕ ಆರ್ಯ ಸಮಾಜಿಗಳಿಗೆ ಈ ಮೀಟಿಂಗಿಗೆ ಹಾಜರಾಗುವುದು ಕಷ್ಟವೆನಿಸುತ್ತಿತ್ತು. ಮೂರನೆಯದಾಗಿ, ಕಾಲೇಜು ನಿಧಿಗೆ 5000 ರೂಪಾಯಿಗಳನ್ನು ಕೊಟ್ಟಂತಹ ಸಮಾಜಿಗಳಿಗೆ ಹೆಚ್ಚಿನ ಪ್ರತಿನಿಧಿಗಳನ್ನು ಕಳಿಸುವ ಅವಕಾಶ ಇತ್ತು. ಈ ಎಲ್ಲ ಕಾರಣದಿಂದ ಲಾಹೋರಿನ ಆರ್ಯ ಸಮಾಜ, ತನ್ನ ಸಂಪತ್ತು ಮತ್ತು ಅನುಕೂಲಕರ ಸ್ಥಾನದಿಂದಾಗಿ ವ್ಯವಸ್ಥಾಪಕ ಮಂಡಳಿಯ ಮೇಲೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿತು.[20] 'ಹಿತಾಸಕ್ತಿ ಪ್ರತಿನಿಧಿಗಳು (Interest Representatives) ಅನಿವಾರ್ಯವಾಗಿ ಲಾಹೋರಿನಲ್ಲಿ ನೆಲೆಸಿದ್ದವರಾಗಿದ್ದರು. ಮತ್ತು ಸಮಾಜದ ಸಕ್ರಿಯ ಸದಸ್ಯರಾಗಿಲ್ಲದೆ ಇದ್ದರೂ ಸಮಾಜದ ಗೆಳೆಯರಂತೂ ಆಗಿದ್ದರು.

ವ್ಯವಸ್ಥಾಪಕ ಮಂಡಳಿ ತನ್ನ ಮೊದಲ ಸಭೆಯನ್ನು 1886, ಫೆಬ್ರುವರಿ 27ರಂದು ನಡೆಸಿತು. ಆಮೇಲೆ ಮಾರ್ಚ್ 20ರಂದು ನಡೆದ ಎರಡನೆಯ ಸಭೆಯವರೆಗೆ ಏನೂ ಹೆಚ್ಚಿನದನ್ನು ಸಾಧಿಸಲಾಗಲಿಲ್ಲ. ಮಾರ್ಚ್ 20ರಂದು ಮಂಡಳಿ ತನ್ನ ಮೊದಲ ಅಧಿಕಾರಿಗಳನ್ನು ನೇಮಿಸಿತು : ಲಾಲಾ ಲಾಲ್‌ಚಂದರರನ್ನುಅಧ್ಯಕ್ಷ ಹಾಗೂ ಖಜಾಂಚಿಯಾಗಿಯೂ, ಲಾಲಾ ಜ್ವಾಲಾಸಹಾಯ್ ಅವರನ್ನು ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿಯೂ ನೇಮಕ ಮಾಡಿತು. ಬಳಿಕ ಆದಷ್ಟು ಬೇಗನೆ ಒಂದು ಹೈಸ್ಕೂಲನ್ನು ತೆರೆಯಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿತು. ಹಾಗೆಯೇ ಸ್ಕೂಲಿಗಾಗಿ ಒಂದು ಸರಿಯಾದ ಮತ್ತು ಶಾಶ್ವತವಾದ ಸ್ಥಳ ದೊರಕುವವರೆಗೆ ಲಾಹೋರಿನಲ್ಲಿ ಅದನ್ನು ತಾತ್ಕಾಲಿಕವಾಗಿ ಆರಂಭಿಸುವುದೆಂದು ನಿರ್ಣಯಿಸಲಾಯಿತು. ಈ ನಿರ್ಣಯಗಳಿಂದಾಗಿ ವಸಂತ ಋತುವಿನ ಅಷ್ಟೂ ತಿಂಗಳುಗಳಲ್ಲಿ ಅನೇಕ ಸರಣಿ ಸಭೆಗಳನ್ನು ನಡೆಸಬೇಕಾಯಿತು. ಯಾಕೆಂದರೆ ಹೊಸ ಸ್ಕೂಲನ್ನು 1886ರ ಜೂನ್ 1ರಂದು ತೆರೆಯಬೇಕಿತ್ತು.[21] ಉಪಮಂಡಳಿಗಳು ಬೇರೆ ಬೇರೆ ಸಮಸ್ಯೆಗಳ ಬಗ್ಗೆ ತಮ್ಮ ಕೆಲಸವನ್ನು ಪ್ರಾರಂಭಿಸಿದವು. ಇವುಗಳಲ್ಲಿ ವ್ಯವಸ್ಥಾಪಕ ಮಂಡಳಿಯ ವ್ಯವಹಾರದ ನೀತಿ ನಿಯಮಗಳು, ಪ್ರತಿ ಕ್ಲಾಸಿನಲ್ಲಿ ನಡೆಯಬೇಕಾದ ಶಿಕ್ಷಣದ ವಿವರವಾದಒಂದು ಮಾದರಿ, ಶಾಲೆಯ ಬೋಧಕ ವರ್ಗ ಮತ್ತು ಸಿಬ್ಬಂದಿ ವರ್ಗದ ನೇಮಕಾತಿಯ ರೂಪುರೇಷೆಗಳು..... ಹೀಗೆ ಮಾಡಬೇಕಾದ ಕೆಲಸಗಳಿಗೆ ಕೊನೆಯೇ ಇರಲಿಲ್ಲ. ವಿಶೇಷವಾಗಿ ಮಂಡಳಿಗಳು ಮತ್ತು ಉಪಮಂಡಳಿಗಳು ತಮಗೆ ಸರಿಕಂಡ ವ್ಯಕ್ತಿಗಳನ್ನೇ ಮತ್ತೆ ಮತ್ತೆ ಈ ಕೆಲಸಗಳಿಗೆ ಆರಿಸುತ್ತಿದ್ದುದರಿಂದ ಈ ಕೆಲಸ ಮತ್ತಷ್ಟು ಜಟಿಲವಾಯಿತು.[22]

ಯುವಕರಲ್ಲಿ ಪಂಡಿತ್ ಗುರುದತ್ತ ವ್ಯವಸ್ಥಾಪಕ ಮಂಡಳಿಯಲ್ಲಿ ಬಹಳ ಸಕ್ರಿಯರಾಗಿದ್ದರು ಮತ್ತು ಆರಂಭದ ಯೋಜನೆಗಳಲ್ಲಿ ಮುಖ್ಯ ಪಾತ್ರವನ್ನು

[20] Proceedings DAVCMC 1885

[21] Date was decided upon the Managing Committee Meeting of April 24, as was the scheme of studies.

[22] Lala Lal Chand carried the greatest responsibility, followed by Lala Sain Das, Lala Ishwar Das, Lala Madan Singh, Lala JawalaSahai, Lala Mul Raj and Lala Jiwan Das.

ವಹಿಸಿದರು. 1886ರಲ್ಲಿ ಅವರು ತಮ್ಮ ಎಂ.ಎ ಪದವಿಯನ್ನು ಮುಗಿಸಿದ ನಂತರ ಸರಕಾರಿ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಇದು ಅವರಿಗೆ ಆ ಇಡಿಯ ಪ್ರಾಂತ್ಯದಲ್ಲೇ ಪ್ರತಿಷ್ಠಿತ ಕಾಲೇಜೊಂದರ ಪ್ರಾಧ್ಯಾಪಕ ಸದಸ್ಯರಾಗಿ ಮಾತನಾಡುವ ವಿಶೇಷ ಅಧಿಕಾರವನ್ನು ನೀಡಿತು. ಮುಂದಿನ ವರ್ಷ ಜೆ.ಸಿ.ಓಮನ್‌ರಜೆಯ ಮೇಲೆ ಹೋದಾಗ ಅವರ ಜಾಗದಲ್ಲಿ ಗುರುದತ್ತ ಅವರು ಮುಖ್ಯ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಗುರುದತ್ತರ ಯಶಸ್ಸಿನ ಕಾರಣದಿಂದ ಶೈಕ್ಷಣಿಕ ಚಳುವಳಿಯಲ್ಲಿ ಅವರ ಪಾತ್ರಕ್ಕೆ ಇನ್ನಷ್ಟು ಮನ್ನಣೆದೊರೆಯಿತು. ಹಾಗೆಯೇ ಆರ್ಯ ಸಮಾಜದ ಮುಖಂಡರೂ ಅವರನ್ನು ಸ್ವೀಕರಿಸಿದರು. ಲಾಲಾ ಹಂಸ್‌ರಾಜ್ ಅವರು ಗುರುದತ್ತರ ದಾರಿಯನ್ನು ಅನುಸರಿಸಿದರು. ಹಂಸ್‌ರಾಜ್‌ರದು ಗುರುದತ್ತರಷ್ಟು ಆಕರ್ಷಕ ವ್ಯಕ್ತಿತ್ವವಾಗಿರಲಿಲ್ಲ. ಆದರೆ ಶೈಕ್ಷಣಿಕ ಚಳುವಳಿಯ ಬಗ್ಗೆ ಅವರಿಗೆ ಇದ್ದ ಶ್ರದ್ಧೆ ಹಾಗೂ ಅವರ ಶಾಲೆಯ ಉದ್ಯೋಗದ ಬಗ್ಗೆ ಇದ್ದ ಅವರ ಬದ್ಧತೆಯಿಂದಾಗಿ ನಿಧಾನವಾಗಿ ಅವರ ಅಧಿಕಾರ ಹೆಚ್ಚಾಗುತ್ತಾ ಹೋಯಿತು. ಇದು ವ್ಯವಸ್ಥಾಪಕ ಮಂಡಳಿಯ ಮತ್ತು ಟ್ರಸ್ಟಿನ ಅಧ್ಯಕ್ಷರಾಗಿಯೂ ಇದ್ದ ಲಾಲಾ ಲಾಲ್‌ಚಂದರ ಸ್ಥಾನವನ್ನು ಇನ್ನಷ್ಟು ಬಲಪಡಿಸಿತು. ಶಿಸ್ತು ಮತ್ತು ಕಾರ್ಯಕ್ಷಮತೆಯಲ್ಲಿ ಹಂಸ್‌ರಾಜ್ ಅದ್ಭುತ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಹಾಗೆ ನೋಡಿದರೆ ಶಾಲೆಯ ಪ್ರಾಂಶುಪಾಲರಾಗುವುದಕ್ಕೆ ಅವರು ತಕ್ಕ ವ್ಯಕ್ತಿಯಾಗಿದ್ದರೆನ್ನಬಹುದು. ಕಠಿಣ ಸ್ವಭಾವ, ಜವಾಬ್ದಾರಿಯ ನಡವಳಿಕೆ, ಮಡಿವಂತಿಕೆ- ಹೀಗೆ ಎಲ್ಲ ಗುಣಗಳೂ ಆರ್ಯ ಸಮಾಜದ ಶಿಕ್ಷಣಕ್ಕೆ ಹೇಳಿ ಮಾಡಿಸಿದಂತೆ ಇದ್ದವು. ಹಂಸ್‌ರಾಜ್ ಅವರ ದೊಡ್ಡಣ್ಣ ಲಾಲಾ ಮುಲ್ಕ್‌ರಾಜ್‌ಅವರೂ ಇದೇ ಬಗೆಯ ದೃಢ ಸಂಕಲ್ಪವನ್ನು ಹೊಂದಿದವರೇ. ತನ್ನ ತಮ್ಮನನ್ನು ಬೆಂಬಲಿಸುವ ಮುಲ್ಕ್‌ರಾಜ್ ಅವರ ನಿರ್ಧಾರದಿಂದಾಗಿ ಹಂಸ್‌ರಾಜ್‌ಅವರು ಕಾಲೇಜಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳಲು ಸಾಧ್ಯವಾಯಿತು. ಮುಲ್ಕ್‌ರಾಜ್ ತಮ್ಮ ಪ್ರತಿ ತಿಂಗಳ ಸಂಪಾದನೆಯಾದರೂ 80ರಲ್ಲಿ ಸರಿಯಾಗಿ ಅರ್ಧದಷ್ಟನ್ನು ಹಂಸ್‌ರಾಜ್‌ಅವರಿಗೆ ಕೊಡುವುದಾಗಿ ಪ್ರತಿಜ್ಞೆ ಮಾಡಿದರು. ಉಳಿದಿರುವ ಹಣದಲ್ಲಿ ಎರಡು ಮನೆಗಳನ್ನು ನಡೆಸುವುದಲ್ಲದೆ, ತಂದೆಯ ಕುಟುಂಬದ ಉಳಿದ ಕೆಲವರನ್ನೂ ನೋಡಿಕೊಳ್ಳಬೇಕಿತ್ತು.[23] ಈ ಇಬ್ಬರು ಅಣ್ಣ-ತಮ್ಮಂದಿರ ನಿರ್ಧಾರ ಸಣ್ಣದೇನಲ್ಲ. 1880ರ ಕಾಲದಲ್ಲಿ ಶಿಕ್ಷಣವನ್ನು ಪಡೆದ ಪಂಜಾಬಿಗಳಿಗೆ ಒಳ್ಳೆಯ ಕೆಲಸವೇನೋ ಧಾರಾಳವಾಗಿ ಸಿಗುತ್ತಿತ್ತು. ಹಂಸ್‌ರಾಜ್ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಲು ಒಪ್ಪಿದ್ದಷ್ಟೇ ಅಲ್ಲ, ತನಗೆ ಸಿಗಬಹುದಾದ ದೊಡ್ಡ ಸಂಬಳದ ಶ್ರೀಮಂತ ಬದುಕನ್ನೂ ನಿರಾಕರಿಸಿದರು. ಜೊತೆಗೇ ಶ್ರೀಮಂತಿಕೆಯನ್ನು ತನಗೆ ಮಾತ್ರವಲ್ಲ, ತನ್ನ ಬಡಕುಟುಂಬಕ್ಕೂ ನಿರಾಕರಿಸಿದರು.

[23] Sri Ram Sharma, Mahatma Hans Raj, pp 40-41

ಹಂಸ್‌ರಾಜ್‌ಅವರ ಪರಹಿತಚಿಂತನೆಯ ಈ ಮನೋಭಾವ ಬೇರೆಯವರಲ್ಲಿ ಸ್ಫೂರ್ತಿಯನ್ನೂ, ಆಸಕ್ತಿಯನ್ನೂ ಹುಟ್ಟಿಸಿತು. 1886ರಲ್ಲಿ ಮುಲ್ತಾನಿನ ಒಬ್ಬ ಗುತ್ತಿಗೆದಾರ ಲಾಲಾ ಜ್ವಾಲಾ ಸಹಾಯ್ ಎಂಬವನು 8,000 ರೂಪಾಯಿಗಳಷ್ಟು ಧನವನ್ನು ಆಂಗ್ಲೋ ವೇದಿಕ್ ಕಾಲೇಜಿಗಾಗಿ ದಾನ ಮಾಡಿದ. ಈ ದಾನ ಅಲ್ಲಿಯವರೆಗೆ ಧನ ಸಹಾಯ ಸಿಕ್ಕಿದ್ದರಲ್ಲೇ ಅತಿ ದೊಡ್ಡದಾಗಿತ್ತು. ಮತ್ತು ಇದು 'ದಯಾನಂದ್‌ಆಂಗ್ಲೋ ವೇದಿಕ್ ಹೈಸ್ಕೂಲ'ನ್ನು ತೆರೆಯಲು ಸಹಾಯಕವಾಯಿತು. ಆದರೆ ಈ ಸಹಾಯ ಸ್ಕೂಲನ್ನು ನಡೆಸುವಷ್ಟಕ್ಕೆ ಸಾಕಾಗಿರಲಿಲ್ಲ. ಪರಿಣಾಮವಾಗಿ 1886ರ ಫೆಬ್ರುವರಿ ತಿಂಗಳಲ್ಲಿ ಲಾಹೋರ್ ಸಮಾಜ ತಿಂಗಳ ಚಂದಾ ಎತ್ತಲು ಒಂದು ದೊಡ್ಡ ಅಭಿಯಾನವನ್ನೇ ಆರಂಭಿಸಿತು. ಎಲ್ಲಿಯವರೆಗೆ ಮೂಲ ಬಂಡವಾಳದ ಬಡ್ಡಿಯಿಂದ ಬಂದ ಸಂಪಾದನೆಯಲ್ಲಿ ಸ್ಕೂಲನ್ನು ನಡೆಸುವುದು ಸಾಧ್ಯವಾಗುತ್ತದೋ, ಅಲ್ಲಿಯವರೆಗೆ ತಿಂಗಳಿಗೆ ರೂ 400ರಷ್ಟು ಮೊತ್ತವನ್ನು ಚಂದಾ ಎತ್ತಬೇಕು ಎಂಬ ನಿರ್ಧಾರಕ್ಕೆ ಬಂದರು.[24] ಉಳಿದ ದುಡ್ಡನ್ನು ಸ್ಕೂಲ್ ಫೀಸಿನಿಂದ ನಿಭಾಯಿಸಬಹುದಾಗಿತ್ತಾದರೂ, ಶಿಕ್ಷಣಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ವ್ಯವಸ್ಥಾಪಕ ಮಂಡಳಿ ನಿಯಮಿತವಾದ ಆದರೆ ಬಹಳ ಕಡಿಮೆ ಮೊತ್ತದ ಫೀಸನ್ನು ನಿಗದಿ ಮಾಡಿದರು. ಸರಕಾರಿ ಮತ್ತು ಮಿಶನರಿ ಸ್ಕೂಲುಗಳಂತೆ ಪ್ರತಿಕುಟುಂಬದ ಆರ್ಥಿಕ ಸ್ಥಿತಿಗೆ ಅನುಗುಣವಾಗುವಂತೆ ಅಷ್ಟೊಂದು ಕಡಿಮೆ ಮಟ್ಟದವರೆಗೂ ಫೀಸನ್ನು ಇಳಿಸದೆ ಇದ್ದರೂ, ದಯಾನಂದ್ ಆಂಗ್ಲೋ ವೇದಿಕ್ ಸ್ಕೂಲುಗಳು ಎಲ್ಲರಿಗೂ ಒಂದೇ ಬಗೆಯ ಫೀಸನ್ನು ನಿಗದಿ ಮಾಡಿದವು ಮತ್ತು ಫೀಸನ್ನು ಆದಷ್ಟು ಕಡಿಮೆ ಇಡಲಾಯಿತು.[25] ಹೀಗೆ ಕಡಿಮೆ ಫೀಸಿನ ಕಾರಣದಿಂದ ಅತ್ಯಂತ ಬಡವರಾಗಿರುವ ಗುಮಾಸ್ತರು ಮತ್ತು ಸಣ್ಣ ಪುಟ್ಟ ಅಂಗಡಿಗಳವರು ಕೂಡ ತಮ್ಮ ಮಕ್ಕಳನ್ನು ಶಿಕ್ಷಣಕ್ಕಾಗಿ ಕಳಿಸಲು ಸಾಧ್ಯವಾಯಿತು. ಈ ಕಾರಣದಿಂದ ಅನೇಕ ಸಂಖ್ಯೆಯಲ್ಲಿ ಮಕ್ಕಳು ಬಂದರು. ಮಕ್ಕಳ ಫೀಸಿನಿಂದ ಸ್ಕೂಲನ್ನು ನಡೆಸಲು ಸಾಧ್ಯವಾಯಿತು. ವ್ಯವಸ್ಥಾಪಕ ಮಂಡಳಿಯು ಫೀಸಿನ ವೇಳಾಪಟ್ಟಿಯನ್ನು ಪ್ರಕಟಿಸುವುದರೊಂದಿಗೆ ತನ್ನ ಶೈಕ್ಷಣಿಕ ಯೋಜನೆಗಳನ್ನೂ ಪ್ರಕಟಿಸಿತು. ತರಗತಿಗಳ ಸ್ವರೂಪ, ಭಾಷಾ ಮಾಧ್ಯಮ, ಪಠ್ಯಕ್ರಮ ಯೋಜನೆ ಇತ್ಯಾದಿಗಳ ಬಗೆಗೂ ಪ್ರಕಟಣೆಗಳನ್ನು ಹೊರಡಿಸಿತು. ಆರ್ಯ ಸಮಾಜಿಗಳು ಸರಕಾರಿ ಶಾಲೆಗಳ ಈಗಾಗಲೇ ಚಾಲ್ತಿಯಲ್ಲಿರುವ

---

[24] Sharma Ibid p 48

[25] The final fee schedule announced in the school prospectus was as follows:

| | |
|---|---|
| Admission Fees | |
| From students admitted in the lower primary department | as 4 |
| From students admitted in the upper primary department | as 8 |
| From students admitted in the Middle and upper departments | as 1 |
| Monthly fees | |
| Lower primary department | as 2 |
| Upper primary department | as 4 |
| Middle department | as 8 |
| Upper department | Rs 1 |

ಶಿಕ್ಷಣದ ಸ್ವರೂಪವನ್ನು  ಒಪ್ಪಿಕೊಂಡೇ ವೇದಿಕ್ ಶಿಕ್ಷಣವನ್ನು ತಮ್ಮ ಪಠ್ಯಕ್ರಮದಲ್ಲಿ ಸೇರಿಸಿಕೊಂಡರು (ನೋಡಿಅನುಬಂಧ 2). ಮೇ ತಿಂಗಳು ಮುಗಿಯುವುದರೊಳಗೆ ಆರ್ಯ ಸಮಾಜಿಗಳು ಹೊಸ ಶಾಲೆಯ  ಯೋಜನೆಯನ್ನು ಪೂರ್ಣಗೊಳಿಸಿದರು. ಹಾಗಿದ್ದರೂ ಅವರೆಲ್ಲರ ಉತ್ಸಾಹದ ಹಿಂದೆ ಸ್ವಲ್ಪಮಟ್ಟಿಗೆ ಆತಂಕವೂ ಇತ್ತು ಎಂದರೆ ತಪ್ಪಾಗಲಾರದು. ಶಾಲೆ ಯಶಸ್ವಿಯಾಗುತ್ತೋ ಇಲ್ಲವೋ, ಒಂದು ವೇಳೆ ಪ್ರಯತ್ನದಲ್ಲಿ ಸೋತು ಹೋದರೆ ಜೊತೆಯಲ್ಲೇ ಅವರ ಸುರಕ್ಷಿತವಾದ, ಹಿಂದುತ್ವವನ್ನು ಒಳಗೊಂಡ ಶಿಕ್ಷಣದ ಕನಸೂ ನಾಶವಾಗಬಹುದಾಗಿತ್ತೋ... ಯಾರಿಗೆ  ಗೊತ್ತು? ಅನಿಶ್ಚಿತವಾದ ಭವಿಷ್ಯವೇ ಉತ್ತರವನ್ನು ಹೇಳಬೇಕಾಗಿತ್ತು !

## ಕ್ರಿಯಾಶೀಲಗೊಂಡ ದಯಾನಂದ್ ಆಂಗ್ಲೋ ವೇದಿಕ್ ಶಾಲೆ

1886, ಜೂನ್ 1ರಂದು ದಯಾನಂದ್  ಆಂಗ್ಲೋ ವೇದಿಕ್ ಶಾಲೆ ತನ್ನ ಬಾಗಿಲನ್ನು  ತೆರೆಯಿತು. ಸಾರ್ವಜನಿಕರು ಬಹಳ ಉತ್ಸಾಹದಿಂದಲೇ ಪ್ರತಿಕ್ರಿಯಿಸಿದರು. ಮೊದಲ ವಾರದ  ಕೊನೆಯಲ್ಲಿ ಸುಮಾರು 300 ವಿದ್ಯಾರ್ಥಿಗಳು ಶಾಲೆಗೆ ಸೇರಿದರು.[26] ಅಧ್ಯಾಪಕರು ಬಹಳ ಶೀಘ್ರವಾಗಿ ಮೊದಲ ತರಗತಿಯಿಂದ 12ನೆಯ ತರಗತಿಯವರೆಗೆ ಕ್ಲಾಸುಗಳನ್ನು ಆಯೋಜಿಸಿದರು. ಅಷ್ಟೇ ಅಲ್ಲ, ಕೆಲವು ಕ್ಲಾಸುಗಳಿಗೆ ಹಲವು ವಿದ್ಯಾರ್ಥಿಗಳು ಸೇರಿದ್ದರಿಂದ ಬೇರೆ ಬೇರೆ ವಿಭಾಗಗಳನ್ನು ಮಾಡಬೇಕಾಯಿತು. [27] ಜೂನ್ಅಂತ್ಯದ ವೇಳೆಗೆ ಸ್ಕೂಲಿನ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 550ಕ್ಕೂ ಹೆಚ್ಚಾಯಿತು. [28] ಈ ರೀತಿಯ ಸಂಖ್ಯೆ  ಆರ್ಯ ಸಮಾಜದ ಮೇಲೆ ಜನರಿಗಿದ್ದ ನಂಬಿಕೆಯನ್ನು, ಯಶಸ್ಸಿನ ಆಶಾಭಾವನೆಯನ್ನೂ ಸೂಚಿಸುವಂತಿತ್ತು. ಅದೇ ವೇಳೆಗೆ ಜನರಿಗೆ ಸರಕಾರಿ ಮತ್ತು ಮಿಶನರಿ ಶಾಲೆಗಳ ಬಗ್ಗೆ ಇರುವ ಭಯವನ್ನು ಹೇಳುವಂತಿತ್ತು. ಒಂದು ವರ್ಷ ಕಳೆಯುವುದರೊಳಗೆ ಆಶಾಭಾವನೆ  ಆತ್ಮವಿಶ್ವಾಸಕ್ಕೆ ತಿರುಗಿತು. ಹೊಸ ಶಾಲೆ ತನ್ನ ಸಾಮರ್ಥ್ಯವನ್ನು  ಅದ್ಭುತವಾಗಿ ಪ್ರದರ್ಶಿಸಿತು. ಶೈಕ್ಷಣಿಕ ವರ್ಷದ ಕೊನೆಯಲ್ಲಿ ದಯಾನಂದ್ ಆಂಗ್ಲೋ ವೇದಿಕ್ ಶಾಲೆಯ ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ  ಇತರ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸಿ ಪರೀಕ್ಷೆಯನ್ನು ಬರೆದರು. “ಕಲ್ಕತ್ತಾ ವಿಶ್ವವಿದ್ಯಾಲಯದ ಕಳೆದ ಬಾರಿಯ ಪ್ರವೇಶ ಪರೀಕ್ಷೆಯಲ್ಲಿ ಡಿ.ಎ.ವಿ ಶಾಲೆ ಸಾಧಿಸಿದ ಯಶಸ್ಸಿನಿಂದ ನಮ್ಮೆಲ್ಲರಿಗೂ ಸಂತೋಷವಾಗಿದೆ. ನಾಲ್ಕು ವಿದ್ಯಾರ್ಥಿಗಳನ್ನು ಹೆಚ್ಚಿನ ಶಿಕ್ಷಣಕ್ಕಾಗಿ ಪ್ರವೇಶ ಪರೀಕ್ಷೆಗೆ ಕಳಿಸಿದ್ದೆವು. ನಾಲ್ವರೂ ಪಾಸಾಗಿದ್ದಾರೆ. ಒಬ್ಬ ಮೊದಲ ದರ್ಜೆಯಲ್ಲಿ, ಇಬ್ಬರು ದ್ವಿತೀಯ  ದರ್ಜೆಯಲ್ಲಿ ಹಾಗೂ ಒಬ್ಬನು ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಫಲಿತಾಂಶವೇಅದನ್ನು ಹೇಳುತ್ತದೆ” [29] ಎಂಬುದಾಗಿ ಮಂಡಳಿ ಹೇಳಿಕೆಯನ್ನು ಕೊಟ್ಟಿತು. ಡಿ.ಎ.ವಿ ಮಾಧ್ಯಮಿಕ ಶಾಲೆಯ 26 ವಿದ್ಯಾರ್ಥಿಗಳಲ್ಲಿ 14 ಜನ  ತೇರ್ಗಡೆಯಾದದ್ದು ಸಣ್ಣ

---

[26] Tribune June 5 1886, p 7

[27] College Report, 1886-87, p 13

[28] Arya Patrika June 22 1886 p 6

[29] Arya Patrika June 7, 1887, p 6

ವಿಷಯವಾಗಿರಲಿಲ್ಲ.[30] ಮೊದಲ ವರ್ಷದ ಈ ಫಲಿತಾಂಶ ಸಾರ್ವಜನಿಕರ ಆತ್ಮವಿಶ್ವಾಸವನ್ನು ಇನ್ನೂ ಗಟ್ಟಿಗೊಳಿಸಿತು. ಹಾಗೆಯೇ ಮುಂದಿನ ಕೆಲವಾರು ವರ್ಷಗಳಲ್ಲಿ ಎಲ್ಲಾ ಹಂತಗಳಲ್ಲಿಯೂ ಒಳ್ಳೆಯ ಫಲಿತಾಂಶವನ್ನೇ ನೀಡುತ್ತಾ ಬಂತು. ಸಂಸ್ಕೃತಿ, ಸಂಪ್ರದಾಯಗಳ ದೃಷ್ಟಿಯಿಂದ ದಯಾನಂದ ಆಂಗ್ಲೋ ವೇದಿಕ್ ಶಾಲೆ ಬಹಳ ಸುರಕ್ಷಿತವಾಗಿತ್ತಷ್ಟೇ ಅಲ್ಲ ಹೊಸ ಜಗತ್ತಿನಲ್ಲಿ ಯಶಸ್ವಿಯಾಗುವ ಎಲ್ಲ ಒಳ್ಳೆಯ ಅವಕಾಶಗಳನ್ನು ನೀಡಿತು. 1888ರಲ್ಲಿ ಸರಕಾರದಿಂದ ಯಾವುದೇ ಸಹಾಯ ನಿಧಿಯನ್ನು ಪಡೆಯದ ಡಿ.ಎ.ವಿ ಶಾಲೆ ಪ್ರವೇಶ ಪರೀಕ್ಷೆಯಲ್ಲಿ ಯಶಸ್ವಿಯಾದ 19 ವಿದ್ಯಾರ್ಥಿಗಳನ್ನು ಕೊಟ್ಟಿತು ಎಂಬುದನ್ನು ನಾವು ವಿಶೇಷವಾಗಿ ಉಲ್ಲೇಖಿಸಲೇಬೇಕು. ಇಡೀ ಪ್ರಾಂತ್ಯದಲ್ಲಿ ಇಷ್ಟು ವಿದ್ಯಾರ್ಥಿಗಳನ್ನು ಕೊಟ್ಟ ಬೇರೆಶಾಲೆಗಳಿಲ್ಲ. 41% ಶೇಕಡಾ ಯಶಸ್ವೀ ವಿದ್ಯಾರ್ಥಿಗಳನ್ನು ಕೊಟ್ಟ ಡಿ.ಎ.ವಿ ಶಾಲೆಯ ಶೇಕಡಾವಾರು ಬೇರೆ ಯಾವುದೇ ಸಂಸ್ಥೆಯಿಂದ ಹೆಚ್ಚಿನದಾಗಿತ್ತು.[31] ಹೀಗಾಗಿಯೇ ಸರಕಾರ ಹೊಗಳಿಕೆಯ ಜೊತೆಗೇ ಮಾನ್ಯತೆಯನ್ನೂ ನೀಡಿತು. ಶೈಕ್ಷಣಿಕವಾಗಿ ಸುರಕ್ಷಿತ ಸ್ಥಾನದಲ್ಲಿದ್ದ ಶಾಲೆಯಕ್ಷಿಪ್ರ ಬೆಳವಣಿಗೆಯಿಂದ ಸಂಸ್ಥೆಯ ಹಣಕಾಸಿನ ಸ್ಥಿತಿ ಸ್ವಲ್ಪ ಕ್ಲಿಷ್ಟವಾದ ಹಂತವನ್ನು ತಲುಪಿತೆಂದು ಹೇಳಬಹುದು.

ಆರ್ಯ ಸಮಾಜ ಈ ಹೊತ್ತಿಗಾಗಲೇ ಧನ ಸಂಗ್ರಹಣೆ ಮತ್ತು ನಿರ್ವಹಣೆಯಲ್ಲಿ ಸಾಕಷ್ಟು ವ್ಯವಸ್ಥಿತವಾದ ಮತ್ತು ಆಧುನಿಕವಾದ ವ್ಯವಸ್ಥೆಯನ್ನು ಮಾಡಿಕೊಂಡಿತ್ತು. ಆದರೆ ಶಾಲೆಯ ಅತಿ ಶೀಘ್ರ ಬೆಳವಣಿಗೆಯಿಂದಾಗಿ ಇನ್ನಷ್ಟು ಧನ ಸಹಾಯವನ್ನು ಹೊಂದಿಸಿಕೊಳ್ಳುವುದು ಸಮಾಜಿಗಳಿಗೆ ಅನಿವಾರ್ಯವಾಯಿತು. ಹಾಗೆಯೇ ಧನ ಸಹಾಯ ಪಡೆಯಲು ಹೊಸ ವಿಧಾನಗಳನ್ನು ಹುಡುಕಿಕೊಳ್ಳುವುದು ಅಗತ್ಯವಾಯಿತು. 1885ರ ಜೂನ್ ತಿಂಗಳಲ್ಲಿ ಆರ್ಯ ಪತ್ರಿಕೆಯಲ್ಲಿಧನ ಸಹಾಯಕೊಟ್ಟ ದಾನಿಗಳ ಪಟ್ಟಿ ಪ್ರಕಟವಾಯಿತು. 1886ರ ಏಪ್ರಿಲ್ ತಿಂಗಳಲ್ಲಿ ವ್ಯವಸ್ಥಾಪಕ ಮಂಡಳಿ ದಾನಿಗಳ ಪಟ್ಟಿಯನ್ನು ‘ಟ್ರಿಬ್ಯೂನ್’ ನಲ್ಲಿ ಪ್ರಕಟಿಸಲು ಆರಂಭಿಸಿತು.[32] ಈ ಪ್ರಕಟಣೆಗಳಿಂದಾಗಿ ದಾನಿಗಳಿಗೆ ಮಹತ್ವ ದೊರೆಯಿತು. ಅಷ್ಟೇ ಅಲ್ಲ, ಪಡೆದದಾನಕ್ಕೆ ಒಂದು ಹೊಣೆಗಾರಿಕೆಯೂ ಬಂತು. ಹಾಗೆಯೇ ಶೈಕ್ಷಣಿಕ ಚಳುವಳಿಗೆ ಒಳ್ಳೆಯ ಪ್ರಚಾರವೂ ದೊರೆಯಿತು. ಇದಲ್ಲದೇ ಮ್ಯಾನೇಜ್‌ಮೆಂಟ್ ಸೊಸೈಟಿತನ್ನ ನಿಯಮಿತವಾದ ಹಣಕಾಸಿನ ವರದಿಯನ್ನು ‘ಟ್ರಿಬ್ಯೂನ್’ ಮತ್ತು ‘ಆರ್ಯ ಸಮಾಜ ಪತ್ರಿಕೆ’ ಗಳಲ್ಲಿ ಪ್ರಕಟಿಸಿತು. 1887ರ ಮೇ ತಿಂಗಳಲ್ಲಿ ‘ಆರ್ಯ ಸಮಾಜಟ್ರಸ್ಟ್’ ಮತ್ತು ‘ಮ್ಯಾನೇಜ್‌ಮೆಂಟ್ ಸೊಸೈಟಿ’ ಯ ಮೊದಲ ವಾರ್ಷಿಕ ವರದಿಯನ್ನು ಪ್ರಕಟಿಸಲಾಯಿತು. ಹೀಗೆ ವರದಿಗಳು, ಲೇಖನಗಳು ಮತ್ತು ದಾನಿಗಳ

[30] College Report 1886-87 p 13

[31] Quoted in Sri Ram Sharma, Mahatma Hans Raj, p 51

[32] Arya Patrika, June 27, 1885, p 8. These lists were published in the tribune from April 3, 1886, through December 18, 1889, and listed some 1,302 donations including individual gifts, monthly subscriptions, receipts from special fund drives, receipts from local Arya Samajes and interest from bank deposits.

ಪಟ್ಟಿಎಲ್ಲವೂ ಶಿಕ್ಷಿತ ಸಮುದಾಯಕ್ಕೆ ನಿರಂತರವಾದ ಮಾಹಿತಿಯನ್ನು ಕೊಡುತ್ತಲೇ ಬಂದವು. ದಯಾನಂದ್ ಆಂಗ್ಲೋ ವೇದಿಕ್ ಶಾಲೆಯ ಹಣಕಾಸಿನ ಪ್ರಗತಿಯ ಬಗ್ಗೆ ಆರ್ಯ ಸಮಾಜಿಗಳು ಅನೇಕ ವಿಧಾನಗಳನ್ನು ಅನುಸರಿಸಿದರು. ಅವುಗಳಲ್ಲಿ ಕೆಲವು ಸಾಂಪ್ರದಾಯಿಕ ಪದ್ಧತಿಗಳು, ಇನ್ನು ಕೆಲವು ಹೊರಜಗತ್ತಿನಿಂದ ಅಳವಡಿಸಿಕೊಂಡ ವಿಧಾನಗಳು. ಒಟ್ಟಿನಲ್ಲಿ ಸಂಪನ್ಮೂಲಗಳನ್ನು ಒಟ್ಟು ಸೇರಿಸುವ ಎಲ್ಲ ಪ್ರಯತ್ನಗಳನ್ನು ಮಾಡಲಾಯಿತು.

ಮೊದಲಿಗೆ ಆರ್ಯ ಸಮಾಜಿಗಳು ಸಾರ್ವಜನಿಕ ಸಭೆಗಳು ಮತ್ತು ನಿಯೋಜಿತ ಕಾರ್ಯಕ್ರಮಗಳ ಮೂಲಕ ಧನ ಸಂಗ್ರಹಣೆ ಮಾಡುವಯೋಜನೆಯನ್ನು ಹಾಕಿಕೊಂಡರು. ದಯಾನಂದರ ಮರಣಾನಂತರ ಮೊದಲ ಸಂಸ್ಮರಣ ಸಭೆಯಿಂದತೊಡಗಿ, ಆರ್ಯ ಸಮಾಜಿಗಳು ಇಡಿಯ ಪಂಜಾಬ್ ಪ್ರಾಂತ್ಯದಲ್ಲಿ ಸಂಚರಿಸಿ ಶೈಕ್ಷಣಿಕ ಚಳುವಳಿಯ ಬಗ್ಗೆ ಅರಿವು ಮೂಡಿಸಿ ಧನ ಸಹಾಯಕ್ಕಾಗಿ ಪ್ರಯತ್ನ ಪಟ್ಟರು. ಆರ್ಯ ಸಮಾಜದ ಪತ್ರಿಕೆಗಳು ಹಾಗೂ ಇತರ ಪತ್ರಿಕೆಗಳು ಇಂತಹ ಪ್ರತಿ ಒಂದು ಕಾರ್ಯಕ್ರಮದ ಬಗ್ಗೆಯೂ ವರದಿಯನ್ನು ಮಾಡಿದವು. ಅಷ್ಟೇ ಅಲ್ಲ, ದಾನಿಗಳು ಈಗಾಗಲೇ ಕೊಟ್ಟಿರುವ ಅಥವಾ ಮುಂದೆಕೊಡುತ್ತೇವೆಂದು ಪ್ರತಿಜ್ಞೆ ಮಾಡಿದ ಮೊತ್ತಗಳನ್ನು ಕೂಡ ಈ ಪತ್ರಿಕೆಗಳು ವರದಿ ಮಾಡಿದವು. 1880ರ ಕೊನೆಯ ಭಾಗದಲ್ಲಿ ಇಂತಹ ಸಂದರ್ಭಗಳು ಪಂಜಾಬಿ ಹಿಂದೂಗಳ ಜೀವನದ ಸಾಮಾನ್ಯ ಅಂಶಗಳಾದವು. ಈ ಪಂಜಾಬಿ ಹಿಂದೂಗಳು ಆರ್ಯ ಸಮಾಜದ ಶಾಲೆಗಳಿಗಷ್ಟೇ ಧನ ಸಹಾಯ ಮಾಡಲಿಲ್ಲ. ಹೀಗೆ ಆರ್ಯ ಸಮಾಜ ಸುಶಿಕ್ಷಿತ ಮೇಲ್ವರ್ಗದವರಿಗೆ ಒಂದು ಸಾಮಾಜಿಕ ವೇದಿಕೆಯೂ ಆಯ್ತು. ದಯಾನಂದ್ ಆಂಗ್ಲೋ ವೇದಿಕ್ ಸ್ಕೂಲುಗಳು ಪಂಜಾಬಿ ಹಿಂದೂಗಳಿಗೆ ಎಲ್ಲವನ್ನೂ ಒಳಗೊಂಡ ಆದರ್ಶಗುರಿಯಾಗಿ ಕಾಣಿಸಿದವು. ಎಲ್ಲ ಹಿಂದೂಗಳೂ ತಮ್ಮತಮ್ಮ ಉದ್ಯೋಗದ ನಂತರದ ಸಮಯವನ್ನು ಸಮಾಜಕ್ಕಾಗಿ ಮತ್ತು ಅದರ ಚಟುವಟಿಕೆಗಳಿಗಾಗಿ ವ್ಯಯ ಮಾಡಿದರು. ಆರ್ಯರು ನಿಯಮಿತವಾಗಿ ವಾಯುವ್ಯ ದಿಕ್ಕಿನ ಕಡೆಗಿರುವ ಸಿಂಧ್, ರಾಜಸ್ತಾನ ಮೊದಲಾದ ಪ್ರಾಂತ್ಯಗಳಿಗೆ ಶಾಲೆಗಳಿಗಾಗಿ ಧನ ಸಹಾಯವನ್ನುಕೋರಿ ಪ್ರಯಾಣ ಬೆಳೆಸಿದರು. ಮತ್ತು ಬಹುತೇಕ ಯಶಸ್ವಿಯೂ ಆದರು. ಹಲವು ಗುಂಪುಗಳು ಧನ ಸಂಗ್ರಹಣೆಗಾಗಿ ನಿರಂತರವಾಗಿ ಪಂಜಾಬ್‌ನ ತುಂಬ ಸಂಚರಿಸಿದರು.

ಆರ್ಯ ಸಮಾಜದ ಪ್ರತಿನಿಧಿಗಳು ಬೇರೆ ಬೇರೆ ಪ್ರಾಂತ್ಯದಆರ್ಯ ಸಮಾಜಗಳ ವಾರ್ಷಿಕೋತ್ಸವಗಳಿಗೆಂದು ಪ್ರಯಾಣ ಮಾಡುತ್ತಿದ್ದರು. ಲಾಹೋರ್ ವಾರ್ಷಿಕೋತ್ಸವವನ್ನು ಅನುಕರಿಸಿ ಬೇರೆ ಬೇರೆ ಪ್ರಾಂತ್ಯಗಳ ಪ್ರತಿಯೊಂದು ಸಮಾಜವೂ ತನ್ನ ಸಮಾಜದ ಹುಟ್ಟುಹಬ್ಬವನ್ನು ಆಚರಿಸಲು ತೊಡಗಿತ್ತು. ಈ ವಾರ್ಷಿಕೋತ್ಸವದ ಆಚರಣೆಗೆ ಸ್ಥಳೀಯ ಸಮಾಜಿಗಳು ಒಟ್ಟು ಸೇರಲು ಒಂದು ಒಳ್ಳೆಯ ಅವಕಾಶವಾಗಿತ್ತು. ಹಾಗೆಯೇ ಪ್ರತಿ ಪ್ರಾಂತ್ಯದ ನಾಯಕರಿಗೆತಮ್ಮ ಸ್ಥಳೀಯ ಆಚರಣೆಗಳಿಗೆ ತಮ್ಮದೇ ಆದ ಗತ್ತನ್ನೂ ಪ್ರದರ್ಶಿಸುವ ಒಂದು ವೇದಿಕೆಯೂ ಆಯಿತು.

ತಮ್ಮ ಸಮಾಜದ ವಾರ್ಷಿಕೋತ್ಸವಕ್ಕೆ ಎಷ್ಟು ಜನ ಮುಖ್ಯಸ್ಥರು ಬಂದಿದ್ದರು, ಎಷ್ಟು ದುಡ್ಡು ಒಟ್ಟಾಯಿತು ಎಂಬುದರ ಮೇಲಿಂದ ಆಯಾಯ ಸಮಾಜದ ಪ್ರಾಮುಖ್ಯತೆ ನಿರ್ಧಾರವಾಗುತ್ತಿತ್ತು. ಹೊಸತಾಗಿ ಹುಟ್ಟಿಕೊಂಡ ಸಣ್ಣ ಸಮಾಜಗಳು ಸಾಧಾರಣವಾದ ಫಲಿತಾಂಶಗಳನ್ನು ಕೊಟ್ಟವು. ದಯಾನಂದ್ ಆಂಗ್ಲೋ ವೇದಿಕ್ ಕಾಲೇಜು ಸಮಿತಿಯ ಹಲವು ಸದಸ್ಯರು ಹಿಂದಿನ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಸಿಯಾಲ್‌ಕೋಟ್‌ಗೆ ಹೋಗಿದ್ದರು. ಸಿಯಾಲ್ ಕೋಟ್ ಕ್ಯಾಂಟೋನ್‌ಮೆಂಟಿನ ಅನೇಕ ಗಣ್ಯರು ಬಂದಿರುವ ಸದಸ್ಯರ ಉದ್ದೇಶಗಳ ಕುರಿತಾಗಿ ಸಹಾನುಭೂತಿಯನ್ನು ವ್ಯಕ್ತ ಪಡಿಸಿದರು. ಅಷ್ಟೇ ಅಲ್ಲ ತಮ್ಮ ತನು, ಮನ, ಧನಗಳನ್ನು ಈ ಪವಿತ್ರ ಉದ್ದೇಶಕ್ಕಾಗಿ ಮೀಸಲಾಗಿ ಇಡುತ್ತೇವೆ ಎಂದು ಪ್ರತಿಜ್ಞೆ ಮಾಡಿದರು. ಅದಕ್ಕೆ ಸಾಕ್ಷಿಯಾಗಿ ಅಲ್ಲೇ, ಆ ಕ್ಷಣದಲ್ಲೇರೂ 85ನ್ನು ಒಟ್ಟು ಮಾಡಿ ಶ್ಲಾಘನೀಯವಾದ ಒಂದು ಒಕ್ಕಣೆಯನ್ನು ಬರೆದು ಅದನ್ನು ಆರ್ಯ ಸಮಾಜದ ಸದಸ್ಯರಿಗೆ ಸಮರ್ಪಿಸಿದರು.[33] ಈ ಸದಸ್ಯರು ಹೆಚ್ಚಾಗಿ ರೈಲಿನಲ್ಲಿ ಪ್ರಯಾಣಿಸಿ ಬಂದಿದ್ದರೂ, ಈ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾದರೂ ಆರ್ಯ ಸಮಾಜಿಗಳು ತಮ್ಮಕಾರ್ಯ ವೈಖರಿಯಲ್ಲಿ ಸಾಕಷ್ಟು ಸಾಂಪ್ರದಾಯಿಕ ಅಂಶಗಳನ್ನು ಅಳವಡಿಸಿಕೊಂಡಿದ್ದರು ಎನ್ನಬಹುದು. ಇಲ್ಲಿ ನಿಧಿಯನ್ನು ಶ್ಲಾಘನೆಯ ಮಾತುಗಳೊಂದಿಗೆ ಅರ್ಪಿಸುವ ಕ್ರಮವಿದೆಯಲ್ಲ, ಅದುಸಮಕಾಲೀನ ಅಗತ್ಯಗಳಿಗೆ ಹಾಗೆಯೇ ಗತಕಾಲದ ರೂಢಿಗೆ ತಕ್ಕುದಾದ ಕ್ರಮವಾಗಿತ್ತು.

ಶ್ರೀಮಂತರಿರುವಂತಹ ಆರ್ಯ ಸಮಾಜಿಗಳಲ್ಲಿ ವಾರ್ಷಿಕಆಚರಣೆಯನ್ನು ಮಾಡುವುದು ಆದಾಯದ ಮುಖ್ಯ ಮೂಲವಾಯಿತು. 1887, ಜೂನ್ 7ರ ಆರ್ಯ ಪತ್ರಿಕೆ ಪೇಷಾವರ ಆರ್ಯ ಸಮಾಜದ ಕೊನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿರೂ 1,300 ರಷ್ಟು ಹಣವನ್ನು ಸಂಗ್ರಹ ಮಾಡಲಾಯಿತು ಎಂದು ವರದಿ ಮಾಡಿತು.[34] 1889ರಲ್ಲಿ ಅಮೃತಸರದ ಆರ್ಯ ಸಮಾಜರೂ 1,300ರನ್ನು ತನ್ನ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಂಗ್ರಹಿಸಿತು. ಅಷ್ಟೇ ಅಲ್ಲ, ಇನ್ನೂ 1,900 ರೂಗಳನ್ನು ಸದಸ್ಯತ್ವದ ಮೂಲಕ ಸಂಗ್ರಹಿಸುತ್ತೇವೆ ಎಂದು ಶಪಥ ಮಾಡಿತು. ಅದೇ ವರ್ಷ ಗುರ್ಜನ್‌ವಾಲಾ ಆರ್ಯ ಸಮಾಜವೂ 1,300 ರೂಗಳನ್ನು ನಗದಿನಲ್ಲಿಯೂ, ರೂ 1,500ರನ್ನು ಸದಸ್ಯತ್ವದಲ್ಲಿಯೂ ಸಂಗ್ರಹಿಸಿತು.[35] 1890ರ ವೇಳೆಗೆ ಸಂಗ್ರಹವಾದ 12,322ರಲ್ಲಿ ರೂ 7,245ರಷ್ಟು ವಾರ್ಷಿಕೋತ್ಸವದ ವತಿಯಿಂದ ಒಟ್ಟಾಗಿತ್ತು.[36] ಹೀಗೆ ಆರ್ಯ ಸಮಾಜಿಗಳು ಸಾಕಷ್ಟು ದೊಡ್ಡ ಮೊತ್ತವನ್ನು ಸಂಗ್ರಹಿಸುತ್ತಾ ಹೋದರು. ಮತ್ತು ಹೆಚ್ಚಿನ ಈ ಆದಾಯವು ಸಾವಿರಾರು ಪಂಜಾಬಿಗಳು ಬಹಳ ಕ್ರಮಬದ್ಧವಾಗಿ

[33] Arya Patrika August 23, 1887, p 7.
[34] Arya patrika, June 7, 1887, p 6-7
[35] Tribune, October 12, 1889, p 5 and February 27, 1889, p 7
[36] College report, 1889-1890, p 12

ಹಾಗೂ ನಿಷ್ಠೆಯಿಂದ ಕೊಡುತ್ತಿದ್ದ ಸಣ್ಣ ಸಣ್ಣ ಮೊತ್ತಗಳಿಂದ ಸೇರಿದ ಆದಾಯವಾಗಿತ್ತು.

ತಪ್ಪದೆ ಕ್ರಮಬದ್ಧವಾಗಿ ಬರುವ ಈ ಸಣ್ಣ ದಾನಗಳನ್ನು ಉತ್ತೇಜಿಸುವ ಪದ್ಧತಿ ಆರಂಭವಾಗಿದ್ದು ಲಾಹೋರ್ ಸಮಾಜವು ತಿಂಗಳ ಚಂದಾ ಪದ್ಧತಿಯನ್ನು ಅಳವಡಿಸಿಕೊಂಡದ್ದರಿಂದ ಎಂಬುದಂತೂ ನಿಜ. ಆ ಸಮಯದಲ್ಲಿ ಟ್ರಸ್ಟ್ ಮತ್ತು ವ್ಯವಸ್ಥಾಪಕ ಸಂಸ್ಥೆಯ ಒಟ್ಟು ಬಂಡವಾಳ ರೂ 36,000 ಕ್ಕೆ ಬಂದು ನಿಂತಿತು. ಈ ಮೊತ್ತವನ್ನು ಒಮ್ಮತದಿಂದ ಶೇಕಡಾ 4ರ ಬಡ್ಡಿಯಂತೆ ಗವರ್ನ್ ಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹೂಡಲಾಯಿತು. ಇದರಿಂದ ಪ್ರತಿ ತಿಂಗಳು ರೂ 120ರಷ್ಟು ಬಡ್ಡಿ ಬರಬಹುದಿತ್ತು. ಆದರೆ ಇದು ಶಾಲೆಯ ದೈನಂದಿನ ಖರ್ಚುಗಳನ್ನು ಸರಿತೂಗಿಸಲು ಸಾಕಾಗುವಷ್ಟಿರಲಿಲ್ಲ. ಕಡಿಮೆ ಬೀಳುವ ದುಡ್ಡನ್ನು ತಿಂಗಳ ಚಂದಾದಲ್ಲಿ ಹೊಂದಿಸಿಕೊಳ್ಳಬೇಕಾಗುತ್ತಿತ್ತು. ಆಗಲೇ ಶಾಲೆಯ ಹಿತಚಿಂತಕರು 'ಶಾಶ್ವತ ನಿಧಿ' ಗಾಗಿತಮ್ಮ ಅಭಿಯಾನವನ್ನು ಆರಂಭಿಸಿದರು.[37] ಇದರಿಂದ ಬಂದ ಬಡ್ಡಿಯ ಹಣದಿಂದ ಶಾಲೆಯನ್ನು ನಡೆಸುವಂತಾಗಬೇಕೆಂದು ಇವರು ಆಶಿಸಿದರು. ಹಲವು ಸಮಾಜಿಗಳು ಇದಕ್ಕೆತಕ್ಷಣವೇ ಪ್ರತಿಸ್ಪಂದಿಸಿದರು. ತಿಂಗಳಿಗೆ ರೂ 250ರಷ್ಟು ಚಂದಾವನ್ನುಒಟ್ಟು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಈ ವ್ಯವಸ್ಥೆಯಲ್ಲಿ ಸಿಗುತ್ತಿದ್ದುದ್ದು ಸಣ್ಣ ಸಣ್ಣ ಮೊತ್ತವೇ ಆಗಿದ್ದರೂ, ಈ ಅಭಿಯಾನ ನಿಧಾನವಾಗಿ ಹಬ್ಬಿತು. ಅಷ್ಟೇ ಅಲ್ಲ, ಒಂದು ದೊಡ್ಡ ಸಂಪಾದನೆಯ ಮೂಲವಾಗಿ ಬದಲಾಯಿತು. ಸಾಮಾಜಿಕ ಬದ್ಧತೆ ಮತ್ತು ಒತ್ತಡಗಳ ಜೊತೆ ಉತ್ಸಾಹವೂ ಸೇರಿಕೊಂಡು ಸಂಘ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಧನ ಸಹಾಯವನ್ನು ಮಾಡಿದರು. ಧನ ಸಹಾಯ ಮಾಡದೆ ಇದ್ದರೆ ತನ್ನ ಓರಗೆಯವರ ಜೊತೆ ತಲೆ ಎತ್ತಿ ತಿರುಗಾಡುವುದು ಹೇಗೆ ಎಂಬಂತಹ ಸಂದರ್ಭ ನಿರ್ಮಾಣವಾಯಿತು. "ಸಭ್ಯರು, ಸಾಮಾನ್ಯ ಜನರು ಎಲ್ಲ ಬಗೆಯ ಜನರೂ ಎಲ್ಲೆಡೆಯಿಂದ ಡಿ.ಎ.ವಿ ಕಾಲೇಜಿನ ಈ ಶೈಕ್ಷಣಿಕ ಚಳುವಳಿಗೆ ಸಹಾಯ ನೀಡುತ್ತಿರುವುದು ಬಹಳ ಸಂತೋಷದ ವಿಷಯ. ಭಟಿಂಡಾದ ರೈಲ್ವೇ ಸ್ಟೇಶನ್‌ನಲ್ಲಿ ಕೆಲಸ ಮಾಡುವ ಕಾರಕೂನರು ತಮ್ಮ ಸಂಬಳದ ಪ್ರತಿ ಒಂದು ರೂಪಾಯಿಗೆ 3 ಪೈಸೆಯಂತೆ, ಪ್ರತಿ ತಿಂಗಳು ಡಿ.ಎ.ವಿ ಕಾಲೇಜಿನ ನಿಧಿಗಾಗಿದಾನ ಮಾಡಲು ಒಪ್ಪಿದ್ದಾರೆ. ಇವರ ಕೊಡುಗೆ ಈ ರೀತಿಯಲ್ಲಿ ಮಾಸಿಕ ರೂ. 2/10 ರೂಪಾಯಿಗಳಷ್ಟು ಆಗುತ್ತದೆ"[38] ಎಂಬ ಈ ಮಾತು ಎಲ್ಲ ಕಡೆ ಹರಿದಾಡಿತು. ಒಟ್ಟಿನಲ್ಲಿ ಗುಂಪಿನ ಧನ ಸಹಾಯ-ಕಾರಕೂನರು ಮತ್ತು ಬೇರೆ ಬೇರೆ ಆಫೀಸುಗಳ ಕೆಲಸಗಾರರು, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ವ್ಯಾಪಾರಿಗಳು ಹೀಗೆ ಎಲ್ಲ ಕಡೆಯಿಂದ ಹರಿದು ಬಂತು.

ಪಂಜಾಬ್ ಪ್ರಾಂತ್ಯದ ಹೊರಗಿರುವ ಪಂಜಾಬಿಗಳು ಕೂಡ ಈ ಕಾಲೇಜು ಚಳುವಳಿಗಾಗಿ ಧನ ಸಹಾಯ ಮಾಡಿದರು. ಜನ ವ್ಯಕ್ತಿಗತ ನೆಲೆಯಲ್ಲಿ ಭಾರತದ

---

[37] College report, 1886-1887, p 26

[38] Arya Patrika, December 14, 1886, p 7

ಪ್ರತಿಯೊಂದು ಭಾಗದಿಂದ ತಮ್ಮ ತಮ್ಮ ಕೊಡುಗೆಯನ್ನು ಕಳಿಸಿದರು. ಹೆಚ್ಚೇಕೆ, ಸ್ವಲ್ಪಕಾಲದಲ್ಲಿ ಪ್ರಪಂಚದ ಅನೇಕ ಭಾಗಗಳಿಂದ ಕೊಡುಗೆ ಹರಿದು ಬಂತು. ಮುಖ್ಯವಾಗಿ ಬಹಳ ಬಲವಾದ ಮತ್ತು ನಿಯಮಿತವಾದ ಸಹಾಯ ಪಂಜಾಬಿನ ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಂದ ಹಾಗೂ ವಾಯುವ್ಯ ಭಾಗದ ಪ್ರಾಂತ್ಯಗಳಾದ ಬಲೂಚಿಸ್ತಾನ ಮತ್ತು ಸಿಂಧ್‌ಗಳಿಂದ ಬಂತು. ಬ್ರಿಟಿಷರುತಮ್ಮ ಆಡಳಿತವನ್ನು ವಿಸ್ತರಿಸುತ್ತಾ ಹೋದಂತೆಲ್ಲ ಪಂಜಾಬಿಗಳು ಸರಕಾರೀ ಕೆಲಸಗಳನ್ನು ಹುಡುಕಿಕೊಂಡೋ, ವ್ಯಾಪಾರಕ್ಕಾಗಿಯೋ, ಕೋರ್ಟು ಕಚೇರಿಗಳಲ್ಲಿ ವಾದಿಸುವವರಾಗಿಯೋ ಅಥವಾ ಅಧ್ಯಾಪಕರಾಗಿಯೋ ಈ ಪ್ರದೇಶಗಳಲ್ಲಿ ಬಂದು ನೆಲೆಯೂರಿದ್ದರು. ಹೇಗೆ ಬೆಂಗಾಲಿಗಳು ಮತ್ತು ಕಾಯಸ್ಥರು ಪಂಜಾಬಿನ ವಾಯುವ್ಯ ಭಾಗದಿಂದ ಆಚೆಗೆ ಹೋದರೋ ಅದೇ ರೀತಿ ಪಂಜಾಬಿಗಳು ಪಶ್ಚಿಮದ ಮತ್ತು ದಕ್ಷಿಣದ ಕಡೆಗೆ ಹೋಗಿ ನೆಲೆಸಿದರು. ಹೀಗೆ ವಲಸೆ ಹೋದ ಪಂಜಾಬಿಗಳು ಸಾಮಾನ್ಯವಾಗಿ ಸುಶಿಕ್ಷಿತ ಹಿಂದೂಗಳಾಗಿದ್ದರು[39] ಮತ್ತು ಯಾವತ್ತೂ ಸಮಾಜದ ಹಾಗೂ ಸಮಾಜದ ಉದ್ದೇಶಗಳ ಬಗ್ಗೆ ನಿಷ್ಠೆ ಮತ್ತು ಭಕ್ತಿಗಳನ್ನು ಹೊಂದಿದವರಾಗಿದ್ದರು. 'ಬ್ರಿಟಿಷ್ ಭಾರತದ' ಪಶ್ಚಿಮದಲ್ಲಿ ಹಾಗೂ ವಾಯುವ್ಯ ಭಾಗದಲ್ಲಿರುವ ವಲಸೆ ಬಂದ ಹಿಂದೂಗಳ ಸುತ್ತ ಮುಸ್ಲಿಮರೇ ತುಂಬಿದ್ದರು ಮತ್ತು ಇದರಿಂದಾಗಿ ಹಿಂದೂಗಳು ತಮ್ಮಧಾರ್ಮಿಕ ಅಸ್ಮಿತೆಯ ಬಗ್ಗೆ ಸ್ವಲ್ಪ ಹೆಚ್ಚೇ ಗಮನ ಕೊಡುತ್ತಿದ್ದರು. ತಮ್ಮ ಸಹಜ ಸಾಮಾಜಿಕ ಪರಿಸರದಿಂದ ಪ್ರತ್ಯೇಕವಾಗಿಇದ್ದು, ತಮ್ಮ ಜಾತಿಯವರಿಂದ ದೂರವಾಗಿದ್ದು, ತಮ್ಮ ಓರಗೆಯವರಿಂದ ಬೇರ್ಪಟ್ಟು ಇದ್ದಾಗ ತಾವು ಯಾವುದನ್ನೆಲ್ಲ ಬಿಟ್ಟು ಬಂದಿದ್ದರೋ ಅದನ್ನೆಲ್ಲ ಆರ್ಯ ಸಮಾಜ ತುಂಬಿಸಿಕೊಡುವ ಒಂದು ಆಧಾರವಾಗಿ ಕಂಡಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಅವರಿಗೆ ಹಾಗೂ ಅವರ ಕುಟುಂಬಕ್ಕೆ ಆರ್ಯ ಸಮಾಜ ಒಂದು ಭದ್ರವಾದ ನೆಲೆಯಾಯಿತು.

ಆರ್ಯ ಸಮಾಜದಧನ ಸಂಗ್ರಹದ ವಿನ್ಯಾಸವನ್ನು ಗಮನಿಸಿದರೆ ಶಾಲೆಯು ಸುಶಿಕ್ಷಿತರು, ವ್ಯಾಪಾರಿಜನರು ಮತ್ತು ಆಗಷ್ಟೇ ಆಂಗ್ಲ ಪ್ರಭಾವಕ್ಕೆ ಒಳಗಾದವರಿಂದ ಬೆಂಬಲವನ್ನು ಪಡೆಯುತ್ತಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಯಬಹುದಿತ್ತು. ಆ ಕಾಲದ ರಾಜರು, ಮಹಾರಾಜರು, ಸರ್ದಾರ್‌ಗಳು ಮತ್ತು ಜಾಗೀರ್‌ದಾರರು ತಮ್ಮನ್ನು ತಾವು ಆಂಗ್ಲೋ ವೇದಿಕ್ ಶಾಲೆಯಿಂದ ಬಹಳ ದೂರ ಇಟ್ಟುಕೊಂಡಿದ್ದರು. ಇದು ನಿಜಕ್ಕೂ ನಿರಾಶೆಯ ವಿಷಯ[40] ಎಂಬುದು ಸಮಾಜಿಗಳ ಅಭಿಪ್ರಾಯವಾಗಿತ್ತು. ಅರಸೊತ್ತಿಗೆಗೆಆರ್ಯ ಸಮಾಜದ ಬಗ್ಗೆ ಬಹಳ ಕಡಿಮೆ ಆಸಕ್ತಿ ಇತ್ತೆಂದು

---

[39] The Sukkur Arya Samaj provided leadership in Sindh, while the local college committee, Bolan Pass, successfuly mobilized Hindu clerks and government contractors working on the Bolan State Railway and members of the Hirok Arya Samaj in Baluchistan. For information on the Sukkur Arya Samaj, see Arya Patrika, May 4 1886, p 5; June 29, 1886, p 6 and various donations lists in the Tribune throughout the 1880s. The Bolan Committee mentioned in the Arya Patrika issue of October 5, 1886, p 5; October 12, pp 5-6; June 15, p 7 and the HirokSamaj in October 5, 1886, p 7 and October 12, 1886 p 6.

[40] Tribune, September 15, 1888, p 2

ಹೇಳಬಹುದೇನೋ ಅಥವಾ ಸಹಾನುಭೂತಿ ಏನೂ ಇರಲಿಲ್ಲವೆಂದು ಹೇಳಬಹುದೇನೋ. ಪ್ರಮುಖ ಆರ್ಯ ಸಮಾಜಿಗಳು ಬಂದು ಕೇಳಿದಾಗ ಮಾತ್ರ ಬಹಳ ವಿರಳವಾಗಿ ಅವರುಧನ ಸಹಾಯ ಮಾಡುತ್ತಿದ್ದರು. ಎಷ್ಟೋ ಸಲ ಸುಶಿಕ್ಷಿತರಾದ ಮೇಲ್ವರ್ಗದ ಜನ ಕಡಿಮೆ ಪ್ರತಿಷ್ಠಿತರಾದ ಅಥವಾ ಹೆಚ್ಚು ಸಂಪ್ರದಾಯಶೀಲರಾದ ತಮ್ಮ ಓರಗೆಯವರಿಂದ ಧನ ಸಹಾಯ ಕೇಳುತ್ತಿದ್ದರು.

ಸಮಾಜದಲ್ಲಿ ಒಳ್ಳೆಯ ಸ್ಥಾನದಲ್ಲಿರುವ ಸ್ಥಿತಿವಂತರಾದ ಗಣ್ಯರು ತಾವು ಸಮಾಜಕ್ಕೆ ಉದಾರವಾದ ಧನ ಸಹಾಯ ಮಾಡಿದ್ದೇ ಅಲ್ಲದೆ, ಪೇಟೆಗೆ ಹೋಗಿ ಸಾಮಾನ್ಯ ಜನರಿಂದಲೂ ಸಣ್ಣ ಪುಟ್ಟ ಕೊಡುಗೆಗಳನ್ನು ಸಂಗ್ರಹ ಮಾಡುತ್ತಿದ್ದರು. ಒಂದು ಸಂಸ್ಥೆಯನ್ನು ಎಲ್ಲಾ ಬಗೆಯಜನ ಸೇರಿಕಟ್ಟಿದಾಗ ಅದು ನಿಜವಾದ ಅರ್ಥದಲ್ಲಿ ರಾಷ್ಟ್ರೀಯ ಸಂಸ್ಥೆಯಾಗುತ್ತದೆ. ದಯಾನಂದ ಆಂಗ್ಲೋ ವೇದಿಕ್ ಕಾಲೇಜು ಈ ಬಗೆಯಲ್ಲಿ ರೂಪುಗೊಂಡದ್ದರಿಂದಲೇ ಅದು ಎಲ್ಲರ ಸ್ವೀಕಾರಕ್ಕೆ ಕಾರಣವಾಯಿತು. 1886ರ ಜೂನ್ ತಿಂಗಳವರೆಗೆ ಒಟ್ಟಾದ ಅಮೋಘವಾದರೂ 45,000ದಷ್ಟು ನಿಧಿ ಎಲ್ಲವೂ ಜನ ಸಾಮಾನ್ಯರು ಮತ್ತು ಮಧ್ಯಮ ವರ್ಗದ ಸದ್ಗೃಹಸ್ಥರು ಸೇರಿಯೇ ಒಟ್ಟು ಮಾಡಿದ್ದು ಎನ್ನುವುದರಲ್ಲಿ ಸಂದೇಹವಿಲ್ಲ. ಅಲ್ಲಿಯವರೆಗೂ ಯಾವನೇ ರಾಜನನ್ನಾಗಲೀ, ಮಹಾರಾಜನನ್ನಾಗಲೀ ನಿಧಿಗಾಗಿ ಸಮಾಜದವರು ಯಾವತ್ತೂ ಬೇಡಿಕೊಂಡಿರಲಿಲ್ಲ. ಆರ್ಯ ಸಮಾಜದ ಶೈಕ್ಷಣಿಕ ಚಳುವಳಿಯ ಬಗ್ಗೆ ಎಲ್ಲಜನ ಸಾಮಾನ್ಯರೂ ಅಷ್ಟೊಂದು ಆಸಕ್ತಿ ತೋರಲು ಇದೂ ಒಂದು ಕಾರಣ.[41]

ಆರ್ಯ ಸಮಾಜಿಗಳು ಬಹಳ ಬಡತನದ ದಿವಾಳಿ ಎದ್ದಿರುವ ಪ್ರಾಂತ್ಯದಲ್ಲಿ ಬದುಕುತ್ತಿರುವ ಹಾಗೆ ತಮ್ಮನ್ನು ತಾವು ಕಾಣುತ್ತಿದ್ದರು. ಇದರಿಂದ ಬಹಳ ಭಿನ್ನವಾದ ಪದ್ಧತಿಗಳಿಂದಲೂ ಧನ ಸಂಗ್ರಹ ಮಾಡುವ ಉಪಾಯಗಳನ್ನು ಯೋಚಿಸುತ್ತಿದ್ದರು. ತಮ್ಮ ದಾನಿಗಳಲ್ಲಿ ಬಹುಪಾಲು ಜನ ಕಾರಕೂನರಾಗಿದ್ದರು ಎಂಬುದನ್ನು ಸಮಾಜಿಗಳು ಗುರುತಿಸಿದ್ದರು, ಅಷ್ಟೇ ಅಲ್ಲ ಅದರ ಬಗ್ಗೆ ಅವರಿಗೆ ಮೆಚ್ಚುಗೆಯೂ ಇತ್ತು. ಈ ಜನ ಬಹಳ ಸಣ್ಣ ನಿಧಿಯನ್ನಷ್ಟೇ ಕೊಡಲು ಸಾಧ್ಯ ಎಂಬುದನ್ನು ಸಮಾಜಿಗಳು ತಿಳಿದಿದ್ದರು.[42] ಸಣ್ಣ ಕೊಡುಗೆಯಾದರೂ ತಮ್ಮ ಅನೇಕ ಬಗೆಯ ನಿಧಿ ಸಂಗ್ರಹದಿಂದ ದೊಡ್ಡ ಮೊತ್ತವನ್ನು ಒಟ್ಟು ಹಾಕಬಹುದೆಂಬುದನ್ನು ಆರ್ಯ ಸಮಾಜ ತನ್ನ ಬುದ್ಧಿವಂತಿಕೆಯಿಂದ ಅರ್ಥ ಮಾಡಿಕೊಂಡಿತ್ತು.

ಶಾಲೆಯ ಯಶಸ್ಸು ಹಾಗೂ ಅದರ ಜೊತೆಗೇ ಏರುತ್ತಿರುವ ಖರ್ಚುಗಳು ಎಲ್ಲವನ್ನು ಸರಿತೂಗಿಸಲು ಆರ್ಯ ಸಮಾಜಿಗಳು ನಿಧಿ ಸಂಗ್ರಹಣೆಗಾಗಿ ಅನೇಕ ಹೊಸ ವಿಧಾನಗಳನ್ನು ಹುಡುಕತೊಡಗಿದರು. ಮುಖ್ಯ ಸಂದರ್ಭಗಳಲ್ಲಿ ಬ್ರಾಹ್ಮಣರಿಗೆ

[41] Arya Patrika, June 20, 1886, p 6
[42] Tribune, September 15, 1888, p 2

ಉಡುಗೊರೆಗಳನ್ನು ಕೊಡುವ ಸಂಪ್ರದಾಯವನ್ನು ಸಮಾಜಿಗಳು ತಮ್ಮ ಅನುಕೂಲಕ್ಕಾಗಿ ಬಳಸಿಕೊಂಡರು. 1886ರಿಂದಲೇ ಆರ್ಯ ಸಮಾಜದ ಸದಸ್ಯರು ಮತ್ತು ಹಿತಚಿಂತಕರು ಯಾವುದೇ ಮನೆಯಲ್ಲಿ ಶುಭ ಸಂದರ್ಭ ಇದ್ದರೂ ಕಾಲೇಜು ನಿಧಿಗೆದೇಣಿಗೆ ಕೊಡುವುದನ್ನು ಒಂದು ಪರಿಪಾಠವಾಗಿ ಬೆಳೆಸಿದರು. ಈ ಸಂದರ್ಭಗಳು ಹಲವು ಬಗೆಯದ್ದಾಗಿರಬಹುದು. ಯಾರೋ ಒಬ್ಬರು ತಮ್ಮ ಮಗನ ಮದುವೆಯಲ್ಲಿರೂ 200ರನ್ನು ಕೊಟ್ಟರೆ, ಇನ್ನೊಬ್ಬರು ತಮಗೆ ಮಗ ಹುಟ್ಟಿದಾಗ 8 ರೂಪಾಯಿಗಳನ್ನು ಕೊಟ್ಟರು. ಮತ್ತೊಬ್ಬರು ತಮ್ಮ ಹೆಂಡತಿಯ ಆರೋಗ್ಯ ಸುಧಾರಿಸಿದ್ದಕ್ಕಾಗಿ 6 ರೂಪಾಯಿಗಳನ್ನು ಕೊಟ್ಟರೆ, ನಾಲ್ಕು ಜನ ಕಾರಕೂನರು ತಮ್ಮ ಸಂಬಳ ಹೆಚ್ಚಾಗಿದ್ದಕ್ಕಾಗಿ ತಲಾ 2 ರೂಪಾಯಿಗಳಂತೆ ಕೊಟ್ಟರು. ಇನ್ನೊಬ್ಬ ವಿದ್ಯಾರ್ಥಿತಾನು ಟೆಲಿಗ್ರಾಫ್ ಪರೀಕ್ಷೆಯನ್ನು ಪಾಸು ಮಾಡಿದ್ದಕ್ಕೆ 1 ರೂಪಾಯಿಯನ್ನು ಕೊಟ್ಟ.[43] ಎಲ್ಲ ದೇಣಿಗೆಗಳೂ ಸಣ್ಣವೇನಾಗಿರಲಿಲ್ಲ. ಒಬ್ಬ ಆರ್ಯ ಸಮಾಜಿ, ಲಾಲಾ ಪರಮಾನಂದ್, ಮುಲ್ತಾನ್‌ನಲ್ಲಿ ವಕಾಲತ್ತು ಮಾಡುವ ಉದ್ಯೋಗದಲ್ಲಿ ಇರುವವನು, ತನಗೆ ಮಗ ಹುಟ್ಟಿದನೆಂದು 200 ರೂಪಾಯಿಗಳನ್ನು ಕೊಡುಗೆಯಾಗಿ ಕೊಟ್ಟಿದ್ದ.[44] ಈ ರೀತಿ ಶುಭ ಸಂದರ್ಭಗಳಲ್ಲಿ ದೇಣಿಗೆ ಕೊಡುವ ಪದ್ಧತಿ ಜನಪ್ರಿಯವಾದಂತೆ, ಬೇರೆ ಜಾತಿಯವರೆಲ್ಲ ಮದುವೆಯ ಸಂದರ್ಭದಲ್ಲಿ ಕಾಲೇಜು ನಿಧಿಗೆ ದೇಣಿಗೆ ಕೊಡುವ ನಿರ್ಧಾರವನ್ನು ಮಾಡಿದರು.[45]

ಬೇರೆ ಹಲವು ಸಾಂಪ್ರದಾಯಿಕ ಹಬ್ಬಗಳಲ್ಲಿ ಕೂಡ ಪಂಜಾಬಿ ಹಿಂದೂಗಳು ಸುತ್ತ ಮುತ್ತಲ ಸಮಾಜಿಗಳ ಪ್ರಭಾವದಿಂದ ದೇಣಿಗೆಯನ್ನುಇನ್ನಷ್ಟು ಉತ್ತೇಜಿಸಿದರು. ಒಬ್ಬ ಹಿರಿಯ ಸಮಾಜಿಕಿರಿಯ ಶಿಷ್ಯನೊಬ್ಬನಿಗೆ ಈ ಬಗೆಯ ಪತ್ರವೊಂದನ್ನು ಬರೆದದ್ದುಇದಕ್ಕೆ ಪುರಾವೆಯನ್ನುಕೊಡುತ್ತದೆ- “ಪ್ರೀತಿಯ ಸಹೋದರ... ಕಳೆದ ಬಾರಿಯ ಮಾಘ ಉತ್ಸವದಲ್ಲಿ ‘ಜನ ತಮ್ಮ ಟೆಶರ್‌ರಜಾದಲ್ಲಿ ಕೂಡ ದಯಾನಂದ್‌ಆಂಗ್ಲೋ ವೇದಿಕ್ ಶಾಲೆಗೆ ಸಹಾಯ ನಿಧಿ ನೀಡಬೇಕು’ ಎಂಬ ಮಾತನ್ನು ನಿನಗೆ ಹೇಳಬೇಕೆಂದು ತಿಳಿಸಿದ್ದಾರೆ. ಹೇಗಿದ್ದರೂ ಹಿಂದೂಗಳು ಕಿಚಡಿ ಮಾಡಲು ಅಕ್ಕಿ ಮತ್ತು ಹೆಸರು ಬೇಳೆಯನ್ನು ಬ್ರಾಹ್ಮಣರಿಗೆ ಕೊಡುವ ಪರಿಪಾಠ ಇದ್ದೇ ಇತ್ತು. ಅದೇ ರೀತಿ ನಾವೆಲ್ಲರೂ ಕಿಚಡಿ ಕೋಟಾವನ್ನು ಕಾಲೇಜು ನಿಧಿಗಾಗಿಯೂ ಕೊಡಬೇಕು ಎನ್ನುವ ಮಾತು ಬಂತು. ಇದನ್ನು ಎಲ್ಲರೂ ಸರ್ವಾನುಮತದಿಂದ ಬೆಂಬಲಿಸಿದರು ಹಾಗೂ ಪ್ರತಿಯೊಬ್ಬರಿಂದ ಕಿಚಡಿಯ ಸಲುವಾಗಿ 2 ರೂಪಾಯಿಗಳನ್ನು ಸಂಗ್ರಹಿಸಲಾಯಿತು.[46] ಹೀಗೆ ಭಾಯಿ ನೆಹಾಲ್ ಸಿಂಗ್‌ನಿಂದ

[43] College Report 1886-87, pp 24-25

[44] Arya Patrika, November 2, 1886, p 7

[45] Some of the most important biradaris of the Punjab, viz., the Aror Bans of Lahore, and some Khatri Biradaris of Chakwal, Rawalpindi, Behra and Gujerat who have passed resolutions to the effect that on the occasion of marriages something will always be donated for the DAV college. They have fixed the least sums to be donated on these occasions” College Report, 1891-92, p 15

[46] Arya Patrika, March 15, 1887, p 7

ಆರಂಭವಾದ ಬೀದಿಗಳಲ್ಲಿ ಹೋಗಿ ಭಿಕ್ಷೆ ಬೇಡುವ ಸಂಪ್ರದಾಯ ಕಾಲೇಜು ನಿಧಿ ಸಂಗ್ರಹಣೆಯಲ್ಲೂಉಪಯೋಗಕ್ಕೆ ಬಂತು."

ಬೇಸಿಗೆಯ ತಿಂಗಳುಗಳಲ್ಲಿ, ಲಾಹೋರ್ ಸಮಾಜದ ವಾರದ ಸಭೆಗಳೊಂದರಲ್ಲಿ, ಒಬ್ಬ ಸರಳ ಮತ್ತುಕ್ಷೀಣಕಾಯದ ಸಾಧು ಕಾಣಿಸಿಕೊಂಡ. 'ಸತ್ಯಾರ್ಥ ಪ್ರಕಾಶ' ದ ಬಗ್ಗೆ ಪ್ರವಚನವನ್ನು ನೀಡುತ್ತಾ ಬಹಳ ಸ್ಫೂರ್ತಿದಾಯಕವಾದ ಭಾಷಣವನ್ನು ನೀಡಿದ. ಅಷ್ಟೇ ಅಲ್ಲ, ಸಮಾಜಿಗಳೆಲ್ಲ ಪ್ರತಿ ಭಾನುವಾರ ಒಂದು ಹಿಡಿ ಹಿಟ್ಟನ್ನು ಪ್ರತಿ ಮನೆಯಿಂದ ಬೇಡಿ ತರಬೇಕು. ಅದನ್ನು ಸಮಾಜದ ಕೆಲಸಕ್ಕಾಗಿ ಉಪಯೋಗಿಸಬೇಕು ಎಂದು ಹೇಳಿದ. ಅದರ ಪ್ರಕಾರವಾಗಿ ಪ್ರತಿ ಮನೆಯಲ್ಲೂ ಒಂದು 'ಧರ್ಮದ ಹುಂಡಿ' ಯನ್ನು ಇಟ್ಟು, ಮನೆಯ ಗೃಹಿಣಿ ಪ್ರತಿ ದಿನವೂ ಒಂದು ಹಿಡಿ ಹಿಟ್ಟನ್ನು ಅದರಲ್ಲಿ ಹಾಕುತ್ತಾ ಬರಬೇಕು. ಇದು ಎಷ್ಟು ಜನಪ್ರಿಯ ಹಾಗೂ ಉಪಯೋಗಕಾರಿ ಆಯಿತೆಂದರೆ, ದಯಾನಂದ್ ಆಂಗ್ಲೋ ವೇದಿಕ್ ಕಾಲೇಜಿನ ಅಸ್ತಿತ್ವತೆಯಲ್ಲಿ ಇದು ಬಹಳ ಮುಖ್ಯ ಪಾತ್ರ ವಹಿಸಿತೆಂದೇ ಹೇಳಬಹುದು.[47]

ಈ 'ಹಿಟ್ಟಿನ ಹುಂಡಿ' ಎನ್ನುವ ಕಲ್ಪನೆ ಲಾಹೋರಿನಿಂದ ಇಡಿಯ ಪಂಜಾಬಿಗೆ ಹಬ್ಬಿತು. ಇದರಿಂದ ಕಾಲೇಜು ನಿಧಿಗೆ ಒಂದು ನಿಶ್ಚಿತ ಆದಾಯ ಬರುವಂತಾಯಿತು. ಜಲಂಧರ್‌ನ ಲಾಲಾ ಮುನ್ಶಿರಾಮ್ ಮತ್ತು ಲಾಲಾ ದೇವ್‌ರಾಜ್ ಇಬ್ಬರೂ ಈ ಕಲ್ಪನೆಯನ್ನು ಒಪ್ಪಿಕೊಂಡದ್ದೇ ಅಲ್ಲದೆ, ಇದನ್ನು ಇನ್ನೂ ವಿಸ್ತರಿಸಲು "ಚಿಂದಿ ನಿಧಿ" (Rag Fund)ಯನ್ನು ಸುರು ಮಾಡಿದರು. ಆರ್ಯ ಸಮಾಜದ ಸದಸ್ಯರು ಮನೆಗಳಿಂದ ಹಳೆಯ ಬಟ್ಟೆಗಳನ್ನು ಒಟ್ಟು ಮಾಡಿ, ಅದನ್ನು ಮಾರಾಟ ಮಾಡಿ ಬಂದ ದುಡ್ಡನ್ನು ಸಮಾಜದ ನಿಧಿಗಾಗಿ ಬಳಸಿದರು.[48]

ಹಿಟ್ಟಿನ ಹುಂಡಿಯ ವ್ಯವಸ್ಥೆ ಸಾಂಪ್ರದಾಯಿಕರಾದ ಎಲ್ಲ ಆರ್ಯರಿಗೂ ಮೆಚ್ಚುಗೆಯಾಯಿತು. ಸಾಂಸ್ಥಿಕವಾದ, ತಾತ್ವಿಕವಾದ ಮತ್ತು ಆರ್ಥಿಕವಾದ ಎಲ್ಲ ವಿಷಯಗಳಲ್ಲಿ ಆರ್ಯ ಸಮಾಜಿಗಳು ತಾವು ಹಳೆಯದನ್ನು ಹಿಡಿದುಕೊಳ್ಳುವ ಹಾಗೂ ಒಪ್ಪಿಕೊಳ್ಳುವ ಆಸಕ್ತಿಯನ್ನು ತೋರಿದರು. ಸರಿಯಾದದ್ದನ್ನು ಮಾಡಬೇಕು, ನಿಜವಾದ ಹಳೆಯ ಸಂಪ್ರದಾಯವನ್ನು ಪಾಲಿಸಬೇಕು, ಹಳೆಯ ಪದ್ಧತಿಗಳನ್ನು ಆದಷ್ಟು ಮಟ್ಟಿಗೆ ಸಮಕಾಲೀನ ಅಗತ್ಯಗಳಿಗೆ ಒಗ್ಗಿಸಿಕೊಳ್ಳಬೇಕು. ಆಗ ಆಧುನಿಕತೆ ಮತ್ತು ಪರಂಪರೆಗಳ ಮಧ್ಯೆ ಬರುವ ಸಂಘರ್ಷ ಕಡಿಮೆಯಾಗುತ್ತದೆ ಎನ್ನುವುದು ಅವರ ನಂಬಿಕೆಯಾಗಿತ್ತು. "ಅಬೋಟಾಬಾದ್‌ನ ಆರ್ಯ ಸಮಾಜ ಕೂಡ ಈಗ ದಯಾನಂದ್‌ಆಂಗ್ಲೋ ವೇದಿಕ್ ಕಾಲೇಜು ನಿಧಿಗಾಗಿ ದೇಣಿಗೆಯನ್ನು ಸಂಗ್ರಹಿಸುತ್ತಿದೆ ಎನ್ನುವ ವಿಷಯ ಕೇಳಿ ನಮ್ಮ ಓದುಗರು ಸಂತೋಷಪಡುತ್ತೀರಿ. ಅಲ್ಲಿನ ಸದಸ್ಯರೂ ಈಗ ಹಿಟ್ಟಿನ ಹುಂಡಿಯ ವ್ಯವಸ್ಥೆಯನ್ನು ಅಳವಡಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ

[47] M R Jambunathan, Ed, Swamy Shraddhananda (Bombay: Bharatiya Vidya Bhavan, 1961), p 78

[48] Jambunathan, ibid, p 79

ನಮ್ಮ ವ್ಯವಸ್ಥಾಪಕ ಮಂಡಳಿಗೆ ಮೂರು ವಾರದ ಸಂಪಾದನೆಯೆಂದು 4 ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ." ಎಂಬುದಾಗಿ ಆರ್ಯ ಸಮಾಜದ ಪತ್ರಿಕೆಯಲ್ಲಿ ವರದಿಯಾದದ್ದಿದೆ.[49] ಹಿಟ್ಟು ಮತ್ತು ಹಳೆಯ ಬಟ್ಟೆಗಳಿಂದ ಬಂದ ನಿಧಿ, ತಿಂಗಳ ಚಂದಾ ನಿಧಿ, ಹಬ್ಬ ಹರಿದಿನಗಳ ನಿಧಿ ಮತ್ತು ಮದುವೆ ಹಾಗೂ ಮುಂಜಿಗಳ ಸಂದರ್ಭದಲ್ಲಿ ಕೊಟ್ಟ ದಾನಗಳು, ಆರ್ಯ ಸಮಾಜದ ವಾರ್ಷಿಕೋತ್ಸವದಂದು ಒಟ್ಟಾದ ಉಡುಗೊರೆಗಳು, ಸಣ್ಣ ಹಾಗೂ ದೊಡ್ಡ ದಾನಗಳು- ಹೀಗೆ ಎಲ್ಲವೂ ಸೇರಿ ದಯಾನಂದ್ ಆಂಗ್ಲೋ ವೇದಿಕ್ ಶಾಲೆ-ಕಾಲೇಜುಗಳು ನಿರಂತರವಾಗಿ ಬೆಳೆಯಲು ಆರ್ಥಿಕ ತಳಹದಿಯನ್ನು ಒದಗಿಸಿದವು.

ದಯಾನಂದ್ ಆಂಗ್ಲೋ ವೇದಿಕ್ ಕಾಲೇಜಿನ ಟ್ರಸ್ಟ್ ಮತ್ತು ವ್ಯವಸ್ಥಾಪಕ ಮಂಡಳಿ ಒಟ್ಟಾಗಿ ಶೈಕ್ಷಣಿಕ ಸಂಸ್ಥೆ ಹಾಗೂ ಆರ್ಥಿಕ ಸಂಸ್ಥೆ ಎರಡೂ ಒಂದೇ ಆಗಿ ಕಾರ್ಯ ನಿರ್ವಹಿಸಿದವು. ಪಂಜಾಬಿನ ಬ್ಯಾಂಕುಗಳ ವ್ಯವಸ್ಥೆ ಆರಂಭವಾಗುವ ಮೊದಲು ಸೊಸೈಟಿ ದೊಡ್ಡ ಮಟ್ಟದ ಬಂಡವಾಳವನ್ನು ತನ್ನ ಹಿಡಿತದಲ್ಲಿ ತಂದುಕೊಂಡಿತ್ತು.[50] ಮೊದಲಿಗೆ ವ್ಯವಸ್ಥಾಪಕ ಮಂಡಳಿ ತನ್ನ ನಿಧಿಯನ್ನು ಗವರ್ನ್ಮೆಂಟ್ ಪ್ರಾಮಿಸರಿ ನೋಟ್‌ಗಳಲ್ಲಿ, ಆಗ್ರಾ ಬ್ಯಾಂಕ್ ಲಿಮಿಟೆಡ್ ಮತ್ತು ಕಲ್ಕತ್ತಾದ ಬೆಂಗಾಲ್ ಬ್ಯಾಂಕ್ ಮುಂತಾದುವುಗಳಲ್ಲಿ ತೊಡಗಿಸಿತು.[51] ಮುಂದಿನ ಹೆಜ್ಜೆಯಾಗಿ ಕಲ್ಕತ್ತ ಸಿಟಿ ಕಾರ್ಪೊರೇಶನ್ನಿನ ಮುನ್ಸಿಪಲ್ ಡಿಬೆಂಚರ್‌ಗಳನ್ನು ಖರೀದಿ ಮಾಡಿತು. 1890ರ ಆರಂಭದಿಂದ ಹಣ ಹೂಡಿಕೆಯ ವಿಧಾನಗಳಲ್ಲಿ ಕೆಲವು ಬದಲಾವಣೆಗಳು ಆದವು. ಮಂಡಳಿಯು ತನ್ನ ನಿಧಿಯನ್ನು ಬಹುಮಟ್ಟಿಗೆ ಪಂಜಾಬಿ ಸಂಸ್ಥೆಗಳಲ್ಲಿ ಹೂಡಲುತೊಡಗಿತು. 1892 ಫೆಬ್ರುವರಿ ವೇಳೆಗೆ ಆರ್ಯ ಸಮಾಜ ನಿಯಮಿತವಾಗಿತನ್ನ ನಿಧಿಯನ್ನು 'ಅಲೆಯಾನ್ಸ್ ಬ್ಯಾಂಕ್‌ಆಫ್ ಸಿಮ್ಲಾ' ದಲ್ಲಿ ಜಮಾ ಮಾಡಲು ಆರಂಭಿಸಿತ್ತು. ಅದೇ ವರ್ಷ ಮೇ ತಿಂಗಳಲ್ಲಿ ವ್ಯವಸ್ಥಾಪಕ ಮಂಡಳಿ 10,000 ರೂಗಳನ್ನು 'ಪಂಜಾಬ್ ಬ್ಯಾಂಕಿಂಗ್ ಕಾರ್ಪೋರೇಶನ್' ನಲ್ಲಿ ಜಮಾ ಮಾಡಿತು.[52] ಸ್ಥಳೀಯ ಬ್ಯಾಂಕ್‌ಗಳನ್ನು ಬೆಂಬಲಿಸುವುದೇ ಅಲ್ಲದೆ, ವ್ಯವಸ್ಥಾಪಕ ಮಂಡಳಿ ಭೂಮಿಯ ಮೇಲೆ ಬಂಡವಾಳ ಹೂಡಲು ತೊಡಗಿತು. ಮುಖ್ಯವಾಗಿ ಅಡಮಾನ ಇಟ್ಟಂತಹ ಭೂಮಿಗಳನ್ನು ಕೊಳ್ಳುವ ಚಿಂತನೆಯನ್ನು ಮಾಡಿತು. ಆಗೊಮ್ಮೆ ಈಗೊಮ್ಮೆ ಕೆಲವು ವ್ಯಕ್ತಿಗಳಿಗೆ ಮತ್ತು ಸ್ಥಳೀಯ ಆರ್ಯ ಸಮಾಜಿಗಳಿಗೆ ಸಾಲವನ್ನು ಕೊಡಲು ಆರಂಭಿಸಿತು. ಹೀಗೆ ವ್ಯವಸ್ಥಾಪಕ ಮಂಡಳಿ ತನ್ನ ಬಂಡವಾಳವನ್ನು ಒಟ್ಟು ಸೇರಿಸುತ್ತಾ ಆರ್ಯ ಸಮಾಜಿಗಳಿಗೆ ಇದೊಂದು ಬ್ಯಾಂಕ್ ಎಂಬಂತಹ ಪಾತ್ರವನ್ನು ವಹಿಸಿತು. 1894ರ ವೇಳೆಗೆ ವ್ಯಕ್ತಿಗತ ಸಾಲಗಳಿಗೆ ಎಷ್ಟು ಬೇಡಿಕೆ ಬಂತೆಂದರೆ

---

[49] Arya Patrika August 17, 1886, p 4

[50] Funded capital rose as follows: December, 1886, Rs. 50,000; January 1889, Rs. 105,406; December 1892, Rs. 190,000 and July 1893 Rs. 203,000. Sri Ram Sharma Mahatma Hans Raj, p 54, Tribune December 14, 1892, p 4 and July 22, 1893 p 4

[51] College Report, 1886-87, p 28

[52] Proceedings DAVCMC, Investment Sub committees, February 8, 1892, and May 1, 1822

ವ್ಯವಸ್ಥಾಪಕ ಮಂಡಳಿಯು ತನ್ನಉಪಸಮಿತಿಯ ಅನೇಕ ಸದಸ್ಯರನ್ನು ಸಾಲ ಕೊಳ್ಳುವ ವ್ಯಕ್ತಿಗಳ ಬಗ್ಗೆ ವಿಚಾರಿಸಿ ಅವರ ಹಿನ್ನೆಲೆಯನ್ನು ವರದಿ ಮಾಡಲೆಂದೇ ನಿಯಮಿಸಿತು.[53] ಆರ್ಯ ಸಮಾಜದ ಬಂಡವಾಳ ಎಷ್ಟು ಬೆಳೆಯಿತೆಂದರೆ ವ್ಯವಸ್ಥಾಪಕ ಮಂಡಳಿಯು ಬಹಳ ಸಂಕೀರ್ಣವಾದ ಪಾತ್ರವನ್ನು ವಹಿಸಬೇಕಾಯಿತು. ಇದರಿಂದಾಗಿ ಸಮಾಜದ ಚಳುವಳಿಯು ಇನ್ನಷ್ಟು ವಿಸ್ತರಿಸುವಂತಾಯಿತು. ಸಮಾಜಕ್ಕೆ ಒಂದು ಭದ್ರವಾದ ಬ್ಯಾಂಕ್ ಸಿಕ್ಕಂತಾಯಿತು. ಸುಶಿಕ್ಷಿತ ಗಣ್ಯವರ್ಗಕ್ಕೆ ಬಂಡವಾಳದ ಹೊಸ ಮೂಲ ಒದಗಿದಂತಾಯಿತು. ಹಾಗೆಯೇ ಹೊಸ ಶಿಕ್ಷಣ ವ್ಯವಸ್ಥೆಯ ಆರಂಭವಾಯಿತು.

ಸಮಾಜದ ಒಳಗಿನವರಿಗೆ ಮತ್ತು ಸಾರ್ವಜನಿಕರಿಗೆ ಹೊಸ ಶಾಲೆಯ ಬಗ್ಗೆ ಇರುವ ಆತ್ಮವಿಶ್ವಾಸ 1888ರ ಮೊದಲಲ್ಲಿ ಒಂದು ಬಗೆಯ ಒಳ ಸಂಘರ್ಷವನ್ನು ಸೃಷ್ಟಿಸಿತು. ಈ ಹೊತ್ತಿಗಾಗಲೇ 697 ಜನ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದರು. ಆಗಲೇ ಇಂಟರ್ ಮೀಡಿಯೆಟ್‌ನ್ನು ಅಥವಾ ಕಾಲೇಜನ್ನುಆರಂಭಿಸುವುದೇ ಬೇಡವೇ ಎಂಬ ಪ್ರಶ್ನೆ ಎದ್ದಿತ್ತು. ಇದು ಬಹಳ ಅವಸರದ ತೀರ್ಮಾನ ಎಂದು ನಂಬಿದ್ದ ಕೆಲವು ಜನ ಲಾಲಾ ಲಾಲ್‌ಚಂದ್‌ರ ನೇತೃತ್ವದಲ್ಲಿ ಇದನ್ನು ವಿರೋಧಿಸಿದರೆ, ಇನ್ನೊಂದಷ್ಟು ಮಂದಿ ಆರ್ಯ ಸಮಾಜದ ಕನಸಾದ ಸ್ವತಂತ್ರ ಕಾಲೇಜನ್ನು ಆರಂಭಿಸುವುದರ ಕಡೆಗೆ ಹೆಜ್ಜೆ ಹಾಕುವ ಉತ್ಸಾಹದಲ್ಲಿದ್ದರು. ಹೀಗೆ ಎರಡು ಗುಂಪುಗಳಾಗಿ ವಿಭಜನೆಯಾಯಿತು. ಈ ಚರ್ಚೆಯಲ್ಲಿ ಲಾಲಾ ಸೈನ್‌ದಾಸ್, ಲಾಲಾ ಲಜ್‌ಪತ್‌ರಾಯ್ ಮತ್ತು ಪಂಡಿತ್‌ಗುರುದತ್ತ ಅವರೆಲ್ಲ ಸೇರಿ ಆದಷ್ಟು ಬೇಗ ಕಾಲೇಜನ್ನು ಆರಂಭಿಸುವಂತೆ ವ್ಯವಸ್ಥಾಪಕ ಮಂಡಳಿಯ ಹೆಚ್ಚಿನ ಸದಸ್ಯರ ಮನವೊಲಿಸಿದರು. ಸಮಿತಿಯು 1888ರ ಜೂನ್ 1 ರಂದು ಮೊದಲ ವರ್ಷದ ಇಂಟರ್ ಮೀಡಿಯೆಟ್ ತರಗತಿಗಳು ಆರಂಭವಾಗಲಿವೆ ಎಂದು ಘೋಷಿಸಿಯೇ ಬಿಟ್ಟಿತು.[54] ಅನಿಯಮಿತವಾಗಿಯಾದರೂ ಕಾಲೇಜು ತರಗತಿಗಳು ವೇಳಾಪಟ್ಟಿಯ ಪ್ರಕಾರವಾಗಿ ಆರಂಭವಾದವು. 1889ರ ಹೊತ್ತಿಗೆ ಕಾಲೇಜು ತರಗತಿಗಳು ಪೂರ್ತಿಯಾಗಿ ರೂಪ ಪಡೆದಿದ್ದವು. ಅಷ್ಟೇ ಅಲ್ಲ, 1889, ಮೇ 18 ರಂದು ಪಂಜಾಬ್ ವಿಶ್ವವಿದ್ಯಾಲಯವು ಹೊಸ ಕಾಲೇಜಿಗೆ ಮಾನ್ಯತೆಯನ್ನೂ ನೀಡಿತು.[55] ಆರ್ಯರು ತಮ್ಮ ಶಾಲೆಯಂತೆಯೇ, ಕಾಲೇಜನ್ನು ಯಶಸ್ವಿಯಾಗಿ ನಡೆಸುತ್ತೇವೆಂಬುದನ್ನು ಸಾಬೀತು ಪಡಿಸಿದರು. ಹಾಗಿದ್ದರೂ ಈ ನಿರ್ಧಾರದಿಂದಾಗಿ ಕಾಲೇಜಿನ ಬೆಂಬಲಿಗರಲ್ಲಿ ಬಹಳ ದೊಡ್ಡ ಕಂದಕ ಏರ್ಪಟ್ಟಿತು. ಇಡಿಯ ಆರ್ಯ ಸಮಾಜದ ಚಳುವಳಿಯ ನಿಯಂತ್ರಣಕ್ಕಾಗಿ ಒಳ ಸಂಘರ್ಷ ಆರಂಭವಾಯಿತು. ಅಂತಿಮವಾಗಿ ಸಮಾಜ ಎರಡು ಪ್ರತ್ಯೇಕ ಸಂಸ್ಥೆಗಳಾಗಿ ಒಡೆಯುಂತಾಯಿತು.

---

[53] See Proceedings DAVCMC, Investment Sub committees, Vol I, July 6, 1894, and also one of the earliest loan requests, see Proceedings DAVCMC, (Hindi) Vol I, November 18, 1887.

[54] Sri Ram Sharma, Mahatma Hans Raj, p 53

[55] Sharma ibid, p 54

ವ್ಯವಸ್ಥಾಪಕ ಮಂಡಳಿ ಹೊಸ ಕಾಲೇಜನ್ನು ತೆರೆಯುವುದೆಂದು ನಿರ್ಧರಿಸಿದ ಮೇಲೆ ಯಾರು ಕಾಲೇಜಿನ ಮುಖ್ಯಸ್ಥರಾಗಬೇಕು ಎಂಬ ಪ್ರಶ್ನೆಎದುರಾಯಿತು. ಅದಕ್ಕೆ ಸುಲಭದಲ್ಲಿ ಉತ್ತರ ದೊರೆಯಲಿಲ್ಲ. ಇಬ್ಬರು ಅಭ್ಯರ್ಥಿಗಳ ಹೆಸರು ಮನಸ್ಸಿಗೆ ಬಂತು. ಅವರೇ ಪಂಡಿತ್ ಗುರುದತ್ತ ಮತ್ತು ಲಾಲಾ ಹನ್ಸ್ರಾಜ್. ಹಲವು ರೀತಿಗಳಿಂದ ನೋಡಿದರೆ ಗುರುದತ್ತ ಈ ಸ್ಥಾನಕ್ಕೆ ಹೆಚ್ಚು ತಾರ್ಕಿಕವಾದ ಆಯ್ಕೆ ಎಂದೆನಿಸಿತು. ಗವರ್ನ್ಮೆಂಟ್ ಕಾಲೇಜಿನ ಪ್ರಾಧ್ಯಾಪಕರ ಬಗ್ಗೆ ಅವರಿಗಿರುವ ಅಭಿಪ್ರಾಯ, ಅವರ ಎದ್ದು ಕಾಣುವ ಜಾಣತನ, ಕಾಲೇಜಿನ ಎಲ್ಲಾ ಚಟುವಟಿಕೆಗಳಲ್ಲೂ ಕಾಣುವ ಅವರ ಸಕ್ರಿಯ ಪಾತ್ರ ಇವೆಲ್ಲವೂ ಹೊಸ ಕಾಲೇಜಿನ ಪ್ರಾಂಶುಪಾಲರಾಗಲು ಅವರ ಪರವಾಗಿ ಕೆಲಸ ಮಾಡಿದವು. ಆದರೆ ಗುರುದತ್ತ ಇತ್ತೀಚೆಗೆ ಯಾಕೋ ಸ್ವಲ್ಪ ಶಿಸ್ತನ್ನು ಕಳೆದುಕೊಂಡಿದ್ದರು. ರುಚಿರಾಮ್ ಸಾಹ್ನಿ ಅವರು ಗುರುದತ್ತ ಅವರ ಬಗ್ಗೆ ಹೇಳಿದ ಮಾತುಗಳಿವು : “ತಮ್ಮ ಕೊನೆಗಾಲದ ದಿನಗಳಲ್ಲಿ ಗುರುದತ್ತ ಅವರು ಯಾವ ಪ್ರಭಾವಕ್ಕೆ ಒಳಗಾಗಿದ್ದರೋ ತಿಳಿಯುತ್ತಿಲ್ಲ. ಆದರೆ 1886 ರಲ್ಲಿ ಕಾಲೇಜನ್ನು ಬಿಟ್ಟ ಸ್ವಲ್ಪವೇ ಸಮಯದಲ್ಲಿ ಗುರುದತ್ತ ಅವರು ತಮ್ಮ ರೀತಿ-ನೀತಿಗಳಲ್ಲಿ ಎಲ್ಲ ದೃಷ್ಟಿಯಿಂದಲೂ ವಿಲಕ್ಷಣವಾಗಿ ಬಿಟ್ಟಿದ್ದರು. ಯಾರು ಬೇಕಾದರೂ ಅವರ ಮೇಲೆ ಸುಲಭವಾಗಿ ಪ್ರಭಾವ ಬೀರಬಹುದಾಗಿತ್ತು. ನಾನು ಹೇಳುತ್ತಿರುವ ಅವರ ಬದುಕಿನ ಈ ಹಂತದಲ್ಲಿ ಅವರು ‘ಕಠಿಣತೆಯ ಅವಶ್ಯಕತೆ’ ಯ ಬಗ್ಗೆ ದೊಡ್ಡ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಅತ್ಯಂತ ಕಡು ಚಳಿಯ ಕಾಲದಲ್ಲೂ ಅವರು ಬರಿಯ ತೆಳುವಾದ ಹತ್ತಿ ಬಟ್ಟೆಯನ್ನಷ್ಟೇ ಧರಿಸಿ ಓಡಾಡುತ್ತಿದ್ದರು. ಅದೇ ಕಡು ಬೇಸಿಗೆಯಲ್ಲಿ ದಪ್ಪನೆಯ ಚಳಿಗಾಲದ ಉಣ್ಣೆಯ ಬಟ್ಟೆಗಳನ್ನು ಧರಿಸುತ್ತಿದ್ದರು.[56] ಅವರ ಉಡುಗೆ ತೊಡುಗೆ ಎಷ್ಟು ವಿಚಿತ್ರವಾಗಿತ್ತೋ, ಅವರ ನಡವಳಿಕೆಯೂ ಅಷ್ಟೇ ವಿಲಕ್ಷಣವಾಗಿತ್ತು. ಗುರುದತ್ತ ಅವರು ವಿಶ್ವವಿದ್ಯಾಲಯದ ನಿಲುವಂಗಿಯನ್ನು ತೊಟ್ಟುಕೊಂಡು ಲಾಹೋರಿನ ಬೀದಿಗಳ ತುಂಬ ಓಡಾಡುತ್ತ ಇದ್ದುದನ್ನು ನಾನೇ ಎಷ್ಟೋ ಸಲ ನೋಡಿದ್ದೇನೆ. ಕೆಲವೊಮ್ಮೆ ವಿಶ್ವವಿದ್ಯಾಲಯದ ನಿಲುವಂಗಿ ಮತ್ತು ತಲೆಯ ಮೇಲೆ ಟೋಪಿಯನ್ನು ಪದವಿ ಪ್ರದಾನ ಸಮಾರಂಭಕ್ಕೆ ಹಾಕಿಕೊಳ್ಳುವಂತೆ ಹಾಕಿಕೊಂಡು ಆರ್ಯ ಸಮಾಜದ ವೇದಿಕೆಯ ಮೇಲೆ ಬಂದದ್ದುಂಟು ಎಂಬುದನ್ನು ಕೇಳಿದ್ದೇನೆ.” ಅವರ ರೀತಿ-ನೀತಿಗಳಲ್ಲಿ ವಿಲಕ್ಷಣವಾಗಿದ್ದ ಗುರುದತ್ತ ಸಾರ್ವಜನಿಕ ಅಭಿಪ್ರಾಯಗಳ ಬಗ್ಗೆ ತಿರಸ್ಕಾರವನ್ನು ತೋರದಿದ್ದರೂ, ಆಸಕ್ತಿಯನ್ನಂತೂ ಹೊಂದಿರಲಿಲ್ಲ. “ಕೆಲವೊಮ್ಮೆ ಅವರು ಎರಡು ದಿನಗಳ ಕಾಲ ಸಂಪೂರ್ಣವಾಗಿ ರಾತ್ರಿ ಮತ್ತು ಹಗಲು ಎನ್ನದೆ ಮಲಗಿರುತ್ತಿದ್ದರು. ಇನ್ನು ಕೆಲವೊಮ್ಮೆ ರಾತ್ರಿ ಮತ್ತು ಹಗಲು ಎನ್ನದೆ ಎವೆ ಮುಚ್ಚದೆ ಕೆಲಸ ಮಾಡುತ್ತಲೇ ಇರುತ್ತಿದ್ದರು. ಸ್ನೇಹದಿಂದ ಸಲಹೆಗಳನ್ನು ಕೊಟ್ಟಾಗ ಅವರಿಗೆ ಕಿರಿಕಿರಿಯಾಗುತ್ತಿತ್ತು. ನಿಶ್ಚಿತವಾಗಿ ನನಗೆ ಹೇಳಲಾಗದೆ ಇದ್ದರೂ, ಎಲ್ಲರೂ

---

[56] Quotes given below from Ruchi Ram Sahni “Self revelations of an Octogenarian” pp 82-83

ಹೇಳುವಂತೆ ಅವರು ಆ ಸಮಯದಲ್ಲಿ ಟಿ.ಬಿ. ಕಾಯಿಲೆಯಿಂದ ಬಳಲುತ್ತಿದ್ದರು ಎಂದು ಅನಿಸುತ್ತದೆ." ಎಂದುರು ಚಿರಾಮ್ ಸಾಹ್ನಿ ಕೆಲವೊಂದು ವಿವರಗಳನ್ನು ಬಿಚ್ಚಿಡುತ್ತಾರೆ.

ವ್ಯವಸ್ಥಾಪಕ ಮಂಡಳಿಯ ಒಳಗೆಯೇ ಹೆಚ್ಚಿನವರಿಂದ ಬೇರ್ಪಟ್ಟು ದೂರ ಉಳಿದ ಗುರುದತ್ತರ ವ್ಯಕ್ತಿತ್ವ 'ಭಕ್ತಿ'ಯಕಡೆಗೆ ಚಲಿಸಿತು. ಭಕ್ತಿತತ್ವ ಅವರ ಪಾಲಿಗೆ ಮುಖ್ಯವಾಯಿತು. ಅವರು ಆರ್ಯ ಸಮಾಜದ ಚಟುವಟಿಕೆಗಳನ್ನು ಧಾರ್ಮಿಕ ಚಳುವಳಿ ಎಂಬಂತೆ ಕಾಣಲು ಆರಂಂಭಿಸಿದರು. ಅದು ಪ್ರಪ್ರಥಮವಾಗಿ ಶೈಕ್ಷಣಿಕ ಚಳುವಳಿ ಅಥವಾ ಒಂದು ಬಗೆಯ ಸಾಮಾಜಿಕ ಚಳುವಳಿ ಎಂಬಂತೆ ಅವರಿಗೆ ಕಾಣಲಿಲ್ಲ. ಆರ್ಯನ್ ಪರಿಕಲ್ಪನೆಯ ಬಗ್ಗೆ ಅತಿಯಾದ ಕಾಳಜಿಯಿಂದಾಗಿ ಇಂಗ್ಲಿಷ್ ಶಿಕ್ಷಣ ಪದ್ಧತಿ ಮತ್ತು ಪಶ್ಚಿಮದ ಜ್ಞಾನ ಎರಡನ್ನೂ ಪ್ರಶ್ನಿಸಲು ಆರಂಭಿಸಿದರು. ದಿನಗಳೆದಂತೆ ಬಹಳ ಅತಿರೇಕದ ನಿಲುವನ್ನು ತಳೆದರು. ಇಂಗ್ಲಿಷ್‌ಕಲಿಯುವುದರಿಂದ ಉಪಯೋಗವಿಲ್ಲ ಎಂಬ ನಿರ್ಧಾರಕ್ಕೆ ಬಂದರು. ಒಮ್ಮೆಯಂತೂ ತಾನು ಕಲಿತ ಪಶ್ಚಿಮದ ಎಲ್ಲ ಜ್ಞಾನವನ್ನೂ ಮರೆಯಬೇಕಾಗಿತ್ತೆಂದೂ, ಕಲಬೆರಕೆ ಇಲ್ಲದ ಸಂಸ್ಕೃತದಲ್ಲಿ ತಜ್ಞನಾಗಬೇಕಿತ್ತೆಂದೂ ಅಂದುಕೊಳ್ಳುತ್ತಿದ್ದರು ಎಂಬ ವಿಷಯ ತಿಳಿದು ಬಂದಿತ್ತು. ಸಂಸ್ಕೃತ ಮತ್ತು ವೇದಗಳ ಬಗೆಗಿನ ಅವರ ಅತಿ ಪ್ರೀತಿಯು ಲಾಲ್‌ಚಂದ್, ಸೈನ್‌ದಾಸ್ ಮತ್ತು ಹನ್ಸ್ರಾಜ್‌ರನ್ನು ಚಿಂತೆಗೆ ಈಡು ಮಾಡಿತ್ತು.[57] ಇವರೆಲ್ಲರೂ ಗುರುದತ್ತ ಅವರ ಅತಿರೇಕದ ನಿಲುವುಗಳನ್ನು ಒಪ್ಪಿಕೊಂಡಿರಲಿಲ್ಲ. ಗುರುದತ್ತ ಅವರ ಉಗ್ರಗಾಮಿ ಬೋಧನೆಗಳನ್ನು ಅವರು ಮೆಚ್ಚಿಕೊಂಡಿರಲಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಲಾಲಾ ಹನ್ಸ್ರಾಜ್ ಅವರು ಅಚ್ಚುಕಟ್ಟಿನ, ಅಷ್ಟೇ ಅಲ್ಲದೆ ಸಮರ್ಥವಾದ ವ್ಯಕ್ತಿಯಾಗಿದ್ದರು. ಕಟ್ಟುನಿಟ್ಟಿನ ಶಿಸ್ತನ್ನು ಪಾಲಿಸುವ ವ್ಯಕ್ತಿಯಾದ ಇವರು ಒಬ್ಬ ಆದರ್ಶ ಸ್ಕೂಲ್ ಮಾಸ್ತರರಾಗಿದ್ದರು. ಅವರ ಮನೋಧರ್ಮವೂ ಸೈನ್‌ದಾಸರ ಮನೋಧರ್ಮದ ಜೊತೆ ಹೊಂದಿಕೆಯಾಗುತ್ತಿತ್ತು. ಇಬ್ಬರೂಕೂಡ ಬಹಳ ಧಾರ್ಮಿಕ ಮನಸ್ಸಿನವರಾಗಿರಲಿಲ್ಲ. ಅಲ್ಲದೆ ಪಶ್ಚಿಮದ ಕಲಿಕೆಯಿಂದ ಜನರನ್ನು ಪೂರ್ತಿಯಾಗಿ ದೂರ ಮಾಡುವುದು ಮತ್ತು ಕಲಿಕೆಯನ್ನು ಬರಿಯ ಸಂಸ್ಕೃತಕ್ಕೆ ಬದಲಾಯಿಸುವುದು ತುಂಬ ತೊಂದರೆಯನ್ನು ಉಂಟು ಮಾಡಬಹುದು ಎಂದು ಇಬ್ಬರೂ ಭಾವಿಸಿದ್ದರು.[58] ಲಾಲಾ ಸೈನ್‌ದಾಸ್ ಬಹಳ ಬಲವಾಗಿ ಹನ್ಸ್ರಾಜ್ ಅವರನ್ನು ಬೆಂಬಲಿಸಿದ್ದರು. ಇದು ವ್ಯವಸ್ಥಾಪಕ ಮಂಡಳಿಯ ಮೇಲೆ ಬಹಳ ದೊಡ್ಡ ಪ್ರಭಾವವನ್ನು ಬೀರಿತು. ಲಾಜ್‌ಪತ್‌ರಾಯ್ ಹೇಳುವಂತೆ, "ಸೈನ್‌ದಾಸ್‌ಒಂದು ರೀತಿಯಲ್ಲಿ ಒಬ್ಬ ಸಮರ್ಥ ಅಧಿಕಾರಿ. ಅವರಿಗೆ ಉಗ್ರಗಾಮಿ ಸಿದ್ಧಾಂತಗಳು ಇಷ್ಟವಿರಲಿಲ್ಲ. ಹಾಗೆಯೇ ಯಾರು ಅನಿಯಮಿತವಾದ ಅನವಶ್ಯಕವಾದ ದೀರ್ಘವಾದ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಾರೋ ಹಾಗೂ ಧರ್ಮದ ಬಗ್ಗೆ ಮಾತಾಡುತ್ತಾರೋ ಅಂತವರು ಒಳ್ಳೆಯ ಸುರಕ್ಷಿತ ನೇತಾರರಾಗಲು ಸಾಧ್ಯವಿಲ್ಲ

[57] Lajpat Rai, Autobiographical writings, ed VC Joshi, (Delhi: University Publishers 1965), p 49

[58] Lajput Rai, ibid p 50

ಎಂದು ನಂಬಿದ್ದರು. ಅವರೇನೂ ಧರ್ಮವನ್ನು ಬಹಿಷ್ಕರಿಸಬೇಕೆಂದು ಹೇಳಲಿಲ್ಲ. ಆದರೆ ಧಾರ್ಮಿಕ ಸೂಕ್ಷ್ಮಗಳಿಂದ, ಧಾರ್ಮಿಕ ಗೋಜಲುಗಳಿಂದ ಮತ್ತು ಮೂಢನಂಬಿಕೆಗಳಿಂದ ಜನರಿಗೆ ಬಿಡುಗಡೆ ದೊರೆಯಬೇಕೆಂಬುದು ಅವರ ಆಶಯವಾಗಿತ್ತು. ಅವರು ಗುರುದತ್ತರನ್ನು ಬಹಳ ಪ್ರೀತಿಸುತ್ತಿದ್ದರು. ಆದರೆ ಅದಕ್ಕಿಂತ ಹೆಚ್ಚಾಗಿ ತಮ್ಮದೇ ನಿಲುವುಗಳನ್ನು ಮತ್ತು ಗುರಿಗಳನ್ನು ಪ್ರೀತಿಸುತ್ತಿದ್ದರು.[59] ಹೀಗೆ ಸೈನ್‌ದಾಸ್ ತಮ್ಮ ನಿಲುವನ್ನು ಬೆಂಬಲಿಸಿದರು ಮತ್ತು ವ್ಯವಸ್ಥಾಪಕ ಮಂಡಳಿಗೆ ಗುರುದತ್ತ ಅವರನ್ನು ತಿರಸ್ಕರಿಸಿ, ಹನ್ಸ್ರಾಜ್ ಅವರನ್ನು ಹೊಸ ಕಾಲೇಜಿನ ಪ್ರಾಂಶುಪಾಲರನ್ನಾಗಿ ಮಾಡುವಂತೆ ಸಲಹೆ ಮಾಡಿದರು. ಇದರಿಂದ ಗುರುದತ್ತರಿಗೆ ನಿರಾಶೆಯಾಯಿತು ಮತ್ತು ಅವರ ಹತ್ತಿರದ ಸಹೋದ್ಯೋಗಿಗಳಿಗೆ ಸಿಟ್ಟನ್ನು ತರಿಸಿತು. ಇದರ ಪರಿಣಾಮವಾದ ಕಹಿ ಬೇಗನೆ ಕರಗಲಿಲ್ಲ, ಬದಲಿಗೆ ಅದು ಕಾಲೇಜು ಚಳುವಳಿ ಮಾತ್ರವಲ್ಲ ಇಡಿಯ ಆರ್ಯ ಸಮಾಜದಲ್ಲೇ ಅದಾಗಲೇ ಇದ್ದಂತಹ ಭಿನ್ನಾಭಿಪ್ರಾಯಗಳನ್ನು ಮತ್ತಷ್ಟು ಹೆಚ್ಚಿಸಿತು.

ಹೊಸತಾಗಿ ಆರಂಭವಾದ ಆಂಗ್ಲೋ ವೇದಿಕ್ ಶಾಲೆ ಹನ್ಸ್ರಾಜ್ ಅವರ ಕೈ ಕೆಳಗೆ ಪ್ರಗತಿಯನ್ನು ಕಂಡಿತು. ಶಾಲೆ ಮತ್ತು ಕಾಲೇಜು ಎರಡರಲ್ಲೂ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತು. 1889ರ ವೇಳೆಗೆ ಒಂದು ಸ್ಥಿರವಾದ ಸಂಖ್ಯೆಯನ್ನು ತಲುಪಿತು. 1890ರ ವೇಳೆಗೆ ಒಟ್ಟು 38 ಜನ ವಿದ್ಯಾರ್ಥಿಗಳು ಮೊದಲ ವರ್ಷಕ್ಕೆ ಸೇರಿಕೊಂಡರು. ಅಷ್ಟೇ ಅಲ್ಲ, 1893ರ ಹೊತ್ತಿಗೆ ಕಾಲೇಜು ತನ್ನ ಮೊದಲ ವರ್ಷದ ಬಿಎ ಡಿಗ್ರಿ ಕ್ಲಾಸುಗಳನ್ನು ಆರಂಭ ಮಾಡಿತು. ವ್ಯವಸ್ಥಾಪಕ ಮಂಡಳಿ ದಯಾನಂದರ ಸ್ಮರಣೆಗಾಗಿ ಕಾಲೇಜನ್ನು ಆರಂಭಿಸುವ ತನ್ನ ಗುರಿಯನ್ನು ಈ ಮೂಲಕ ತಲುಪಿತು. ಶಾಲೆ ಮತ್ತು ಕಾಲೇಜು ಎರಡೂ, ಜನರಿಂದ ಹಾಗೂ ಸರಕಾರದಿಂದ ಮಾನ್ಯತೆ ಪಡೆಯಿತು. ಅಷ್ಟೇ ಅಲ್ಲ, ಇವು ಆರ್ಯ ಸಮಾಜದ ಹೊರಗೂ ಮತ್ತು ಒಳಗೂ ಮಾದರಿ ಶಿಕ್ಷಣ ಸಂಸ್ಥೆಗಳೆಂದು ಹೆಸರು ಪಡೆದವು. ಆರ್ಯ ಸಮಾಜಿಗಳು ವ್ಯಕ್ತಿಗತವಾಗಿಯೂ ಮತ್ತು ಸ್ಥಳೀಯ ಶಾಖೆಗಳಾಗಿಯೂ ಹಾಗೂ ಬೇರೆ ಬೇರೆ ಸುಧಾರಣಾ ಗುಂಪುಗಳು, ಆರ್ಯ ಸಮಾಜದ ವಿರೋಧಿ ಬಣಗಳು ಎಲ್ಲರೂ ಇಡಿಯ ಪ್ರಾಂತ್ಯದಲ್ಲಿ ಶಾಲೆಗಳನ್ನು ಸ್ಥಾಪಿಸಲು ಮುಂದಾದರು. ಇದುವರೆಗೂ ಶಿಕ್ಷಣದ ಬಗೆಗಿನ ತಮ್ಮ ಗಮನವನ್ನು ಬರಿಯ ಲಾಹೋರಿಗೆ ಸೀಮಿತಗೊಳಿಸಿದ್ದ ಆರ್ಯ ಸಮಾಜಿಗಳು ಈಗ ಹಳ್ಳಿ ಹಳ್ಳಿಗಳ ಕಡೆ ಹೊರಳಿದರು. 1888ರಲ್ಲಿ ಲಾಲಾ ಜ್ವಾಲಾ ಸಹಾಯ್ ಅವರು ಶಾಹಪುರ್‌ಜಿಲ್ಲೆಯ ಲುನ್ ಮಿಯಾನಿ ಎಂಬಲ್ಲಿ ಒಂದು ಇಂಗ್ಲಿಷ್ ಶಾಲೆಯನ್ನು ಪ್ರಾರಂಭಿಸಿದರು. ಜಲಂಧರ್ ಕಂಟೋನ್ಮೆಂಟ್ ಪ್ರದೇಶದಲ್ಲಿ ಆರ್ಯ ಸಮಾಜ ಒಂದು ಶಾಲೆಯನ್ನು ಆರಂಭಿಸಿತು. ಅದು ಎರಡನೆಯ ವರ್ಷಕ್ಕೇ 300 ಮಕ್ಕಳಿಗೆ ಪ್ರವೇಶ ನೀಡಿತು.[60] ಆರ್ಯರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೂ ಗಮನ ಹರಿಸಿದರು. 1889ರ ವೇಳೆಗೆ ಫಿರೋಜ್‌ಪುರದ ಆರ್ಯ ಸಮಾಜ ಹೆಣ್ಣು ಮಕ್ಕಳ ಶಾಲೆಯನ್ನು ಯಶಸ್ವಿಯಾಗಿ

---

[59] Lajput Rai, ibid pp 50-51

[60] Tribune, September, 25, 1889, p 5

ಆರಂಭಿಸಿತು.[61] ಗುಜರಾತ್ ಮತ್ತು ಜಲಂಧರ್‌ನ ಸಮಾಜಗಳು ಫಿರೋಜ್‌ಪುರದ ಮಾದರಿಯನ್ನು ಅನುಸರಿಸಿ ಹೆಣ್ಣು ಮಕ್ಕಳಿಗೆ ಶಾಲೆಯನ್ನು ತೆರೆದರು.[62] ಬಾಗ್‌ಬನ್‌ಪುರದ ಸಣ್ಣ ಹಾಗೂ ಬಡ ಸಮಾಜ ಕೂಡ ಹುಡುಗರು ಮತ್ತು ಹುಡುಗಿಯರಿಗೆ ತಲಾ ಒಂದೊಂದು ಶಾಲೆಯನ್ನು ಆರಂಭಿಸಿದವು. ಇದಕ್ಕೆ ಬೇಕಾದ ಧನ ಸಹಾಯಕ್ಕಾಗಿ ಪಂಜಾಬ್ ಮತ್ತು ವಾಯುವ್ಯ ಪ್ರಾಂತ್ಯಗಳ ತುಂಬ ಸಂಚರಿಸಿ ನಿಧಿಯನ್ನು ಸಂಗ್ರಹ ಮಾಡಿದವು.[63] ಹೀಗೆ ಶಿಕ್ಷಣ ಎಂಬುದು ಆರ್ಯರ ಮುಖ್ಯ ಗುರಿಯಾಯಿತು. ಒಟ್ಟಿನಲ್ಲಿ 1890ರ ದಶಕದಲ್ಲಿಆರ್ಯರು ಪ್ರಾಥಮಿಕ ಶಾಲೆಗಳಿಂದ ಹಿಡಿದು ಕಾಲೇಜಿನವರೆಗೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ದೊಡ್ಡದಾದ ಒಂದು ಶೈಕ್ಷಣಿಕ ವ್ಯವಸ್ಥೆಯನ್ನೇ ಹುಟ್ಟು ಹಾಕಿದರು.

## ರಚನೆ, ಕಾರ್ಯವೈಖರಿ ಮತ್ತು ಸಿದ್ಧಾಂತಗಳು

ಶೈಕ್ಷಣಿಕ ಚಳುವಳಿಯ ಬೆಳವಣಿಗೆ ಮತ್ತು ಜೊತೆಯಲ್ಲೇ ನಡೆದ ಆರ್ಯ ಸಮಾಜದ ವಿಸ್ತರಣೆ ಇವೆರಡೂ ಸೇರಿ ದಯಾನಂದ್ ಆಂಗ್ಲೋ ವೇದಿಕ್ ಸೊಸೈಟಿಯ ಮೂಲ ರಚನೆಗೆ ಸಾಕಷ್ಟು ಸಂಕೀರ್ಣತೆಯನ್ನು ಮತ್ತು ವೈವಿಧ್ಯತೆಯನ್ನು ತಂದುಕೊಟ್ಟವು. ಮೊದ ಮೊದಲಿಗೆ ಸಮಾಜ ಮತ್ತು ವ್ಯವಸ್ಥಾಪಕ ಮಂಡಳಿ ಇವೆರಡೂ ಬಹಳ ದೊಡ್ಡ ಮಟ್ಟದ ಸರ್ವಾನುಮತವನ್ನು ಪ್ರದರ್ಶಿಸಿದವು. ಶಾಲೆಯೊಂದು ಬೇಕು ಎನ್ನುವ ಸಮಾನ ಗುರಿಯನ್ನು ಬೆಂಬಲಿಗರು ಹಾಗೂ ಮುಖಂಡರು ಇಬ್ಬರೂ ಸಮಾನವಾಗಿ ಅನುಮೋದಿಸಿದರು. ಪ್ರತಿಯೊಬ್ಬನೂ ತಾನು ಕಲ್ಪನೆ ಮಾಡಿದ ಶಾಲೆ ತನ್ನ ಇಚ್ಛೆಯ ಅನುಸಾರವಾದ ಶೈಕ್ಷಣಿಕ ವಿನ್ಯಾಸವನ್ನು ರೂಪಿಸುತ್ತದೆ ಎಂದು ನಂಬಿದ್ದ. ವಾಸ್ತವಕ್ಕಿಂತ ಹೆಚ್ಚಾಗಿ ಸಾಧ್ಯತೆಗಳು, ಸಂಭಾವ್ಯತೆಗಳು ಹೊಸ ಬಗೆಯ ಆಸೆಗಳಿಗೆ ದಾರಿ ಮಾಡಿಕೊಟ್ಟವು. ಆದರೆ ಒಮ್ಮೆ ಶಾಲೆ ಅಸ್ತಿತ್ವಕ್ಕೆ ಬಂದ ಮೇಲೆ, ವಿವಿಧ ಹಿನ್ನೆಲೆಗಳಿಂದ ಬಂದು ಬೆಂಬಲಿಸಿದ ಆರ್ಯರು ಮೂರ್ತರೂಪದಲ್ಲಿರುವ ಶಾಲೆ ತಾವೆಲ್ಲ ಅಭಿವ್ಯಕ್ತಿಸಿದ ನಿರೀಕ್ಷೆಗಳನ್ನು ನಿಜ ಮಾಡಲು ಸಾಧ್ಯವಿಲ್ಲ ಎಂಬುದನ್ನುಅರಿತರು. ವಿಸ್ತರಣೆಯಿಂದಾಗಿ ಶಿಕ್ಷಣದ ಅರಿವುಕೇಂದ್ರದಿಂದ ಹೊರ ಹೋಗುವ ಶಕ್ತಿಯಂತೆ ಕಂಡರೂ, ದಯಾನಂದ್ ಆಂಗ್ಲೋ ವೇದಿಕ್ ಕಾಲೇಜು ಸಂಸ್ಥೆಯ, ಆಡಳಿತದ ಒಟ್ಟು ಸ್ವರೂಪ ಅಧಿಕಾರದ ಕೇಂದ್ರೀಕರಣದ ಕಡೆಗೆ ಚಲಿಸಿದಂತೆ ಕಂಡಿತು. ಈ ಎರಡು ಪ್ರಕ್ರಿಯೆಗಳಿಂದಾಗಿ ಶೈಕ್ಷಣಿಕ ಚಳುವಳಿ ಹಾಗೂ ಇಡಿಯಾಗಿ ಆರ್ಯ ಸಮಾಜದ ಸಿದ್ಧಾಂತ- ಇವೆರಡರ ಮಧ್ಯೆ ಬಹಳಷ್ಟು ತಾಕಲಾಟಗಳು ಉಂಟಾದವು.

ದಯಾನಂದ್ ಆಂಗ್ಲೋ ವೇದಿಕ್ ಕಾಲೇಜು ಟ್ರಸ್ಟ್ನ ಅಧಿಕೃತವಾದ ಸಂಸ್ಥೆ ಮತ್ತು ಆರ್ಯ ಸಮಾಜದ ವ್ಯವಸ್ಥಾಪಕ ಸಂಸ್ಥೆ ಎರಡೂ ಬಹಳ ಕೇಂದ್ರೀಕೃತವಾದ

---

[61] Tribune, November 27, 1889, p 5

[62] Tribune, July, 23, 1890, p 5

[63] Tribune, August, 13, 1890, p 4

ವ್ಯವಸ್ಥೆಯನ್ನು ಹೊಂದಿದ್ದವು. ವರ್ಷಕ್ಕೊಮ್ಮೆ ಸೇರುವ ವ್ಯವಸ್ಥಾಪಕ ಸಂಸ್ಥೆಗೆ ಕಡಿಮೆ ಅಧಿಕಾರವಿತ್ತು. ಬದಲಾಗಿ ವ್ಯವಸ್ಥಾಪಕ ಮಂಡಳಿ ಮತ್ತು ಅದರ ಉಪಸಮಿತಿಗಳು ನಿಯಮಾವಳಿಗಳನ್ನು ಹಾಗೂ ಆಡಳಿತದ ಬಗೆಗಿನ ಅನೇಕ ವಿಷಯಗಳನ್ನು ನಿರ್ಧರಿಸುತ್ತಿದ್ದವು. ಇಲ್ಲಿಯೂ ಕೂಡಯಾರು ಬಹಳ ನಿಯಮಿತವಾಗಿ ಈ ಸಭೆಗಳಿಗೆ ಹಾಜರಾಗುತ್ತಿದ್ದರೋ ಮತ್ತು ಯಾರು ಲಾಲಾ ಲಾಲ್‌ಚಂದರ ಕೇಂದ್ರ ವ್ಯಕ್ತಿತ್ವದ ಒಳಗಿನ ವರ್ತುಲದಲ್ಲಿದ್ದರೋ ಅಂತವರಕೈಯ್ಯಲ್ಲಿ ಅಧಿಕಾರ ಇರುತ್ತಿತ್ತು. ಹೀಗೆ ವ್ಯವಸ್ಥಾಪಕ ಮಂಡಳಿಯ ಅಧ್ಯಕ್ಷರ ಆಫೀಸಿನಲ್ಲಿ ಅಧಿಕಾರ ಒಟ್ಟಾಗುತ್ತಲೇ ಹೋಯಿತು. ಎಲ್ಲ ಸಮಸ್ಯೆಗಳೂ ಹಾಗೂ ನಿರ್ಧಾರಗಳು ಅದರ ಮೂಲಕವೇ ಹಾದು ಹೋಗಬೇಕಾಗಿತ್ತು. ಹನ್ಸ್ರಾಜ್ ಮೊದಲು ಶಾಲೆಯ ಹೆಡ್‌ಮಾಸ್ತರ್ ಆಗಿ, ಆಮೇಲೆ ಪ್ರಾಂಶುಪಾಲರಾಗಿದ್ದರೂ ಲಾಲ್‌ಚಂದ್ ಮೂಲಕವೇ ವ್ಯವಸ್ಥಾಪಕ ಮಂಡಳಿಯ ಜೊತೆ ವ್ಯವಹರಿಸಬೇಕಾಗಿತ್ತು. ಕೆಳಗಿನ ಶ್ರೇಣಿಯ ಸಹಾಯಕ ಕೂಡಾ ಹೀಗೇ ವ್ಯವಹರಿಸಬೇಕಾಗಿತ್ತು. ಅಧ್ಯಕ್ಷ ಒಂದೋ ತಾನೇ ನಿರ್ಧಾರ ತೆಗೆದುಕೊಳ್ಳಬಹುದಾಗಿತ್ತು ಅಥವಾ ಉಪಸಮಿತಿಗೆ ಇದನ್ನು ವರ್ಗಾಯಿಸಬಹುದಿತ್ತು ಅಥವಾ ವ್ಯವಸ್ಥಾಪಕ ಮಂಡಳಿಗೆ ಇದನ್ನು ರೆಫರ್ ಮಾಡಬಹುದಾಗಿತ್ತು. ಹೀಗೆ ಅಧ್ಯಕ್ಷತನ್ನ ಕೊನೆಯ ನಿರ್ಧಾರವನ್ನುಅರ್ಜಿದಾರನಿಗೆ ತಿಳಿಸಬಹುದಾಗಿತ್ತು. ಬಹಳ ಸಮರ್ಥರಾಗಿದ್ದ ಲಾಲ್‌ಚಂದ್‌ತಮ್ಮ ಸಾಮರ್ಥ್ಯ ಹಾಗೂ ಸರ್ವಾಂತರ್ಯಾಮಿ ಅಸ್ಮಿತೆಯಿಂದ ಎಲ್ಲರನ್ನೂ ಆಳುವಷ್ಟು ಪರಿಣತರಾಗಿದ್ದರು. ವ್ಯವಸ್ಥಾಪಕ ಮಂಡಳಿಯ ಸಭೆಯನ್ನು ಅವರು ಯಾವತ್ತೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಹಾಗೆಯೇ ಉಪಸಮಿತಿಗಳ ಸಭೆಯನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಸಮಿತಿಗಳ ಸಭೆಗಳಲ್ಲಿ ಯಾವತ್ತೂ ಅವರ ಮಾತಿಗೆ ಸೋಲಾಗುತ್ತಿರಲಿಲ್ಲ. ಅವರ ಗೆಳೆಯರೂ ಅನೇಕರು ಬಹಳ ಪ್ರಭಾವಶಾಲಿಗಳಾಗಿರುವುದು ಅವರಿಗೆ ಇನ್ನಷ್ಟು ಬಲವನ್ನು ಕೊಟ್ಟಿತ್ತು. 1890ರಲ್ಲಿ ಲಾಲ್‌ಚಂದ್ ತೀರಿಕೊಳ್ಳುವವರೆಗೆ, ಲಾಲಾ ಸೈನ್‌ದಾಸ್ ಅವರು ಲಾಲ್‌ಚಂದರ ಶಾಲೆಯ ಪರಿಕಲ್ಪನೆಯನ್ನು ಅನುಮೋದಿಸುತ್ತಲೇ ಬಂದರು. ಲಾಲ್‌ಚಂದ್‌ಅವರು ಅಧ್ಯಕ್ಷರಾಗಿ ಕೊನೆಯವರೆಗೂ ವ್ಯವಸ್ಥಾಪಕ ಮಂಡಳಿಯ ಮೇಲೆ ಸಾಕಷ್ಟು ಪ್ರಭಾವವನ್ನು ಉಳಿಸಿಕೊಂಡಿದ್ದರು. ರಾವಲ್ಪಿಂಡಿಯ ನ್ಯಾಯವಾದಿಯಾದ ಲಾಲಾ ಈಶ್ವರ್‌ದಾಸ್ 1886ರಿಂದ ತೊಡಗಿ 1911ರ ವರೆಗೂ ಮಂಡಳಿಗೆ ಸಹಾಯ ಮತ್ತು ಸಲಹೆಗಳನ್ನು ನೀಡುತ್ತಿದ್ದರು. ವ್ಯವಸ್ಥಾಪಕ ಮಂಡಳಿಯಲ್ಲಿ ಉಪಾಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಯಾಗಿ ಬಹಳ ಕಾಲ ಕಾರ್ಯ ನಿರ್ವಹಿಸಿದ್ದರು. ಅಷ್ಟೇ ಅಲ್ಲ ಅನೇಕ ಉಪಸಮಿತಿಗಳಲ್ಲಿ ಬಹಳ ಸಕ್ರಿಯವಾಗಿ ಭಾಗವಹಿಸಿದ್ದರು. ಅದೇ ರೀತಿ ಲಾಹೋರಿನ ಪಬ್ಲಿಕ್ ವರ್ಕ್ಸ್‌ಡಿಪಾರ್ಟ್ಮೆಂಟಿನಲ್ಲಿ ಕಾರಕೂನರಾಗಿದ್ದ ಲಾಲಾ ರಲ್ಲಾರಾಮ್ ಅವರು 1888ರಲ್ಲಿ ವ್ಯವಸ್ಥಾಪಕ ಮಂಡಳಿಯನ್ನು ಸೇರಿ, 1910ರ ವರೆಗೂ ಸಕ್ರಿಯ ಸದಸ್ಯರಾಗಿ ಕೆಲಸ ಮಾಡಿದರು. ಮಂಡಳಿಯಲ್ಲಿ ಒಬ್ಬ ಅಧಿಕಾರಿಯಾಗಿ ಹಾಗೂ ಹಲವು ಉಪಸಮಿತಿಗಳ ಸದಸ್ಯರಾಗಿ ಕಾರ್ಯಗಳನ್ನು ನಿರ್ವಹಿಸಿದರು. ಲಾಲ್‌ಚಂದರ ಗುಂಪನ್ನು ಬಹಳ ಸ್ಥಿರವಾಗಿ

ಅನುಮೋದಿಸುತ್ತ ಬಂದರು. ಹೀಗೆಯೇ ಲಾಲಾ ಸುಖ್‌ದಯಾಳರೂ 1886ರಿಂದ 1914ರ ವರೆಗೆ ಹಾಗೂ ಮುಂದೆಯೂ ಅಧಿಕಾರಿಯಾಗಿ ಹಾಗೂ ಸಮಿತಿಗಳ ಸದಸ್ಯರಾಗಿ ಇದೇ ರೀತಿಯ ಶ್ರದ್ಧೆಯನ್ನು ತೋರಿದರು. ಸಹಾಯ ಮತ್ತು ಮುಖಂಡತ್ವವನ್ನು ನೀಡಿದ ಎಷ್ಟೋ ಜನರ ಹೊರತಾಗಿಯೂ, ಇನ್ನೂ ಹಲವು ಜನ ಆರ್ಯ ಸಮಾಜಿಗಳು ಮಂಡಳಿಯನ್ನು ಬೆಂಬಲಿಸಿದವರಿದ್ದರು. ಇವರು ಆರ್ಯ ಸಮಾಜದ ಶೈಕ್ಷಣಿಕ ವಿಷಯಗಳಲ್ಲಿ ಯಾವುದೇ ವಿವಾದಾತ್ಮಕ ವಿಷಯಗಳಿದ್ದರೂ ಅದರ ಪರವಾಗಿ ಮತ ಚಲಾಯಿಸುವ ನಿಷ್ಠರಾಗಿದ್ದವರಾಗಿದ್ದರು.

ಲಾಲ್‌ಚಂದರ ವಲಯವನ್ನು ಸೇರಲು ಬಂದ ಯುವಕರಲ್ಲಿ ಮೊದಲನೆಯವರೇ ಲಾಲಾ ಹನ್ಸ್‌ರಾಜ್. ದಯಾನಂದ್ ಆಂಗ್ಲೋ ವೇದಿಕ್ ಕಾಲೇಜು ಚಳುವಳಿಯ ನೇತಾರರೆಂದೇ ಪರಿಗಣಿಸಲ್ಪಟ್ಟ ಹನ್ಸ್‌ರಾಜ್ ಅವರು ಲಾಲ್‌ಚಂದರಿಗಿಂತ ಕಡಿಮೆ ಅಧಿಕಾರವನ್ನು ಹೊಂದಿದವರಾಗಿದ್ದರು. ವಿಶೇಷವಾಗಿ ಅವರು ಶಾಲೆಯ ಕೆಲಸಕ್ಕೆ ಸೇರಿದ ಮೊದಲ ಕೆಲವು ವರ್ಷಗಳಲ್ಲಂತೂ ಈ ಮಾತು ನಿಜ. ಹನ್ಸ್ ರಾಜ್ ಅವರು ನಿರ್ಧಾರಗಳನ್ನು ತೆಗೆದುಕೊಳ್ಳುವ ಹಂತವನ್ನು ಪ್ರವೇಶಿಸಿದ್ದು 1888ರಲ್ಲಿ. ಅವರುಕಾಲೇಜಿನ ಪ್ರಿನ್ಸಿಪಾಲ್ ಆಗಿ ಆಯ್ಕೆಯಾದ ಮೇಲೆ ಮತ್ತು ಅದೇ ಹೊತ್ತಿಗೆ ಗುರುದತ್ತ ಹಾಗೂ ಸೈನ್‌ದಾಸ್ ಅವರು ತೀರಿಕೊಂಡಿದ್ದರಿಂದ ಹನ್ಸ್ ರಾಜ್ ಅವರು ಲಾಲ್‌ಚಂದರಿಗೆ ಒಂದು ಬಗೆಯಲ್ಲಿ ಉತ್ತರಾಧಿಕಾರಿ ಆದರು. ಅವರೂ ವ್ಯವಸ್ಥಾಪಕ ಮಂಡಳಿಯಲ್ಲಿ ಹಾಗೂ ಹಲವು ಉಪಸಮಿತಿಗಳಲ್ಲಿ ಇದ್ದುಕೊಂಡು ಸೇವೆ ಮಾಡಿದರು. ಅವರು ಲಾಲ್‌ಚಂದ್ ಮತ್ತು ಇನ್ನೊಬ್ಬ ಪ್ರಮುಖ ಆರ್ಯ ಸಮಾಜಿಯಾದ ಲಾಲಾ ಲಜ್‌ಪತ್‌ರಾಯ್ ಅವರನ್ನು ಅನುಸರಿಸಿದರು. ಲಾಜ್‌ಪತ್‌ತಮ್ಮ ಹೆಚ್ಚಿನ ಸಮಯ ಹಾಗೂ ಶಕ್ತಿಯನ್ನು ಶಾಲೆ- ಕಾಲೇಜುಗಳಿಗಾಗಿ ನಿಧಿ ಸಂಗ್ರಹ ಮಾಡಲು ವ್ಯಯಿಸಿದರು. 1892ರಲ್ಲಿ ಲಾಹೋರಿಗೆ ಮರಳಿ ಬಂದ ಮೇಲೆ ವ್ಯವಸ್ಥಾಪಕ ಮಂಡಳಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿದರು. ಅಷ್ಟೇ ಅಲ್ಲ, ಸಮಯ ಬಂದಾಗ ಲಾಲ್‌ಚಂದ್ ಗುಂಪಿಗೆ ತಮ್ಮ ಮತವನ್ನು ಚಲಾಯಿಸಿದರು. ಕಾಲೇಜನ್ನು ಮೊದಮೊದಲು ಬೆಂಬಲಿಸಿದವರೆಲ್ಲ ಆಮೇಲಿಂದ ಶಾಲೆ ಮತ್ತು ಕಾಲೇಜುಗಳ ಕುರಿತಾದ ನಿರ್ದಿಷ್ಟ ಪ್ರಶ್ನೆಗಳು ಅಥವಾ ಪರಿಕಲ್ಪನೆಗಳ ಬಗ್ಗೆ ಲಾಲ್‌ಚಂದ್ ಮತ್ತು ಸೈನ್‌ದಾಸ್ ಜೊತೆಯಲ್ಲಿ ಸಹಮತದಿಂದ ಇದ್ದರು ಎಂದೇನೂ ಇಲ್ಲ. ಯಾರಿಗೆಲ್ಲ ಹೆಚ್ಚು ಪ್ರಬಲರಾದ ಲಾಲ್‌ಚಂದ್ ಹಾಗೂ ಸೈನ್‌ದಾಸ್ ಗುಂಪಿನ ಬಗ್ಗೆ ಅತೃಪ್ತಿ ಇತ್ತೋ, ಅಂತವರಿಗೆಲ್ಲ ಈ ಇಬ್ಬರು ಪುರುಷರು, ಪಂಡಿತ್ ಗುರುದತ್ತ ಮತ್ತು ಲಾಲಾ ಜೀವನ್‌ದಾಸ್ ಅವರು ಪರ್ಯಾಯ ನಾಯಕತ್ವವನ್ನು ಒದಗಿಸಿದರು. ಲಾಲಾ ಜೀವನ್‌ದಾಸ್ ಅವರು ಸಮಾಜ ಶುರುವಾದಾಗಿನಿಂದ ವ್ಯವಸ್ಥಾಪಕ ಮಂಡಳಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಅವರು ನಿಯಮಿತವಾಗಿ ವ್ಯವಸ್ಥಾಪಕ ಮಂಡಳಿ ಹಾಗೂ ಹಾಗೂ ಅನೇಕ ಉಪಸಮಿತಿಗಳ ಸಭೆಗಳಲ್ಲಿ ಭಾಗವಹಿಸಿದವರಾಗಿದ್ದರು. ಆದರೆ ಹೆಚ್ಚಿನ ಬಾರಿ ಕಾಲೇಜಿನ ನೀತಿಗಳನ್ನು ವಿರೋಧಿಸಿದವರಾಗಿದ್ದರು. ಶಾಲೆ ಮತ್ತು ಕಾಲೇಜುಗಳ ಬಗ್ಗೆ ಅವರಿಗಾದ

ಭ್ರಮನಿರಸನದಿಂದಾಗಿ ಲಾಲ್‌ಚಂದ್ ಗುಂಪಿನ ವಿರುದ್ಧವಾಗಿದ್ದ ಪಂಡಿತ್ ಗುರುದತ್ತರ ಗುಂಪಿನ ಪರ ವಹಿಸಿದರು.

ಕಾಲೇಜಿನ ಪ್ರಾಂಶುಪಾಲ ಪದವಿಯ ಕುರಿತಾಗಿ ನಡೆದ ಚರ್ಚೆಯ ಮೊದಲಿಗೆ ಸ್ವಲ್ಪ ಭಿನ್ನಾಭಿಪ್ರಾಯ ಕಾಣಿಸಿಕೊಂಡಿತ್ತು. ಆದರೆ 1883ರಲ್ಲೇ ನಮಗೆ ಬೇಕಾಗಿರುವ ಆರ್ಯ ಪದ್ಧತಿಯ ಶಿಕ್ಷಣ ಹೇಗಿರಬೇಕು ಎಂಬುದರ ಬಗ್ಗೆ ಗುರುದತ್ತ ಅವರ ಮನಸ್ಸಿನಲ್ಲಿ ಭಿನ್ನಾಭಿಪ್ರಾಯಗಳು ಇದ್ದವು. ಶಿಕ್ಷಣದಲ್ಲಿ ಎಷ್ಟರಮಟ್ಟಿಗೆ ಶಾಲೆಯೊಂದು 'ಆರ್ಯನ್' ಅಥವಾ 'ವೇದಿಕ್' ಆಗಿರಬೇಕು ಎಂಬುದೇ ದೊಡ್ಡ ಪ್ರಶ್ನೆಯಾಗಿತ್ತು. ಅದೇ ಹೊತ್ತಿಗೆ ಶಾಲೆ ಎಷ್ಟರ ಮಟ್ಟಿಗೆ "ಆಂಗ್ಲೋ" ಆಗಿರಬೇಕು ಮತ್ತು ಕೊನೆಗೂ ಇದು ಬರಿ ಗವರ್ನ್ಮೆಂಟ್ ಕಾಲೇಜಿನ ಇನ್ನೊಂದು ರೂಪ ಮಾತ್ರ ಆಗಬಹುದೇ ಎನ್ನುವ ಗಲಿಬಿಲಿಯೂ ಸೇರಿತ್ತು. ಈ ಎಲ್ಲ ಚರ್ಚೆಗಳ ಹಿಂದೆ ಆರ್ಯ ಸಮಾಜದ ಪರಿಕಲ್ಪನೆಯ ಬಗ್ಗೆ, ಅದರ ಅರ್ಥದ ಬಗ್ಗೆ ಮತ್ತು ದಯಾನಂದರ ಗುರಿಯ ಸ್ವರೂಪ ಇತ್ಯಾದಿಗಳ ಬಗ್ಗೆ ಸಂಘರ್ಷಗಳೂ ಇದ್ದವು.

1889, ಜನವರಿ 31ರಂದು ನಡೆದ ಸಮಾಜದ ವಾರ್ಷಿಕ ಸಭೆಯಲ್ಲಿ ಶಾಲೆಯ ಮೇಲಿನ ಅಧಿಕಾರಕ್ಕಾಗಿ ದೊಡ್ಡ ಜಟಾಪಟಿ ಆರಂಭವಾಯಿತು. ಸಂಸ್ಕೃತ, ಹಿಂದಿ ಮತ್ತು ವೇದಿಕ್ ಶಿಕ್ಷಣದ ಬಗ್ಗೆ ಒಂದು ಸುದೀರ್ಘವಾದ ಪಠ್ಯಕ್ರಮವನ್ನು ಝೀಲಮ್‌ಆರ್ಯ ಸಮಾಜವನ್ನು ಪ್ರತಿನಿಧಿಸಿದ ಲಾಲಾ ಲಲ್ಲಾರಾಮ್ ಅವರು ಸೂಚಿಸಿದ್ದೂ ಆಯಿತು. [64] ಅದನ್ನು ಗುರುದತ್ತ ಅವರು ಅನುಮೋದಿಸಿದ್ದೂ ಆಯಿತು. [65] ಎಲ್ಲಾ ವಿದ್ಯಾರ್ಥಿಗಳು ಸಂಸ್ಕೃತವನ್ನು ಮತ್ತು ಆರ್ಯ ಭಾಷ್ಯ(ಹಿಂದಿ)ವನ್ನು ಪ್ರಾಥಮಿಕ ಶಾಲೆಯ 4ನೆಯ ತರಗತಿಯಿಂದಲೇ ಕಲಿಯಬೇಕೆಂದು ನಿಶ್ಚಯವಾಯಿತು. ದಯಾನಂದರ ಲೇಖನಗಳನ್ನು ಓದುವುದು, ಅವರ ಸತ್ಯಾರ್ಥ ಪ್ರಕಾಶ ಮತ್ತು ಋಗ್ವೇದ ಭಾಷ್ಯ ಭೂಮಿಕಾಗಳನ್ನು ಅಧ್ಯಯನ ಮಾಡುವುದು, ಅಷ್ಟೇ ಅಲ್ಲ ಪಾಣಿನಿಯ ಅಷ್ಟಾಧ್ಯಾಯಿಯನ್ನು ತಿಳಿದುಕೊಳ್ಳುವುದು ಮುಖ್ಯವಾಗಿತ್ತು. ರಲ್ಲಾರಾಮ್ ಅವರಂತೂ ಒಂದು ವೇದಿಕ್ ಗ್ರಂಥಾಲಯವನ್ನು ಸ್ಥಾಪಿಸಬೇಕೆಂದು ಮತ್ತು ಇದನ್ನು ಆರಂಭಿಸಲು 5,000 ರೂಪಾಯಿಗಳ ಆರಂಭದ ಅನುದಾನವು ಬೇಕೆಂದೂ, 1000 ರೂಪಾಯಿಗಳ ವಾರ್ಷಿಕ ಖರ್ಚನ್ನೂ ನಿಭಾಯಿಸಬೇಕಾಗುತ್ತದೆಂದೂ ಲೆಕ್ಕ ಹಾಕಿದರು. ಶಾಲೆಯ ಧಾರ್ಮಿಕ ಸ್ವರೂಪವನ್ನು ಇನ್ನಷ್ಟು ಹೆಚ್ಚಿಸಲು ಆಂಗ್ಲೋ ವೇದಿಕ್ ಕಾಲೇಜಿನ ಬೋರ್ಡಿಂಗ್ ಹೌಸನ್ನು ಹೆಚ್ಚು ಕಠಿಣವಾದ ನಿಯಮಾವಳಿಗಳಿಂದ ನಡೆಸಬೇಕು, ಮೊದಲೇ ನಿಗದಿಪಡಿಸಿದ ಚಟುವಟಿಕೆಗಳನ್ನು ದಿನವಿಡೀ ಮಾಡಬೇಕು, ಅಷ್ಟೇ ಅಲ್ಲ, ಪ್ರತಿ ಇಪ್ಪತ್ತು ವಿದ್ಯಾರ್ಥಿಗಳಿಗೆ ಒಬ್ಬ ಸಹಾಯಕ ಮೇಲ್ವಿಚಾರಕರು ಇರಬೇಕು ಎಂದೂ

[64] Lala Ralla Ram, the critic, should not be confused with the Lala Ralla Ram who served on the Managing Committee, worked in Lahore, represented the LudhiansSamaj and was a close associate of the Lal Chand Group.

[65] Quotes given below from Proceedings DAVC society, January 31, 1889.

ಆಗ್ರಹಿಸಿದರು. ಲಾಲಾ ನಾರಾಯನ್‌ದಾಸ್ ಮತ್ತು ರಾಯ್ ಗಂಗಾರಾಮ್ ಇಬ್ಬರೂ ಮೇಲಿನ ಸೂಚನೆಯನ್ನು ತಿದ್ದುಪಡಿ ಮಾಡಿದರು, ಅವರ ಅಭಿಪ್ರಾಯ ಈ ಕೆಳಗಿನಂತಿತ್ತು : "ಝೇಲಮ್ ಸಮಾಜದ ಸದಸ್ಯರು ಏನು ಪ್ರಸ್ತಾಪಗಳನ್ನು ಮಾಡಿದ್ದಾರೋ ಅವುಗಳನ್ನು ಚರ್ಚಿಸಲು ವ್ಯವಸ್ಥಾಪಕ ಮಂಡಳಿ ನಿರಾಕರಿಸಬೇಕು. ಮೊದಲನೆಯದಾಗಿ ಈ ಪ್ರಸ್ತಾಪಗಳನ್ನು ಸೂಚಿಸಿದ ಪತ್ರದ ಭಾಷೆಯೇ ಸರಿಯಿಲ್ಲ. ಅಂಕೆಯಿಲ್ಲದ ಭಾಷೆಇದು. ಎರಡನೆಯದಾಗಿ, ಈ ಪ್ರಸ್ತಾಪಗಳು ವ್ಯವಸ್ಥಾಪಕ ಮಂಡಳಿಯ ಬಗ್ಗೆ ದಾಳಿಯನ್ನೇ ಮಾಡಿವೆ. ಮತ್ತು ಮೂರನೆಯದಾಗಿ ಈ ಪ್ರಸ್ತಾಪಗಳು ವ್ಯವಸ್ಥಾಪಕ ಮಂಡಳಿಗೆ ಅಪಖ್ಯಾತಿತರಲೆಂದೇ ಮಾಡಿದವುಗಳು". ಈ ತಿದ್ದುಪಡಿ 41ರಲ್ಲಿ 31 ಸ್ಥಾನಗಳನ್ನು ಪಡೆಯಿತು. ಹಾಗೂ ಸಭೆಯನ್ನು ಮುಂದೂಡಲಾಯಿತು.

ವ್ಯವಸ್ಥಾಪಕ ಮಂಡಳಿಯ ವಿರುದ್ಧ ಸಂಸ್ಕೃತದ ಪರವಾದ ಅಸ್ತ್ರವನ್ನು ಎಸೆಯುವುದು ಸಮಾಜದ ಸಭೆಗಳಲ್ಲಿ ಒಂದು ಸಾಮಾನ್ಯ ಸಂಗತಿಯಾಯಿತು. 1890ರಲ್ಲಿ ಎಲ್ಲಿಯತನಕ ಹಿಂದಿ, ಶಾಸ್ತ್ರೀಯವಾದ ಸಂಸ್ಕೃತ ಮತ್ತು ವೇದಗಳ ಕಲಿಕೆಗೆ ಉತ್ತೇಜನ ಸಿಗುವುದಿಲ್ಲವೋ ಅಲ್ಲಿಯವರೆಗೆ ಅನುದಾನಗಳನ್ನು ಅಂಗೀಕರಿಸದಂತೆ ಲಾಲಾ ಪರಮಾನಂದ್ ಪ್ರಯತ್ನಗಳನ್ನು ಮಾಡಿದರು. ಆದರೆ ಒಟ್ಟು 35 ಮತಗಳಲ್ಲಿ ಅವರು ಎರಡೇ ಮತಗಳನ್ನು ಪಡೆಯಲು ಸಾಧ್ಯವಾಯಿತು. ಲಾಲಾ ಪರಮಾನಂದ್ ಸೋಲಬೇಕಾಯಿತು. ಹೀಗೆ ಹಲವು ಬಾರಿ ಇದೇ ಪ್ರಯತ್ನಗಳು ನಡೆದು ಮತ್ತೆ ಮತ್ತೆ ಸೋತು ಹೋದರೂ, ಸೊಸೈಟಿಯ ಮೇಲೆ ಸಂಸ್ಕೃತ ಪರ ಗುಂಪುಗಳ ಒತ್ತಡ ಸಾಕಷ್ಟು ಇತ್ತು. ಜೂನ್ 1, 1890ರಲ್ಲಿ ಸೊಸೈಟಿ ಕೆಲವು ಬಗೆಯ ರಾಜಿಗಳನ್ನು ಮಾಡಬೇಕಾಯಿತು. ಕೊನೆಗೂ ಸ್ವಾಮಿ ದಯಾನಂದರ "ಸತ್ಯಾರ್ಥ ಪ್ರಕಾಶ ಮತ್ತು ಋಗ್ವೇದಾದಿ ಭಾಷ್ಯ ಭೂಮಿಕಾದ ಹಿಂದಿ ಭಾಷೆಯಲ್ಲಿರುವ ಕೆಲವು ಭಾಗಗಳನ್ನು ಅಥವಾ ಪರಿಸ್ಥಿತಿಗೆ ಅನುಗುಣವಾಗಿ ವ್ಯವಸ್ಥಾಪಕ ಮಂಡಳಿಗೆ ಸರಿಕಂಡಲ್ಲಿ ಹಲವು ಭಾಗಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ಪಠ್ಯಕ್ರಮದಲ್ಲಿ ಸೇರಿಸಬೇಕೆಂದು ನಿರ್ಣಯಿಸಲಾಯಿತು. ಹಾಗೆಯೇ ಋಗ್ವೇದಾದಿ ಭಾಷ್ಯ ಭೂಮಿಕದ ಸಂಸ್ಕೃತ ಭಾಷೆಯಲ್ಲಿರುವ ಭಾಗಗಳನ್ನು ಸೇರಿಸಬೇಕೆಂದು ನಿರ್ಣಯಿಸಲಾಯಿತು."[66] ಬಹುತೇಕ ಎಲ್ಲ ಸಂಧಾನಗಳಂತೆ ಇದೂ ಕೂಡ ಕೆಲವರನ್ನು ತೃಪ್ತಿಪಡಿಸಿತು, ಇನ್ನು ಕೆಲವರಿಗೆಅಸಮಾಧಾನವನ್ನುಉಂಟು ಮಾಡಿತು. ಹೋರಾಟ ಮುಂದುವರಿಯುತ್ತಲೇ ಹೋಯಿತು, ಆದರೆ ನಾಯಕತ್ವದಲ್ಲಿ ಒಂದು ಮಹತ್ವದ ಬದಲಾವಣೆಯಾಯಿತು. 1889ರ ಕೊನೆಯ ತಿಂಗಳುಗಳಲ್ಲಿ ಪಂಡಿತ್ ಗುರುದತ್ತ ಅವರ ಆರೋಗ್ಯ ಕೊನೆಗೂ ಬಹಳ ಬಿಗಡಾಯಿಸಿತು. 1890, ಮಾರ್ಚ್ 9ರಂದು ಅವರು ತೀರಿಕೊಂಡರು. ಆದರೆ ಈ ಸಂಸ್ಕೃತ ಪ್ರೇಮಿಗಳ ಗುಂಪಿನ ನಾಯಕನ ಸ್ಥಾನ ಬಹಳ ದಿನಗಳೇನೂ ಖಾಲಿ ಉಳಿಯಲಿಲ್ಲ. ಜಲಂಧರ್ ಸಮಾಜದ ಲಾಲಾ ಮುನ್ಶಿರಾಮ್ ಅವರು ವ್ಯವಸ್ಥಾಪಕ ಮಂಡಳಿಯನ್ನು ಟೀಕಿಸುವ ಮುಖಂಡರಾಗಿ ಕಾಣಿಸಿಕೊಂಡರು.

[66] Sri Ram Sharma, Mahatma Hans Raj, p 62

1891 ಮತ್ತು 1892ರ ಅವಧಿಯ ವಾರ್ಷಿಕ ಸಭೆಗಳಲ್ಲಿ ಲಾಲಾ ಮುನ್ಶಿರಾಮ್, ಲಾಲಾ ಪರಮಾನಂದ್ ಮತ್ತು ಲಾಲಾ ರಲ್ಲಾರಾಮ್ ಸೇರಿಕೊಂಡುಧಾರ್ಮಿಕ ವಿಷಯಗಳು ಮತ್ತು ಭಾಷಾಕಲಿಕೆಯಕುರಿತಾಗಿ ವ್ಯವಸ್ಥಾಪಕ ಮಂಡಳಿಯ ಮೇಲೆ ಮತ್ತೆ ಮತ್ತೆ ದಾಳಿ ಮಾಡಿದರು. 1891ರಲ್ಲಿ ಈ ಗುಂಪು ವೇದಿಕ್ ವಿಭಾಗವನ್ನುತೆರೆಯಬೇಕೆಂದೂ, ವಿಜ್ಞಾನ ಮತ್ತುಇಂಗ್ಲಿಷನ್ನು ಬರಿಯಐಚ್ಛಿಕ ವಿಷಯವನ್ನಾಗಿ ಮಾಡಬೇಕೆಂದೂಕರೆಕೊಟ್ಟಿತು. ಎರಡು ಸೂಚನೆಗಳಿಗೂ ಸಭೆಯಲ್ಲಿಅನುಮೋದನೆ ಸಿಗದಿದ್ದರೂ ಅವರ ಪರವಾದ ಮತಗಳು ನಿಧಾನವಾಗಿ ಹೆಚ್ಚುತ್ತಲೇ ಹೋಗಿ, ಈ ಗುಂಪಿನ ಸದಸ್ಯರ ಸಂಖ್ಯೆ ಮೂರನೆಯಒಂದು ಭಾಗದಷ್ಟುದೊಡ್ಡದಾಯಿತು.[67] 1892, ಮೇ 20ರ ಸಮಾಜದ ಸಭೆಯಲ್ಲಿ ಬಹು ಸಂಖ್ಯೆಯ ಸದಸ್ಯರು ಸೇರಿ ವ್ಯವಸ್ಥಾಪಕ ಮಂಡಳಿಯ ಸದಸ್ಯತ್ವ ಪಡೆಯಲು ಕೆಲವುಕಟ್ಟುನಿಟ್ಟಿನ ನಿಯಮಗಳನ್ನು ಹಾಕುವ ಸೂಚನೆಯೊಂದನ್ನು ಮಂಡಿಸಿದರು. ಈ ಸೂಚನೆ ಬಿದ್ದು ಹೋಯಿತಾದರೂ ಯಥಾಸ್ಥಿತಿ ಮುಂದುವರಿಯಿತು. ಜೊತೆಯಲ್ಲೇ ಘರ್ಷಣೆಗಳು ಹೆಚ್ಚಾದವು.[68] ಸಮಾಜದ ಒಳಗೆ ಹಾಗೂ ವ್ಯವಸ್ಥಾಪಕ ಮಂಡಳಿಯ ಒಳಗೆ ಅಧಿಕಾರಕ್ಕಾಗಿ ಸ್ಪರ್ಧೆ ನಡೆಯಿತು. ಅಷ್ಟೇ ಅಲ್ಲ, ಉಳಿದ ಆರ್ಯ ಸಮಾಜಗಳಲ್ಲೂ ಇದೇ ಬಗೆಯಕಿತ್ತಾಟ ನಡೆಯಿತು. 1893ರ ವೇಳೆಗೆ ಭಿನ್ನ ನಂಬಿಕೆಗಳಿಂದಾಗಿ ಯಾರನ್ನೇಆದರೂ ವೈಯಕ್ತಿಕ ನೆಲೆಯಲ್ಲಿಯಾವುದೇ ಸಂಕೋಚವಿಲ್ಲದೆ ನೇರವಾಗಿಟೀಕಿಸುವ ಮಟ್ಟಕ್ಕೆಜನ ಇಳಿದರು. ಪರೋಕ್ಷ ಟೀಕೆಗಳು ಪ್ರತ್ಯಕ್ಷ ಟೀಕೆಗಳಾದವು. ಕಾಲೇಜಿನ ಬಗ್ಗೆ ಆರ್ಯ ಸಮಾಜಿಗಳಿಗೆ ಎಷ್ಟೇ ನಿಷ್ಠೆ ಇದ್ದರೂ ಸದ್ಯಕ್ಕೆಎರಡು ಗುಂಪಿನವರ ಸಿಟ್ಟನ್ನು ಶಮನ ಮಾಡುವಲ್ಲಿ ಈ ನಿಷ್ಠೆ ಸಾಲದೆ ಹೋಯಿತು.

1893, ಮೇ 27ರ ಸಮಾಜ ಸಭೆಆರಂಭವಾದದ್ದೇ ವ್ಯವಸ್ಥಾಪಕ ಮಂಡಳಿಯ ಟೀಕೆಯ ಮೂಲಕ. “ಮಂಡಳಿಯು ಬಹಳ ಸಡಿಲವಾಗಿರುವ, ಒಡ್ಡೊಡ್ಡಾಗಿರುವ ನಿಯಂತ್ರಣವಿಲ್ಲದ ಸದಸ್ಯರನ್ನು ಹೊಂದಿದೆ. ಈ ಸದಸ್ಯರು ಸಾಮಾನ್ಯ ದೃಷ್ಟಿಕೋನದಿಂದ ನೋಡಿದರೂ ಅಥವಾ ಅವರ ಶಿಕ್ಷಣದ ಯೋಗ್ಯತೆಯ ದೃಷ್ಟಿಯಿಂದ ನೋಡಿದರೂ ಅಥವಾ ಅವರ ಶೀಲದ ದೃಷ್ಟಿಯಿಂದ ನೋಡಿದರೂ ಇವರೆಲ್ಲ ಬೇರೆಯವರಲ್ಲಿಆತ್ಮವಿಶ್ವಾಸವನ್ನು ಹುಟ್ಟಿಸಲು ಅಸಮರ್ಥರಾಗಿದ್ದಾರೆ”

---

[67] The core of the Munshi Ram Sanskritist faction was made up of: Lala Ralla Ram, Jhelum; Durga Prasad, Lahore; Jewan Das, Lahore; Lala Parmanand, Lahore; Pandit Dharm Chand, Amritsar; Janmejaya, Jullundur; Ram Krishna, Jullundur; Lala Dev Raj, Jullundur; Lala Jaya Chandra, Lahore; Kedar Nath Thapar, Lahore; and Lala Kushi Ram, Lahore; plus Lala Chetanand, Multan Leadership in the meetings tended to be in the hands of Lalas Munshi Ram, Parmanand and Ralla Ram, while centers of regional strength could be found in Jullundur, Jhelum, Gujranwala and part of the Lahore Samaj, see proceedings DAVC Society May 30, 1891, College report 1891-92, pp 9-11.

[68] See Proceedings DAVC society May 20, 1892

ಎಂಬ ಟೀಕೆಯನ್ನು ಎದುರಿಸಬೇಕಾಗಿ ಬಂತು.[69] ಸಭೆಯ ನಡಾವಳಿಯೇ ಮೀಟಿಂಗಿನ ಉಳಿದ ಭಾಗವನ್ನು ವಿವರಿಸುತ್ತದೆ:

"ಲಾಲಾ ತೋಲಾರಾಮ್ ತಾವು ಮುಖ್ಯವಾದ ಸೂಚನೆಯೊಂದನ್ನು ಮಂಡಿಸುತ್ತಾ ತಾನು ಮುಂದೆ ಸೂಚಿಸಲಿರುವ ಷರತ್ತನ್ನು ನಡಾವಳಿಯ ವರದಿಯಲ್ಲಿ ಸೇರಿಸಬೇಕು ಎಂದು ಆಗ್ರಹಿಸಿದರು. ಅವರು ಹೇಳಿದ್ದೇನೆಂದರೆ ಕೆಲವೊಂದು ಧಾರ್ಮಿಕ ಗ್ರಂಥಗಳನ್ನು ಕಾಲೇಜಿನಲ್ಲಿ ಹೇಳಿ ಕೊಡಲಾಗುತ್ತಿರುವುದೇನೋ ಹೌದು. ಆದರೆ ಒಂದು ಶಿಸ್ತುಬದ್ಧವಾದ ಧಾರ್ಮಿಕ ತರಬೇತಿ ನಡೆಯುತ್ತಿಲ್ಲ ಎಂದು ಅವರು ಆಪಾದಿಸಿದರು. ಅನೇಕ ಸರಣಿ ಮತಗಳ ಮೂಲಕ ವ್ಯವಸ್ಥಾಪಕ ಮಂಡಳಿಗೆ ವಿರುದ್ಧವಾಗಿರುವ ಗುಂಪು ಸೂಚಿಸಿದ ಎಲ್ಲ ತಿದ್ದುಪಡಿಗಳನ್ನೂ ರದ್ದು ಮಾಡಲಾಯಿತು. ಧಾರ್ಮಿಕ ಪ್ರೇಮಿಗಳ ಗುಂಪು ಒಮ್ಮೆಗೆ ಸೋಲನ್ನು ಉಂಡಿತು. ಎರಡನೆಯದಾಗಿ ವ್ಯವಸ್ಥಾಪಕ ಮಂಡಳಿಯ ಸದಸ್ಯತ್ವದ ಬಗ್ಗೆ ಇನ್ನೊಂದು ಹೋರಾಟ ಆರಂಭವಾಯಿತು. ಇದರಲ್ಲೂ ಹೆಚ್ಚಿನ ಮತಗಳು ವ್ಯವಸ್ಥಾಪಕ ಮಂಡಳಿಯ ಪರವಾಗಿಯೇ ಬಂತು. ವ್ಯವಸ್ಥಾಪಕ ಮಂಡಳಿಯ ಸದಸ್ಯರಾಗಿ ಮಂಡಳಿಯನ್ನು ಪ್ರತಿನಿಧಿಸಬೇಕಾದರೆ ಕನಿಷ್ಟ ಪಕ್ಷ 1000 ರೂಪಾಯಿಗಳ ಠೇವಣಿಯ ಮಟ್ಟವನ್ನು ಸದಾ ಕಾಪಾಡಬೇಕು ಎನ್ನುವುದು ಮಂಡಳಿಯ ಅಪೇಕ್ಷೆಯಾಗಿತ್ತು. ಹೀಗೆ ಅನುಕ್ರಮವಾಗಿ ಎಲ್ಲ ವಿಷಯಗಳಲ್ಲೂ ಸೋತ ಮೇಲೆ ಸಂಸ್ಕೃತ ಪ್ರೇಮಿಗಳು ಮುಂದಿನ ಸಭೆಯನ್ನು ಒಂದು ವರ್ಷದವರೆಗೆ ಮುಂದೂಡಬೇಕೆಂದು ಕೇಳಿಕೊಂಡರು. ಈ ಗುಂಪು ಈ ವಿಷಯದಲ್ಲೂ ಸೋತು ಹೋಗುವುದರೊಂದಿಗೆ ಚರ್ಚೆ ಪ್ರಜಾಪ್ರಭುತ್ವದ ಎಲ್ಲೆಯನ್ನು ಮೀರಿ ಬಹಳ ಕಹಿಯಾದ ವೈಯಕ್ತಿಕ ಜಗಳದ ಮಟ್ಟವನ್ನು ತಲುಪಿತು. "ಲಾಲಾ ಅಮೋಲ್ಕ್ಯಾಮ್‌ಅಂತೂ ಯಾರೋ ಒಬ್ಬರ ಟೀಕೆಗೆ ಉತ್ತರವಾಗಿ ಈ ಸಲಹೆಗಳೆಲ್ಲ ಕೆಟ್ಟ ಉದ್ದೇಶದಿಂದಲೇ ಮಾಡಿದವು (ಅಲ್ಲ) ಎಂದು ಹೇಳಿದರು. ರಾಯ್‌ಝಾದಾ ಭಗತ್‌ರಾಮ್ ಅವರು 'ಲಾಲಾ ಅಮೋಲ್ಕ್ಯಾಮ್ ಅವರು ಹೇಳಿದ ಮಾತು ಅವರ ಮಟ್ಟಿಗೆ ನಿಜ ಇರಬಹುದು, ಆದರೆ ಬೇರೆ ಅನೇಕರು ಕೆಟ್ಟ ಉದ್ದೇಶದಿಂದಲೇ ಮತ ಚಲಾಯಿಸಿದವರೂ ಇದ್ದಾರೆ ಎಂಬುದಾಗಿ ಹೇಳಿದರು. ಅಷ್ಟೇ ಅಲ್ಲ, ಸಭೆಯ ನಡಾವಳಿಗಳನ್ನು ಪ್ರಾಮಾಣಿಕವಾಗಿ ನಡೆಸಲಿಲ್ಲ ಎಂದೂ ಹೇಳಿದರು. ಕೆಲವು ಸದಸ್ಯರು ಈ ಅಂಶದ ಬಗ್ಗೆ ಅವರ ಗಮನವನ್ನು ಸೆಳೆದಾಗ, ಭಗತ್‌ರಾಮ್‌ಅವರು ಪುನಃ 'ನಾನು ಈ ಟೀಕೆಗಳನ್ನು ಮತ್ತೆ ಉಚ್ಚರಿಸುತ್ತೇನೆ' ಎಂದು ಹೇಳಿದರು. ಇದು ಒಂದು ರೀತಿಯಲ್ಲಿ ಒಬ್ಬ ನಿರ್ದಿಷ್ಟ ವ್ಯಕ್ತಿಯ ಬಗೆಗಲ್ಲದೆ, ಇಡಿಯ ಸಮಾಜದ ಮೇಲೆ ಅಗೌರವವನ್ನು ಪ್ರತಿಫಲಿಸಿದಂತಾಯಿತು ಎಂಬ ಅರ್ಥದಲ್ಲಿ ಹೆಚ್ಚಿನ ಸದಸ್ಯರು ನಾಚಿಕೆಗೇಡು! ನಾಚಿಕೆಗೇಡು! ಎಂದು ಕೂಗಿದರು." ಹೀಗೆ ಒಂದು ಬಗೆಯ ದ್ವೇಷ ಒಮ್ಮೆಲೇ ಉಕ್ಕಿದ್ದರಿಂದ ಸಂಧಾನವಾಗುವ ಎಲ್ಲ ಆಶಾಭಾವನೆಯೂ ಅಲ್ಲಿಗೆ ಕೊನೆಯಾಯಿತು, "ಲಾಲಾ ಮುನ್ಶಿರಾಮ್ ಆಮೇಲೆ ಎದ್ದು ನಿಂತು ಈ ರೀತಿ

[69] Quotes given below from Proceedings DAVC society May 27, 1893

ಹೇಳಿದರು, 'ನೀವು ನಮ್ಮನ್ನು ಸಮಾಜದಿಂದ ಹೊರಗೆದೂಡಬಹುದು, ನೀವು ನಮ್ಮನ್ನು ಈ ಕಟ್ಟಡದಿಂದ ಹೊರ ಹಾಕಬಹುದು. ಆದರೆ ನಮ್ಮ ಹೃದಯದೊಳಗಿರುವ ವೇದಗಳ ಮೇಲಿನ ಪ್ರೀತಿಯಿಂದ ನಮ್ಮನ್ನು ನೀವು ವಂಚಿಸಲಾರಿರಿ' ಎಂದು ನುಡಿದರು. ಈ ಮಾತುಗಳನ್ನು ಹೇಳಿದ ಅವರು ಉಳಿದ ಅನೇಕ ಸದಸ್ಯರ ಜೊತೆಗೆ ಸಭೆಯನ್ನು ಬಹಿಷ್ಕರಿಸಿ ಹೊರ ನಡೆದರು. ಅವರಲ್ಲಿ ಹೆಚ್ಚಿನವರು ಜಲಂಧರ್ ಸಮಾಜಕ್ಕೆ ಸೇರಿದವರು. ಲಾಹೋರ್ ಸಮಾಜದ ಲಾಲಾ ದುರ್ಗಾ ಪ್ರಸಾದ್, ಲಾಲಾ ಖುಶಿ ರಾಮ್ ಮತ್ತು ಇನ್ನು ಕೆಲವರುಅವರನ್ನು ಅನುಸರಿಸಿದರು. ಅವರು ನಿರ್ಗಮಿಸಿದ ಬಳಿಕ ಸಮಾಜದ ಸದಸ್ಯರ ಮತಚಲಾವಣೆಯನ್ನು ನಿಯಂತ್ರಿಸುವ ದೃಷ್ಟಿಯಿಂದ ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು."

ಮುನ್ಶಿರಾಮ್ ಹೊರ ನಡೆದದ್ದರಿಂದ ಈಗ ವ್ಯವಸ್ಥಾಪಕ ಮಂಡಳಿ ಎಲ್ಲವನ್ನೂ ಪೂರ್ತಿಯಾಗಿ ತನ್ನ ಕೈಗೆ ತೆಗೆದುಕೊಂಡಿತು. ಮುಂದಿನ ಸಭೆಯಲ್ಲಿ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ವಿರೋಧಿ ಬಣ ಇನ್ನೊಮ್ಮೆ ಪ್ರಯತ್ನಿಸಿದರೂ ಸಹ ಹೆಚ್ಚೇನೂ ಉಪಯೋಗವಾಗಲಿಲ್ಲ. 1893-1894ರ ವರ್ಷದಲ್ಲಿ ಲಾಹೋರ್‌ನಲ್ಲಿ ಆರಂಭವಾದ ಬರಿಯ 16 ವಸಂತಗಳನ್ನು ಕಂಡ ಪಂಜಾಬ್ ಆರ್ಯ ಸಮಾಜದ ಒಗ್ಗಟ್ಟು ಮುಗಿದು ಹೋಯಿತು. ಪಂಜಾಬ್ ಆರ್ಯ ಸಮಾಜದ ಕ್ಷಿಪ್ರ ಯಶಸ್ಸು, ಅದರ ಅತಿ ವೇಗದ ವಿಸ್ತರಣೆ ಮತ್ತು ಸೈದ್ಧಾಂತಿಕ ಬೆಳವಣಿಗೆ ಎಲ್ಲ ಸೇರಿ ಹಲವು ಬಗೆಯ ಸಂಘರ್ಷಗಳು ಹುಟ್ಟಿಕೊಂಡು ಹಳೆಯ ಸಮಾಜದ ರಚನೆಯೊಳಗೆ ಅದನ್ನು ನಿಭಾಯಿಸುವುದು ಕಷ್ಟವಾಯಿತು.

ಈ ಭಿನ್ನಾಭಿಪ್ರಾಯ ಬರುವುದಕ್ಕೆ ಮೊದಲಿನ ವರ್ಷಗಳಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸುತ್ತಾ ಬಂದಾಗಲೂ ಆರ್ಯರು ಅನೇಕ ಸವಾಲುಗಳನ್ನು ಎದುರಿಸುತ್ತಲೇ ಬಂದಿದ್ದರು. ಸಮಾಜ ಹುಟ್ಟಿಕೊಂಡಾಗ ದಯಾನಂದರ ದರ್ಶನಗಳಿಗೆ ಒಂದು ಮೂರ್ತರೂಪದ ಅಭಿವ್ಯಕ್ತಿ ಬಂತು. ಆರ್ಯ ಸಮಾಜಿಗಳೂ ಇದನ್ನು ಒಪ್ಪಿಕೊಂಡು ಮರುವ್ಯಾಖ್ಯಾನ ಮಾಡಿ ವಿಸ್ತರಿಸಿದರು. ಈ ಮೂಲಕ ಬಹಳ ಸಂಕೀರ್ಣವಾದ ಸಿದ್ಧಾಂತವೊಂದನ್ನು ಆರ್ಯ ಸಮಾಜದಲ್ಲಿನ ಚಿಂತಕರು ಸೃಷ್ಟಿಸಿದರು. ಆರ್ಯರು ತಮ್ಮನ್ನು ಹಾಗೂ ತಮ್ಮ ಸಿದ್ಧಾಂತಗಳನ್ನು ಹೊರ ಪ್ರಪಂಚದ ಜೊತೆಗಿನ ಪರಸ್ಪರ ಕ್ರಿಯೆ-ಪ್ರತಿಕ್ರಿಯೆಗಳ ಮೂಲಕವೇ ಸಾಬೀತು ಪಡಿಸಬೇಕಾಯಿತು. ಹಿಂದೂ ಸಂಪ್ರದಾಯವಾದದ ಜೊತೆಗೆ ತಮ್ಮ ಸಂಬಂಧ ಏನು ಎಂಬ ಬಹಳ ಮೂಲಭೂತವಾದ ಪ್ರಶ್ನೆಯನ್ನು ಅವರು ಎದುರಿಸಬೇಕಾಯಿತು. ಎಂದಿನಿಂದ ಆರಂಭವಾಗಿದ್ದ ಸಂಪ್ರದಾಯಗಳ ಪ್ರಪಂಚ ಮತ್ತು ಅದನ್ನು ತಮ್ಮ ಪರಿಕಲ್ಪನೆಗೆ ಅನುಗುಣವಾಗಿ ರೂಪಿಸುವ ಅಗತ್ಯ ಎರಡನ್ನೂ ಅವರು ಸರಿತೂಗಿಸಬೇಕಾಯಿತು. ಹಿಂದೂ ಸಮುದಾಯದ ಒಳಗೂ ಮತ್ತು ಅದರಾಚೆಗೂ ಇರುವ ಈ ರೀತಿಯ ಕೊಡುಕೊಳ್ಳುವಿಕೆಯ ಪ್ರಕ್ರಿಯೆಯಿಂದಾಗಿ ಆರ್ಯ ಸಮಾಜಿಗಳ

ಮಧ್ಯೆ  ನ್ನಷ್ಟು ಭಿನ್ನಭಿಪ್ರಾಯಗಳು ಹೆಚ್ಚಾಗುತ್ತಾ ಬಂದವು. ಕೊನೆಗೂ 1893-1894ರಲ್ಲಿ ಸಮಾಜದ ವಿಭಜನೆಯಾಯಿತು.

*********

---

[i] **ಗೊಟ್ಟಿಲಿಬ್ ವಿಲ್‌ಹೆಲ್ಮ್ ಲೇಟ್ನರ್** ಒಬ್ಬ ಬ್ರಿಟಿಷ್ ವಿದ್ವಾಂಸನಾಗಿದ್ದ. ಪೌರ್ವಾತ್ಯ ಪರಿಕಲ್ಪನೆಗಳ ಬಗ್ಗೆ ಪರಿಣತನಾಗಿದ್ದ. ಇವನು ಲಂಡನ್‌ನ ಕಿಂಗ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದ. ಹಂಗೆರಿಯಲ್ಲಿ ಹುಟ್ಟಿದ ಲೇಟ್ನರ್‌ಗೆ 50 ಭಾಷೆಗಳು ಬರುತ್ತಿದ್ದುವಂತೆ. ಕಾನ್‌ಸ್ಟಾಂಟಿನೋಪಲ್‌ಗೆ ಹೋಗಿ ಟರ್ಕಿ ಮತ್ತು ಅರೇಬಿಕ್ ಭಾಷೆಗಳನ್ನು ಕಲಿತು ತನ್ನ 23ನೆಯ ವರ್ಷಕ್ಕೆ ಲಂಡನ್‌ನ ಕಿಂಗ್ಸ್ ಕಾಲೇಜಿನಲ್ಲಿ ಅರೇಬಿಕ್ ಮತ್ತು ಮುಸ್ಲಿಮ್ ಕಾನೂನನ್ನು ಬೋಧಿಸುವ ಪ್ರೊಫೆಸರ್ ಆಗಿ ನೇಮಕಗೊಂಡ. 1864 ರಲ್ಲಿ ಲಾಹೋರಿನ ಗವರ್ನ್ಮೆಂಟ್ ಕಾಲೇಜ್ ಯೂನಿವರ್ಸಿಟಿಯ ಪ್ರಾಂಶುಪಾಲನಾಗಿ ಕೆಲಸ ಮಾಡಿ ಪಂಜಾಬ್ ವಿಶ್ವ ವಿದ್ಯಾಲಯದ ಸ್ಥಾಪನೆಯಲ್ಲಿ ಮುಖ್ಯ ಪಾತ್ರ ವಹಿಸಿದ- ಅನುವಾದಕರು.